ಸಾ. ಕೃ. ರಾಮಚಂದ್ರರಾವ್

ಶ್ರೀ ರಾಮಕೃಷ್ಣ ಪರಮಹಂಸರ ಮಾತುಕತೆಗಳು

ಅಂಕಿತ ಪುಸ್ತಕ

ಅಂಕಿತ ಪುಸ್ತಕದ ೧೮೩ನೆಯ ಪ್ರಕಟಣೆ

ಶ್ರೀ ರಾಮಕೃಷ್ಣ ಪರಮಹಂಸರ ಮಾತುಕತೆಗಳು

ಸಾ. ಕೃ. ರಾಮಚಂದ್ರರಾವ್

ಅಂಕಿತ ಪುಸ್ತಕ
(ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು)
53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ
ಬಸವನಗುಡಿ, ಬೆಂಗಳೂರು - 560 004
☎ 080 - 2661 7100 / 2661 7755 (O) 2652 6134 (R)

SRI RAMAKRISHNA PARAMAHAMSARA MATUKATHEGALU
—by Prof. S. K. Ramachandra Rao, Published by Ankita Pustaka, 53, Shamsingh Complex, Gandhi Bazar Main Road, Basavanagudi, Bangalore - 560 004. ☎ 080 - 2661 7100 / 2661 7755

Price : Rs. 60/- Pages: 128

© ಲೇಖಕರದು

ಮೊದಲನೆ ಮುದ್ರಣ: 2005

ಬೆಲೆ : ರೂ. 60/-

ಮುಖಪುಟ ಚಿತ್ರ : ಸಾ. ಕೃ. ರಾಮಚಂದ್ರರಾವ್
ವಿನ್ಯಾಸ : ಮಂಜು

ಒಳಪುಟ ರೇಖಾಚಿತ್ರಗಳು: ಸಾ. ಕೃ. ರಾಮಚಂದ್ರರಾವ್

ಅಕ್ಷರ ಜೋಡಣೆ: ಶ್ರೀಧರ್

ಪ್ರಕಾಶಕರು
ಅಂಕಿತ ಪುಸ್ತಕ
53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್
ಗಾಂಧಿಬಜಾರ್ ಮುಖ್ಯರಸ್ತೆ
ಬಸವನಗುಡಿ, ಬೆಂಗಳೂರು - 560 004
☎ 2661 7100 (O) 2652 6134 (R)

ಲಕ್ಷ್ಮಿ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

ಬಿನ್ನಹ

ನಾನು ೧೯೪೮ರ ಸುಮಾರಿನಲ್ಲಿ ಕಲ್ಕತ್ತೆಗೆ ಮೊಟ್ಟಮೊದಲ ಬಾರಿಗೆ ಹೋದಾಗ, ಅಲ್ಲಿ ಕಾಲೇಜ್ ಚೌಕದಲ್ಲಿರುತ್ತಿದ್ದ ಹಳೆಯ ಬಂಗಾಳಿ ಪುಸ್ತಕಗಳ ಹತ್ತಾರು ಅಂಗಡಿಗಳಿಗೆ ಹೋಗಿ ಬರುತ್ತಿದ್ದೆ. ಶ್ರೀ ರಾಮಕೃಷ್ಣರನ್ನು ಕುರಿತಂತೆ ಹಲವು ಪುಸ್ತಕಗಳನ್ನೂ ಸಂಗ್ರಹಿಸಿದೆ. ಅವುಗಳಲ್ಲಿ ಕೆಲವು ತುಂಬ ಮೌಲಿಕವಾದುವು. ಅಲ್ಲಿನ ಸಂಗತಿಗಳು ಈವರೆಗೆ ಇಂಗ್ಲೀಷಿನಲ್ಲಾಗಲಿ ಬೇರೆ ಯಾವ ಭಾಷೆಯಲ್ಲಾಗಲಿ ಬಂದಿಲ್ಲ. ಈ ಸಾಮಗ್ರಿಯನ್ನು ಕನ್ನಡದಲ್ಲಿ ತರಬೇಕೆಂದು ಆಗಲೇ ತೀರ್ಮಾನಿಸಿದೆ. ಆದರೆ ಈ ಹಂಬಲ ಕೈಗೂಡಿದ್ದು ಈಗ, ೨೦೦೫ರಲ್ಲಿ! ಏನೋ ಒಂದು ರೂಪ ಬಂದಿದೆ. ಇದಕ್ಕೆ ನೆರವಾದವರಿಗೆಲ್ಲ ನನ್ನ ನಮನಗಳು. ದೇವರು ಕೃತನಿಶ್ಚಯನೂ ಹೌದು, ಸಿದ್ಧಸಂಕಲ್ಪನೂ ಹೌದು.

ಶ್ರೀ ರಾಮಕೃಷ್ಣರೊಂದಿಗೆ ಹತ್ತಿರದ ಒಡನಾಟವನ್ನು ಪಡೆದುಕೊಂಡಿದ್ದ ಹಲವರು ತಮ್ಮ ಬರಹಗಳನ್ನೂ ನೆನಪುಗಳನ್ನೂ ಉಳಿಸಿ ಹೋಗಿರುವುದೊಂದು ನಮ್ಮ ಪುಣ್ಯ. ನಿದರ್ಶನಕ್ಕೆ, ಕೇಶವಚಂದ್ರಸೇನರು 'ಪರಮಹಂಸೇರ ಉಕ್ತಿ', ೧೮೭೮ ಮತ್ತು ಸೇವಕ ರಾಮಚಂದ್ರ ದತ್ತ ಪ್ರಣೀತ 'ಜೀವನ ವೃತ್ತಾಂತ' (ಬ್ರಾಹ್ಮೋ ಪತ್ರಿಕೆಗಳಲ್ಲಿ ಲೇಖನಗಳು, ೧೮೮೬), ರಾಮಚಂದ್ರ ದತ್ತ ('ಶ್ರೀ ರಾಮಕೃಷ್ಣ ಪರಮಹಂಸ ದೇವೇರ ಜೀವನ ವೃತ್ತಾಂತ' ೧೮೯೦), ಸುರೇಶಚಂದ್ರ ದತ್ತ ('ಶ್ರೀ ರಾಮಕೃಷ್ಣ ದೇವೇರ ಉಪದೇಶ') ಶಶಿಭೂಷಣ ಘೋಷ್ ('ಶ್ರೀ ರಾಮಕೃಷ್ಣ ಪರಮಹಂಸ ದೇವ'), ದೇವೇಂದ್ರನಾಥ ಬಸು, ಕಮಲಕೃಷ್ಣ ಮಿತ್ರ ('ಶ್ರೀ ರಾಮಕೃಷ್ಣ ಓ ಅಂತರಂಗ ಪ್ರಸಂಗ'), ವೈಕುಂಠನಾಥ ಸನ್ಯಾಲ್ ('ಶ್ರೀ ರಾಮಕೃಷ್ಣ ಲೀಲಾಮೃತ'), ಅಕ್ಷಯಕುಮಾರಸೇನ ('ಶ್ರೀ ರಾಮಕೃಷ್ಣ ಲೀಲಾಮೃತ'), ಶಶಿಭೂಷಣ ಸಾಮಂತ ('ಶ್ರೀ ದಕ್ಷಿಣೇಶ್ವರ ಮಹಾತೀರ್ಥೇ ಶ್ರೀ ರಾಮಕೃಷ್ಣ ದೇವೇರ ಲೀಲಾತತ್ತ್ವ'), ಮಹೇಂದ್ರನಾಥ ಗುಪ್ತ ('ಮ', ಮಾಸ್ಟರ್ ಮಹಾಶಯ) ('ಶ್ರೀ ಪರಮಹಂಸ ದೇವೇರ ಉಕ್ತಿ' ೧೮೯೨; ದಿನಚರಿಯ ದಾಖಲೆಗಳಿಂದ 'ಕಥಾಮೃತ' ೧೮೯೭), ಗುರುದಾಸ ಬರ್ಮನ್ (ಪ್ರಿಯನಾಥ ಸಿನ್ಹ, 'ಶ್ರೀ ರಾಮಕೃಷ್ಣ ಚರಿತ' ೧೮೭೯ ಸುಮಾರಿಗೆ) ಲಕ್ಷ್ಮೀಮಣಿದೇವಿಯ 'ಸ್ಮೃತಿ',

ಕಾಳೀಕೃಷ್ಣಾನಂದಗಿರಿ ('ಶ್ರೀ ರಾಮಕೃಷ್ಣ ಶ್ರೀ ಗುರು ಭೈರವೀ ಯೋಗೇಶ್ವರಿ') ಇವೇ ಮೊದಲಾದುವು.

ಈಚೆಗೆ ಸ್ವಾಮಿ ಚೇತನಾನಂದರು (ಸೆಂಟ್ ಲೂಇ ವೇದಾಂತ ಸೊಸೈಟಿ, God Lived With Them, ೧೯೯೭) ಸ್ವಾರಸ್ಯವಾದ ಸಂಗ್ರಹವೊಂದನ್ನು ಹೊರತಂದಿದ್ದಾರೆ. ಬಂಗಾಳಿ ಮೂಲದ ಹಲವಾರು ಸಂಗತಿಗಳು ಇದರಲ್ಲಿ ಅಡಕವಾಗಿವೆ. ಆದರೆ ಮೂಲ ಮಾತುಗಳ ಸೊಗಡು, ಸ್ವಾರಸ್ಯ, ಸೌಂದರ್ಯಗಳು ಕಾಣಿಸುವುದಿಲ್ಲ. ಶ್ರೀ ರಾಮಕೃಷ್ಣರ ಭಾಷೆ ಅತ್ಯಂತ ಸರಳ, ತಿಳಿ, ನೇರ; ಗ್ರಾಮ್ಯವೂ ಹೌದು. ಬೇರೆ ಭಾಷೆಯಲ್ಲಿ ಇವು ಮರೆಯಾಗುವುದು ಸಹಜವೇ. ಚೇತನಾನಂದರ ಸಂಗ್ರಹದಲ್ಲಿ ಹದಿನಾರು ಮಂದಿ ನೇರ ಶಿಷ್ಯರ ಅನುಭವಗಳಿವೆ. ಇವರೆಲ್ಲ ಮುಂದೆ ಸ್ವಾಮಿ ವಿವೇಕಾನಂದರ ನೇತೃತ್ವದಲ್ಲಿ ಸಂನ್ಯಾಸಿಗಳಾದವರು. ಶ್ರೀ ರಾಮಕೃಷ್ಣರ ಜೀವಿತ ಕಾಲದಲ್ಲಿ ಇವರು ಎಲ್ಲರೂ ಗೃಹಸ್ಥರೇ, ಲೌಕಿಕರೇ. ನಾನು ಮೇಲೆ ಕಾಣಿಸಿರುವ ಹಲವು ಮಂದಿ ಬರಹಗಾರರು ಇವರ ಸಂಗ್ರಹದಲ್ಲಿ ಅದೇನು ಕಾರಣವೋ ಸೇರಲಿಲ್ಲ.

ಬಂಗಾಳಿ ಬರಹಗಳನ್ನೇ ಆಧಾರವಾಗಿರಿಸಿಕೊಂಡು ಈ ಸಣ್ಣ ಹೊತ್ತಿಗೆಯನ್ನು ಹೊರತಂದಿದ್ದೇನೆ. ಶ್ರೀ ರಾಮಕೃಷ್ಣರದ್ದೆಂದು ಪ್ರಚಲಿತವಾದ ಅಭಿಪ್ರಾಯಗಳಿಗೂ ಇಲ್ಲಿ ಕಾಣಿಸುವ ಅಭಿಪ್ರಾಯಗಳಿಗೂ ಅನೇಕ ಕಡೆ ಅಂತರ ಇರುವುದನ್ನು ಗಮನಿಸಬಹುದು. ಇದರ ವಿಚಾರವಾಗಿ ಚರ್ಚೆಮಾಡಲು ನಾನು ಹೊರಟಿಲ್ಲ. ಇದನ್ನು ಕುರಿತಂತೆ ಈಗಾಗಲೇ ಭಿನ್ನಾಭಿಪ್ರಾಯಗಳು ಬಯಲಾಗಿವೆ. ವರ್ಷ, ಮಾಸ, ದಿನಾಂಕಗಳ ವಿಚಾರವಾಗಿಯೂ ಒಮ್ಮತವಿರದು. ನನಗೆ ಸರಿಯೆಂದು ಕಂಡುದನ್ನು ಬಂಗಾಳಿ ಪಂಚಾಂಗದಿಂದ ನಿರ್ಧರಿಸಿಕೊಂಡಿದ್ದೇನೆ.

ತೀರ ಅಸ್ವಸ್ಥನಾಗಿ ಮಲಗಿರುವಾಗ ಬರೆದ ಪುಸ್ತಕ ಇದು. ತಪ್ಪುಗಳು ನುಸುಳಿಕೊಂಡಿರುವುದು ಸಾಧ್ಯ. ಸಹೃದಯರು ಮನ್ನಿಸಬೇಕು. ನನ್ನ ಮೇಲಣ ಪ್ರೀತಿಯಿಂದ ಇದನ್ನು ಪ್ರಕಾಶಪಡಿಸಲೊಪ್ಪಿ ಉಪಕರಿಸಿರುವ ಮಿತ್ರರು 'ಅಂಕಿತ ಪುಸ್ತಕ'ದ ಶ್ರೀ ಪ್ರಕಾಶ್ ಕಂಬತ್ತಳ್ಳಿ. ಅವರಿಗೆ ನನ್ನ ಕೃತಜ್ಞತೆಯ ಹೂಮಾಲೆಯನ್ನು ತೊಡರಿಸುತ್ತೇನೆ.

ಸಾ. ಕೃ. ರಾಮಚಂದ್ರರಾವ್

ಶ್ರೀ ಕಾಳಿ ಜಗನ್ಮಾತೆ



ಶ್ರೀ ರಾಮಕೃಷ್ಣ ಪರಮಹಂಸರು

ಶ್ರೀ ರಾಮಕೃಷ್ಣ ಪರಮಹಂಸರ
(ಠಾಕುರರ)

ಜೀವನ ವೃತ್ತಾಂತ ಸಂಗ್ರಹ

೧೭೮೦-೮೧ ಕ್ಷುದಿರಾಮ ಚಟ್ಟೋಪಾಧ್ಯಾಯರ ಜನ್ಮ. (ಠಾಕುರರ ತಂದೆ) ಮಣಿರಾಮ ಚಟ್ಟೋಪಾಧ್ಯಾಯರ ನಾಲ್ವರು ಗಂಡು ಮಕ್ಕಳಲ್ಲಿ ಹಿರಿಯರು; ವೈಷ್ಣವ ಮನೆತನ; ಮನೆಯವರೆಲ್ಲ ಶ್ರೀರಾಮಭಕ್ತರು; ಆಚಾರಶೀಲರು. ಪೌರೋಹಿತ್ಯವನ್ನೊ ಅರ್ಚಕವೃತ್ತಿಯನ್ನೋ ಹಿಡಿದವರು.

೧೭೯೮-೯೯ ಚಂದ್ರಾದೇವಿಯೊಂದಿಗೆ ವಿವಾಹ; ಚಂದ್ರಮಣಿಯೆಂಬ ಹೆಸರೂ ಇದೆ. (ಠಾಕುರರ ತಾಯಿ)

೧೮೦೫ ರಾಮಕುಮಾರ ಚಟ್ಟೋಪಾಧ್ಯಾಯರ ಜನ್ಮ. (ಠಾಕುರರ ಅಣ್ಣ)

೧೮೧೦ ಕಾತ್ಯಾಯನಿಯ ಜನ್ಮ. (ಠಾಕುರರ ಅಕ್ಕ)

೧೮೧೮ ಮನೆತನ ಕಾಮಾರಪುಕುರಕ್ಕೆ ವಲಸೆ ಬಂದದ್ದು. ಕಲ್ಕತ್ತೆಯಿಂದ ೬೦ ಮೈಲಿ ದೂರದ ಹಳ್ಳಿ; ಹುಗ್ಲಿ ಜಿಲ್ಲೆಯಲ್ಲಿ. ಜಗನ್ನಾಥಪುರಿಗೆ ದಾರಿಯಲ್ಲಿ.

೧೮೨೪ ಕ್ಷುದಿರಾಮರ ರಾಮೇಶ್ವರ ಯಾತ್ರೆ.

೧೮೨೬ ರಾಮೇಶ್ವರ ಚಟ್ಟೋಪಾಧ್ಯಾಯರ ಜನ್ಮ. (ಠಾಕುರರ ಅಣ್ಣ)

೧೮೩೫ ಕಾತ್ಯಾಯನಿಯ ಮೈಯಲ್ಲಿ ಭೂತಚೇಷ್ಟೆ; ಕ್ಷುದಿರಾಮರ ಗಯಾಯಾತ್ರೆ, ಪಿಂಡಪ್ರದಾನ; ಕ್ಷೇತ್ರದೈವ ಗದಾಧರ ಸ್ವಾಮಿಯ ಸ್ವಪ್ನಾದೇಶ.

೧೮೩೬ (ಫೆಬ್ರುವರಿ ೧ ಬುಧವಾರ. ಫಾಲ್ಗುಣ ೧೩) ಶ್ರೀ ರಾಮಕೃಷ್ಣರ ಆವಿರ್ಭಾವ. ಗದಾಧರ ಚಟ್ಟೋಪಾಧ್ಯಾಯ; ಮುದ್ದಿಗೆ ತಂದೆ

'ರಾಮಕೃಷ್ಣ ಬಾಬು' ಎಂದು ಕರೆಯುತ್ತಿದ್ದರು. ಅಂಬಿಕಾ ಆಚಾರ್ಯ ಮತ್ತು ನಾರಾಯಣ ಜ್ಯೋತಿಭೂಷಣರಿಂದ ಜಾತಕ ನಿರ್ಮಾಣ.

೧೮೩೯ ಸರ್ವಮಂಗಳೆಯ ಜನ್ಮ. (ಠಾಕುರರ ತಂಗಿ)

೨

೧೮೪೨ ಜೂನ್ (ಜ್ಯೇಷ್ಠ ಆಷಾಢ ೧೨೪೯) ಪ್ರಥಮ ಭಾವಸಮಾಧಿ. ಕಾರ್ಮೋಡಗಳ ಮುಂದೆ ಹಾರುತ್ತಿರುವ ಬಲಾಕಪಂಕ್ತಿಯನ್ನು ನೋಡಿ.

೧೮೪೩ ಕ್ಷುದಿರಾಮರ ದೇಹತ್ಯಾಗ.

೧೮೪೪ ವಿಶಾಲಾಕ್ಷಿದೇವಿಯ ಜಾತ್ರೆಯಲ್ಲಿ ಆವೇಶ.

೧೮೪೫ ಗದಾಧರನ ಉಪನಯನ. ತಮ್ಮ ಮೈ ಗಯೆಯಿಂದಲೇ ಬಂದದ್ದು ಎಂದು ಅವರ ನಂಬಿಕೆ.

೧೮೪೬ ಫೆಬ್ರುವರಿ ೨೪ (ಫಾಲ್ಗುಣ ೧೪,೧೨೫೨) ಮನೆ ನಾಟಕದಲ್ಲಿ ಶಿವನ ಭಾವಾವೇಶ.

೧೮೪೮ ರಾಮೇಶ್ವರನ ವಿವಾಹ.

ಸರ್ವಮಂಗಳೆಯ ವಿವಾಹ.

೧೮೪೯ ರಾಮಕುಮಾರ(ಅಣ್ಣ)ನ ಮಗ ರಾಮಾಕ್ಷಯನ ಜನ್ಮ.

೧೮೫೦ ಕಲ್ಕತ್ತೆಗೆ ಬಂದು ಝಾಮಾಪುಕುರದಲ್ಲಿ ಅಣ್ಣ ರಾಮಕುಮಾರನು ಸಂಸ್ಕೃತ ಶಾಲೆಯನ್ನು (ತೋಲ್ ಖೋಲಾ) ತೆರೆದದ್ದು.

೧೮೫೩ ಠಾಕುರರು ಕಲ್ಕತ್ತೆಗೆ ಬಂದದ್ದು (೧೮೫೨); ರಾಮಕುಮಾರನೊಂದಿಗೆ ವಾಸ ಮಾಡತೊಡಗಿದ್ದು. (ಸ್ವಾಮಿ ಸುಬೋಧಾನಂದರ ತಂದೆ) ಕೃಷ್ಣದಾಸ ಘೋಷನು ಪ್ರತಿಷ್ಠೆ ಮಾಡಿಸಿದ್ದ ಸಿದ್ಧೇಶ್ವರಿ ಕಾಳಿಗುಡಿಗೆ ದಿನವೂ ಹೋಗಿಬರುವುದು. ರಾಮಕುಮಾರನಿಗೆ ಪೌರೋಹಿತ್ಯದಲ್ಲಿ ನೆರವಾಗುತ್ತಿದ್ದರು.

೧೮೫೫ ಮೇ ಠಾಕುರರು ದಕ್ಷಿಣೇಶ್ವರಕ್ಕೆ ಬಂದದ್ದು. ಕಲ್ಕತ್ತೆಗೆ ಐದಾರು ಮೈಲಿ ದೂರದಲ್ಲಿ ಗಂಗಾನದಿಯ ಪೂರ್ವದಂಡೆಯ ಮೇಲಿರುವ ವನಪ್ರದೇಶ, ಗ್ರಾಮ, ಉದ್ಯಾನ.

೧೮೫೬ ದಕ್ಷಿಣೇಶ್ವರವನ್ನು ಬಿಟ್ಟು ಕಾಮಾರಪುಕುರಕ್ಕೆ ಹೊರಡುವಾಗಲೇ ಅಣ್ಣ ರಾಮಕುಮಾರನ ದೇಹತ್ಯಾಗ. ಕಲ್ಕತ್ತೆಯ ಕೇನರಾಮ ಭಟ್ಟಾಚಾರ್ಯನಿಂದ ತಾಂತ್ರಿಕದೀಕ್ಷೆ ಪಡೆದುಕೊಂಡು, ಠಾಕುರರು ಪ್ರಧಾನಸನ್ನಿಧಿಯ ಅರ್ಚಕರಾದದ್ದು.

ಗಾತ್ರದಾಹ, ಪಾಪಪುರುಷನಾಶ, ದಿವ್ಯೋನ್ಮಾದ, ಜಗದಂಬಾ ದರ್ಶನಲಾಭ.

೧೮೫೭-೫೮ ಅಣ್ಣ ರಾಮೇಶ್ವರನ ಮಗ ರಾಮಲಾಲ (ಹಲಧಾರಿ) ರಾಧಾಕಾಂತಸ್ವಾಮಿಯ ಅರ್ಚಕನಾಗಿ ದಕ್ಷಿಣೇಶ್ವರಕ್ಕೆ ಬಂದದ್ದು (೧೮೬೫ರವರೆಗೂ ಅಲ್ಲಿಯೆ ಇದ್ದನು).

ಠಾಕುರರ ರಾಗಭಕ್ತಿಯನ್ನು ಕಂಡು ಮಥುರಬಾಬು ವಿಸ್ಮಯ ಗೊಂಡದ್ದು; ಅವರಲ್ಲಿ ಜಗನ್ಮಾತೆಯ ಸನ್ನಿಧಿಯನ್ನು ಗುರುತಿಸಿದ್ದು. ಅವರಿಬ್ಬರಲ್ಲಿ ವಿಶೇಷವಾದ ಸ್ನೇಹ ಬೆಳೆದುಬಂದದ್ದು.

ರಾಣಿ ರಾಸಮಣಿಯನ್ನು ಠಾಕುರರು ದಂಡಿಸಿದ್ದು; ಆಕೆಯ ಚಿತ್ತಶುದ್ಧಿಗೆ ಇದು ನೆರವಾದದ್ದು. ದಾಸ್ಯಭಕ್ತಿಯ ಸಾಧನೆ.

೧೮೫೮ ತಮ್ಮೂರಿಗೆ ಹಿಂದಿರುಗಿದ್ದು.

೧೮೫೯ ವಿವಾಹ (ಜಯರಾಮ ವಾಟಿಯ ಶ್ರೀ ಶಾರದಾ ದೇವಿಯೊಂದಿಗೆ). ಆಕೆಯ ಜನ್ಮ ೧೮೫೩.

೧೮೬೦ ದಕ್ಷಿಣೇಶ್ವರಕ್ಕೆ ಹಿಂದಿರುಗಿದ್ದು

ಶಂಭು ಮಲ್ಲಿಕರು ಅವರಿಗಾಗಿ ದಕ್ಷಿಣೇಶ್ವರ ಗ್ರಾಮದಲ್ಲಿ ಮನೆಯನ್ನು ಕಟ್ಟಿಸಿಕೊಟ್ಟದ್ದು. ಮಧ್ಯಾಹ್ನ ಪೂಜೆ ಮುಗಿಸಿ ಮನೆಗೆ ಹಿಂದಿರುಗು ವರು.

ದಿವ್ಯೋನ್ಮಾದ.

ಕವಿರಾಜೀ ಚಿಕಿತ್ಸೆ.

ಮಧುರಬಾಬುವಿಗೆ ಕಾಳೀರೂಪದರ್ಶನ ಮಾಡಿಸಿದ್ದು.

೪

[೧೮೦೪ ಕಲ್ಕತ್ತೆಯ ರೂಪಸಿ, ವಿದ್ಯಾವತಿ ರಾಣಿ ರಾಸಮಣಿ ರಾಜಚಂದ್ರನೆಂಬ ದೊಡ್ಡ ಜಮೀನುದಾರನನ್ನು ಮದುವೆಯಾಗಿ ಅಪಾರ ಆಸ್ತಿಗೆ ಒಡತಿಯಾದದ್ದು.

ನಾಲ್ವರು ಹೆಣ್ಣುಮಕ್ಕಳಲ್ಲಿ ಕಡೆಯವಳು ಜಗದಂಬಾದಾಸಿ, ನವದ್ವೀಪದ ಚೂರ್ಣಿಕಾ ನದಿಯ ದಂಡೆಯ ಮೇಲೆ ವಿಪುಲವಾದ ಜಮೀನನ್ನು ಹೊಂದಿದ್ದ ಮಧುರ ಮೋಹನ ಬಿಶ್ವಾಸನೆಂಬ ಜಮೀನುದಾರನನ್ನು ಮದುವೆಯಾದದ್ದು.

೧೮೩೬ ರಾಜಚಂದ್ರನು ತೀರಿಕೊಂಡದ್ದು; ಅಳಿಯ ಮಧುರಬಾಬು ರಾಣಿಯ ನೆರವಿಗೆ ನಿಂತದ್ದು. ಅನೇಕ ಭೂಮಿ, ಕಾಣಿ, ಜೊತೆಗೆ ಜಮೀನುದಾರಿ ಹಣ ೬೮ ಲಕ್ಷ ರೂಪಾಯಿಗಳು.

೧೮೪೭ ದಕ್ಷಿಣೇಶ್ವರದಲ್ಲಿ ರಾಣಿ ಭವತಾರಿಣಿಕಾಳಿಯ ಗುಡಿಯನ್ನು ಕಟ್ಟಿಸಲು ತೊಡಗಿದ್ದು, ಕಲ್ಕತ್ತೆಯ ರಾಮಕುಮಾರ ಚಟ್ಟೋಪಾಧ್ಯಾಯನ ನೇತೃತ್ವದಲ್ಲಿ; ಠಾಕುರರ ಸಲಹೆಯಂತೆ.

೧೮೫೫ ಎಂಟು ವರ್ಷಗಳ ನಂತರ ಕಟ್ಟಡ ಮುಗಿದು ಮೂರ್ತಿಯ ಪ್ರತಿಷ್ಠೆ (೩೧.೫.೧೮೫೫). ಕಟ್ಟಡಕ್ಕೆ ತಗುಲಿದ ವೆಚ್ಚ ಆರು ಲಕ್ಷ ರೂಪಾಯಿಗಳು.

ರಾಮಕುಮಾರನು ಪ್ರಧಾನಸನ್ನಿಧಿಯ ಅರ್ಚಕನಾಗಿ ನೇಮಕ; ಠಾಕುರರು ಅಲ್ಲಿಯೇ ರಾಧಾಕಾಂತ ಸ್ವಾಮಿಯ ಸನ್ನಿಧಿಯ ಅರ್ಚಕನಾಗಿ ನೇಮಕ (೧೮೫೮). ತಿಂಗಳಿಗೆ ಐದು ರೂಪಾಯಿ ಸಂಬಳ.

೧೮೬೧ ಫೆಬ್ರುವರಿ ೧೮, ದಾನಶಾಸನವೊಂದನ್ನು ರಾಣಿ ಹೊರಡಿಸಿ, ಇಡೀ ಗುಡಿಯನ್ನು ಠಾಕುರರಿಗೆ ('ರಾಮಕೃಷ್ಣ ಭಟ್ಟಾಚಾರ್ಯ'ನೆಂಬ ಹೆಸರು ಉಲ್ಲೇಖಗೊಂಡಿದೆ) ದಾನ ಮಾಡಿದಳು. ಮರುದಿನವೇ ರಾಣಿ ರಾಸಮಣಿ ತೀರಿಕೊಂಡಳು.]

೫

೧೮೬೧-೬೨ ವಾರಣಾಸಿಯ ತ್ರೈಲಿಂಗಸ್ವಾಮಿಯ ಶಿಷ್ಯೆ ಭೈರವಿ-ಬ್ರಾಹ್ಮಣಿ (ಯೋಗೇಶ್ವರಿ) ದಕ್ಷಿಣೇಶ್ವರಕ್ಕೆ ಬಂದದ್ದು. ಠಾಕುರರನ್ನು ಈಶ್ವರಾವತಾರವೆಂದು ಗುರುತಿಸಿದ್ದು.

ತಾಂತ್ರಿಕ ಸಾಧನೆಯ ಆರಂಭ.

ಈ ಅವಧಿಯಲ್ಲಿ ಹಲಧಾರಿಯೇ ಪ್ರಧಾನ ಸನ್ನಿಧಿಯ ಅರ್ಚಕನಾಗಿ ಕೆಲಸವನ್ನು ನಿರ್ವಹಿಸುತ್ತಿದ್ದನು. ಠಾಕುರರು ಸಾಧನೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು, ಪಂಚವಟಿಯಲ್ಲಿರುತ್ತಿದ್ದರು. ದಕ್ಷಿಣೇಶ್ವರದಲ್ಲೇ ಗುಡಿಯ ನೆರೆಯಲ್ಲಿ ಠಾಕುರರು ಏರ್ಪಡಿಸಿಕೊಂಡ ಒಂದು ಉದ್ಯಾನ ಅದು.

೧೮೬೩ ತಾಂತ್ರಿಕ ಸಾಧನೆಯ ಸಮಾಪ್ತಿ. ಪಂಡಿತ ಪದಲೋಚನನೆಂಬ ಸಿದ್ಧನ ಸಂಪರ್ಕ. ೬೪ ಬೇರೆ ಬೇರೆ ಸಾಧನೆಗಳನ್ನು ಪ್ರಯೋಗಿಸಿದ್ದು. ಮಹಾಭಾವದ ಅನುಭವ.

ತಾಯಿ ಚಂದ್ರಾದೇವಿ ಗಂಗಾವಾಸಕ್ಕೆಂದು ದಕ್ಷಿಣೇಶ್ವರಕ್ಕೆ ಬಂದದ್ದು.

೧೮೬೪-೬೫ ರಾಜಪುಟಾಣದ ನಾರಾಯಣ ಶಾಸ್ತ್ರಿ ಮತ್ತು ಬರ್ದವಾನಿನ ಪದ್ಮಲೋಚನ ತರ್ಕಾಲಂಕಾರ ಎಂಬಿಬ್ಬರು ವೈಷ್ಣವ ಸಾಧುಗಳ ಸಮಾಗಮ.

ಜಟಾಧಾರಿ ಎಂಬ ವೈಷ್ಣವ ಪರಿವ್ರಾಜಕನೊಂದಿಗೆ ಸಾಧನೆ.

ಹಲಧಾರಿಯು ದಕ್ಷಿಣೇಶ್ವರದಿಂದ ಹೊರಟುಹೋದ ಮೇಲೆ,

ಅಣ್ಣ ರಾಮಕುಮಾರನ ಮಗ ರಾಮಾಕ್ಷಯನು ರಾಧಾಕಾಂತನ ಅರ್ಚನೆಗೆ ಬಂದದ್ದು. ಠಾಕುರರು ಇವನನ್ನು ತುಂಬ ಪ್ರೀತಿಸುತ್ತಿದ್ದರು.

೧೮೬೪-೬೫ ತೋತಾಪುರಿ ದಕ್ಷಿಣೇಶ್ವರಕ್ಕೆ ಬಂದದ್ದು. ಲೂಧಿಯಾನಾದ ಸಂನ್ಯಾಸಿ; ನಲವತ್ತು ವರ್ಷಗಳು ನರ್ಮದಾ ನದಿಯ ದಂಡೆಯ ಮೇಲೆ ಕಾಡಿನಲ್ಲಿ ಅದ್ವೈತಸಾಧನೆಯನ್ನು ಮಾಡಿ ನಿರ್ವಿಕಲ್ಪ ಸಮಾಧಿಯನ್ನು ಸಾಧಿಸಿಕೊಂಡಿದ್ದವನು. ಅನಂತರ ಕ್ಷೇತ್ರಪರ್ಯಟನೆಯನ್ನು ಕೈಗೊಂಡು, ಬರುವಾಗ ಗಂಗೆಯ ದಾರಿಯನ್ನು ಹಿಡಿದು ದಕ್ಷಿಣೇಶ್ವರಕ್ಕೆ ಬಂದದ್ದು.

ಠಾಕುರರಿಗೆ ಬ್ರಹ್ಮಜ್ಞಾನ ಸಾಧನೆಗೆ ಅನುಕೂಲವಾಗುವಂತೆ ಸಂನ್ಯಾಸಾಶ್ರಮ ದೀಕ್ಷೆಯನ್ನು ಕೊಟ್ಟದ್ದು. ಆಗ ತಾಯಿ ದಕ್ಷಿಣೇಶ್ವರದಲ್ಲೇ ಇದ್ದುದರಿಂದ ಆಕೆಯ ಮನಸ್ಸಿಗೆ ನೋವಾಗಬಾರದೆಂದು ಸಂನ್ಯಾಸವಿಧಿಗಳೆಲ್ಲ ಗುಟ್ಟಾಗಿ ನಡೆದುದು.

ಅದ್ವೈತಸಾಧನೆ. ತೋತಾಪುರಿಯು ಹನ್ನೊಂದು ತಿಂಗಳ ಕಾಲ ದಕ್ಷಿಣೇಶ್ವರದಲ್ಲೇ ಇದ್ದುಕೊಂಡು ಮಾರ್ಗದರ್ಶನ ಮಾಡಿದರು.

೧೮೬೬-೬೭ ತೋತಾಪುರಿಯ ನಿರ್ಗಮನ.

ಠಾಕುರರು ಆರು ತಿಂಗಳು ಅಖಂಡವಾಗಿ ಅದ್ವೈತಾನುಭವದಲ್ಲಿದ್ದುದು.

ಇಸ್ಲಾಂ ಧರ್ಮದ ಪರಿಚಯವನ್ನು ಪಡೆದುಕೊಂಡುದು.

೧೮೬೭ ಜನವರಿ - ಮಥುರಬಾಬು ಮತ್ತು ಅವನ ಹೆಂಡತಿ ಜಗದಂಬಾದಾಸಿ ಇವರ ಒತ್ತಾಯದಿಂದ ಇವರೊಂದಿಗೆ ಕ್ಷೇತ್ರಪರ್ಯಟನೆಗೆ ಹೋದದ್ದು. ಕಾಶಿ, ಪ್ರಯಾಗ, ಮಥುರಾ, ವೃಂದಾವನಗಳಲ್ಲಿ ಸಂಚಾರ. ಕಾಶಿಯಲ್ಲಿ ತ್ರೈಲಿಂಗಸ್ವಾಮಿಯೊಂದಿಗೆ, ವೃಂದಾವನದಲ್ಲಿ ಗಂಗಾಮಾ ಅವರೊಂದಿಗೆ ಭೇಟಿ.

ಅವರಿಗೆ ಪ್ರಿಯನಾಗಿದ್ದ ರಾಮಾಕ್ಷಯನು ಇದ್ದಕ್ಕಿದ್ದಂತೆ ತೀರಿಕೊಂಡ ನಾಗಿ ಅವರಿಗೆ ತುಂಬ ಬೇಸರವಾಯಿತು. ದುಗುಡದ ಪರಿಹಾರ ಕ್ಕೆಂದು ಮಥುರಬಾಬು ದಂಪತಿಗಳು ಈ ಪ್ರವಾಸವನ್ನೇರ್ಪಡಿಸಿದ್ದರು.

೬

೧೮೬೮ ಜುಲೈ - ಬಂಗಾಳಿ ಕವಿ ಮತ್ತು ಕ್ರೈಸ್ತ ಧುರೀಣ ಮೈಕೆಲ್ ಮಧುಸೂದನ ದತ್ತರೊಂದಿಗೆ ಭೇಟಿ.

ಮಥುರಬಾಬುವಿನೊಂದಿಗೆ ಕಲ್ಕತ್ತೆಯಲ್ಲಿ ಸುರೇಂದ್ರನಾಥ ಬ್ಯಾನರ್ಜಿ ರಸ್ತೆಯಲ್ಲಿರುತ್ತಿದ್ದ ವೆಸ್ಲೆಯನ್ ಮೆಥಾಡಿಸ್ಟ್ ಚರ್ಚಿಗೆ ಹೋಗಿ ಬಂದದ್ದು. ಹೊರಗಿನಿಂದಲೇ 'ಮಾಸ್' ಕೇಳಿಸಿಕೊಂಡದ್ದು.

೧೮೭೦-೭೧ ಭಗವಾನ್‌ದಾಸ ಬಾಬಾಜಿ ಜೊತೆ ಭೇಟಿ.

ನವದ್ವೀಪದಲ್ಲಿ ಶ್ರೀ ಗೌರಾಂಗ ಮತ್ತು ನಿತ್ಯಾನಂದರ ದರ್ಶನಲಾಭ.

ಪಂಡಿತ ಗೌರೀಕಾಂತರು ದಕ್ಷಿಣೇಶ್ವರಕ್ಕೆ ಬಂದದ್ದು. ಠಾಕುರರ ದೈವೀ ಸ್ವರೂಪವನ್ನು ಎಲ್ಲರಿಗೆ ತಿಳಿಯಹೇಳಿದ್ದು.

೧೮೭೧ ಜುಲೈ ೧೬, ಮಥುರಬಾಬು ತೀರಿಕೊಂಡದ್ದು.

೧೮೭೨ ಮಾರ್ಚ್ ೨೩ (ಶ್ರಾವಣ), ಶ್ರೀ ಶಾರದಾದೇವಿ ದಕ್ಷಿಣೇಶ್ವರಕ್ಕೆ ಬಂದದ್ದು. ಷೋಡಶೀಪೂಜೆ.

೧೮೭೩ ಶ್ರೀ ಶಾರದಾದೇವಿ ಕಾಮಾರಪುಕುರಕ್ಕೆ ಹಿಂದಿರುಗಿದ್ದು.

೧೮೭೩ ಸ್ವಾಮಿ ದಯಾನಂದ ಸರಸ್ವತಿಯೊಂದಿಗೆ ಭೇಟಿ (ಆರ್ಯಸಮಾಜದ ಪ್ರವರ್ತಕರು) ನೈಮಾನ್ ಠಾಕುರರ ಉದ್ಯಾನ ಭವನದಲ್ಲಿ. ಕೇಶವಚಂದ್ರ ಸೇನರು ಆಗ ಸಾಧನಭಾವದಲ್ಲಿದ್ದರು. ಠಾಕುರರು ಅಲ್ಲಿಗೆ ಹೋದದ್ದು ಕೇಶವಚಂದ್ರರನ್ನು ಕಾಣಲೆಂದೇ. ದಯಾನಂದ ರಿಗೆ ಸಗುಣ ಆರಾಧನೆ ಹಿಡಿಸದು. ಠಾಕುರರು "ರಾಮ, ರಾಮ" ಎಂದು ಜಪಮಾಡುತ್ತಿದ್ದರೆ ದಯಾನಂದರು ಪರಿಹಾಸ್ಯ ಮಾಡುತ್ತ "ಸಂದೇಶ್, ಸಂದೇಶ್" (ಬಂಗಾಳಿಗಳ ಸಿಹಿ ತಿನಿಸು) ಎಂದಾದರೂ

ಹೇಳಿ ಎಂದರು. ಇದ್ದಕ್ಕಿದ್ದಂತೆ ಠಾಕುರರು ಸಮಾಧಿಗೆ ಜಾರಿದರು. ಅದನ್ನು ನೋಡಿ ದಯಾನಂದರು "ಶಾಸ್ತ್ರದಲ್ಲಿ ಇದನ್ನು ಓದಿದ್ದೇನೆ, ದಿಟವಾಗಿ ಸಮಾಧಿಯನ್ನು ಕಂಡದ್ದು ಈ ಹೊತ್ತೇ!" ಎಂದು ಅಚ್ಚರಿಪಟ್ಟರು.

೧೮೭೩ ಡಿಸೆಂಬರ್ ೧೧, ಅಣ್ಣ ರಾಮೇಶ್ವರನ ದೇಹತ್ಯಾಗ.

೧೮೭೪ ಏಪ್ರಿಲ್ (ವೈಶಾಖ), ಶ್ರೀ ಶಾರದಾದೇವಿ ದಕ್ಷಿಣೇಶ್ವರಕ್ಕೆ ಬಂದದ್ದು. ಶಂಭುಮಲ್ಲಿಕರು ಕಟ್ಟಿಸಿಕೊಟ್ಟ ಮನೆಯಲ್ಲಿ ವಾಸಮಾಡತೊಡಗಿದ್ದು.

೧೮೭೫ ಫೆಬ್ರುವರಿ ೨೭ (ಫಾಲ್ಗುಣ), ತಾಯಿ ಚಂದ್ರಾದೇವಿಯ ದೇಹತ್ಯಾಗ (ಗಂಗಾಪ್ರಾಪ್ತಿ).

೧೮೭೫ ಮಾರ್ಚ್ - ಶ್ರೀ ಶಾರದಾದೇವಿ ಜಯರಾಮ ವಾಟಿಗೆ ಹೋದದ್ದು; ಮತ್ತೆ ದಕ್ಷಿಣೇಶ್ವರಕ್ಕೆ ಬಂದದ್ದು.

(೧೮೭೫-೧೮೭೮ ಠಾಕುರರೂ ಶ್ರೀ ಶಾರದಾದೇವಿಯೂ ತಮ್ಮೂರ ಕಡೆ ಹೋಗಿ ಸುತ್ತಾಡಿಬಂದದ್ದು; ಮೂರು ವರ್ಷಕಾಲ).

೭

[೧೮೫೩ ಡಿಸೆಂಬರ್ ೨೨, ಶ್ರೀ ಶಾರದಾದೇವಿಯ ಜನ್ಮ ಜಯರಾಮ ವಾಟಿಯಲ್ಲಿ; ರಾಮಚಂದ್ರ ಮುಖ್ಯೋಪಾಧ್ಯಾಯನ ಮಗಳಾಗಿ.

೧೮೫೯ ಠಾಕುರರೊಂದಿಗೆ ವಿವಾಹ.

೧೮೬೬ ಕಾಮಾರಪುಕುರಕ್ಕೆ ಬಂದದ್ದು. ಕೆಲವು ದಿನಗಳ ವಾಸಕ್ಕೆಂದು.

೧೮೬೭ ದಕ್ಷಿಣೇಶ್ವರದಿಂದ ಠಾಕುರರು ಕಾಮಾರಪುಕುರಕ್ಕೆ ರಕ್ತಭೇದಿಯಿಂದ ಬಂದಿದ್ದಾಗ ಶ್ರೀ ಶಾರದಾದೇವಿಯೂ ಅಲ್ಲಿಗೆ ಬಂದು ಅವರ ಆರೈಕೆ ಮಾಡಿದ್ದು.

೧೮೬೮ ಶಾರದಾದೇವಿಯೊಂದಿಗೆ ಎರಡನೆಯ ಬಾರಿ ವಿವಾಹ, ಬ್ರಹ್ಮಜ್ಞಾನ ಸಾಧನೆಗೆಂದು ಸಂನ್ಯಾಸದೀಕ್ಷೆಯನ್ನು ಗ್ರಹಿಸಿದ ಕಾರಣ.

೧೮೬೧ ರಿಂದ ದಕ್ಷಿಣೇಶ್ವರದಲ್ಲಿ ವಾಸ. ತಂದೆಯೊಂದಿಗೆ ತಮ್ಮ ಗ್ರಾಮದಿಂದ ದಕ್ಷಿಣೇಶ್ವರಕ್ಕೆ ನಡೆದೇ ಬಂದರು.

೧೮೬೨ ಮೇ-ಹುಣ್ಣಿಮೆ ಷೋಡಶೀಪೂಜೆ. ಒಂದೂವರೆ ವರ್ಷಕಾಲ ಗುಡಿಯ ನೆರೆಯಲ್ಲೇ ಇದ್ದ ನವಬತ್‌ಖಾನೆ (ಗುಡಿಯಲ್ಲಿ ಪೂಜೆ ನಡೆಯುವಾಗ ವಾದ್ಯಗಳನ್ನು ನುಡಿಸುವ ಎಡೆ, ಸಣ್ಣ ಕೋಣೆ)ಯಲ್ಲಿ ವಾಸಮಾಡುತ್ತ ಠಾಕುರರ ಊಟ, ಉಪಚಾರ, ಆರೈಕೆಗಳನ್ನು ನೋಡಿಕೊಳ್ಳುತ್ತಿದ್ದರು. ಈ ಕೋಣೆಯನ್ನು ಠಾಕುರರು 'ಪಂಜರ' ಎಂದು ಕರೆಯುತ್ತಿದ್ದರು. ಅದರೊಳಗೆ ಇರುತ್ತಿದ್ದ ಶ್ರೀ ಶಾರದಾದೇವಿ ಮತ್ತು ಲಕ್ಷ್ಮೀಮಣಿಯನ್ನು 'ಶುಕಶಾರಿಕೆಯರು' ಎಂದು ಗುರುತಿಸುತ್ತಿದ್ದರು.]

೮

೧೮೭೫ ಮಾರ್ಚ್ ೧೫, ಜನಪ್ರಿಯ ಬ್ರಾಹ್ಮೋನಾಯಕರು ಬ್ರಹ್ಮಾನಂದ ಕೇಶವ ಚಂದ್ರಸೇನ (೧೮೩೮-೧೮೮೪)ರೊಂದಿಗೆ ಪ್ರಥಮ ಸಮಾಗಮ. ಕಲ್ಕತ್ತೆಯ 'ಜೋಡೋ-ಶಂಖೋ'ವಿನಲ್ಲಿ (ಮಹರ್ಷಿ ದೇವೇಂದ್ರನಾಥ ಠಾಕುರರ ನಿವಾಸ; ಆದಿಬ್ರಾಹ್ಮಸಮಾಜದ ಕೇಂದ್ರ).

ಅವರಿಬ್ಬರಿಗೂ ಪರಸ್ಪರವಾಗಿ ಪ್ರೀತಿ-ವಿಶ್ವಾಸಗಳು ಬೆಳೆದುವು. ಕೇಶವಚಂದ್ರರು ಠಾಕುರರಲ್ಲಿ ಕಂಡದ್ದು ಹದಿನಾರಾಣೆ ಬ್ರಾಹ್ಮೋವನ್ನೇ. ಠಾಕುರರು ಕೇಶವಚಂದ್ರರನ್ನು ಅಸಾಧಾರಣ ಪುರುಷ, ಪರಮಪ್ರಾಮಾಣಿಕ ಎಂದು ಗುರುತಿಸಿದರು.

ಕೇಶವಚಂದ್ರರು ಆದಿಬ್ರಾಹ್ಮಸಮಾಜವನ್ನು ತೊರೆದು, ಮಹರ್ಷಿ ದೇವೇಂದ್ರನಾಥರಿಂದ ದೂರವಾಗಿ ತಮ್ಮದೇ 'ಭಾರತವರ್ಷೀಯ ಬ್ರಾಹ್ಮಸಮಾಜ'ವನ್ನು ಸ್ಥಾಪಿಸಿದರು (೧೮೬೮). ಮುಂದೆ ಕುಚ್-ಬಿಹಾರ್ ವಿವಾಹವೆಂಬ ಪ್ರಸಂಗದಿಂದಾಗಿ ಹಲವರು

ಕೇಶವಚಂದ್ರರಿಂದ ದೂರವಾಗಿ 'ಸಾಧಾರಣ ಬ್ರಾಹ್ಮಸಮಾಜ'ವನ್ನು ಏರ್ಪಡಿಸಿಕೊಂಡರು. ಆಗ ಕೇಶವ ಚಂದ್ರರು 'ನವಸಂವಿಧಾನ'ವನ್ನು ಪ್ರಚಾರಕ್ಕೆ ತಂದರು (೧೮೮೨). ಇದರಲ್ಲಿ ಠಾಕುರರ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದು.

೧೮೭೮ ಏಳು ದಿನ ಅಹೋರಾತ್ರಿ ಮಹಾಸಂಕೀರ್ತನ (ವನವಿಷ್ಣುಪುರದಲ್ಲಿ).

ಶಿಷ್ಯ ರಾಮಚಂದ್ರ ದತ್ತರು ಠಾಕುರರನ್ನು ಭೇಟಿಯಾದದ್ದು.

೧೮೮೦ ಮತ್ತೆ ಕಾಮಾರಪುಕುರದ ಕಡೆ ಪ್ರವಾಸ. ತಮ್ಮ ಕುಲದೈವ ರಘುವೀರ ಸ್ವಾಮಿಯ ಸೇವೆಗೆಂದು ಸ್ವಲ್ಪ ಜಮೀನನ್ನು ಕೊಂಡದ್ದು.

೧೮೮೧ ಜನವರಿ ೩, ಮಥುರಬಾಬುವಿನ ಹೆಂಡತಿ ಜಗದಂಬಾದಾಸಿ ತೀರಿಕೊಂಡದ್ದು.

'ಮಾನಸಪುತ್ರ' ರಾಖಾಲ ಠಾಕುರರನ್ನು ಸೇರಿಕೊಂಡದ್ದು.

೧೮೮೧ ಜೂನ್ ೧೨. ಹೃದಯರಾಮನನ್ನು ಕೆಲಸದಿಂದ ತೆಗೆದದ್ದು.

೧೮೮೧ ನವೆಂಬರ್, ನರೇಂದ್ರನಾಥ ದತ್ತ (ಮುಂದೆ ಸ್ವಾಮಿ ವಿವೇಕಾನಂದರಾದವರು)ರೊಂದಿಗೆ ಭೇಟಿ.

೧೮೮೧ ಡಿಸೆಂಬರ್ ೧೦, ಠಾಕುರರ ಭಾವಚಿತ್ರಗ್ರಹಣ; ಕೇಶವಚಂದ್ರರ ಅಪೇಕ್ಷೆಯಂತೆ (ಬೆಂಗಾಲ್ ಫೋಟೋಗ್ರಾಫಿಕ್ ಸ್ಟುಡಿಯೋದಲ್ಲಿ).

೧೮೮೨ ಆಗಸ್ಟ್ ೫, ಪಂಡಿತ ಈಶ್ವರಚಂದ್ರ ವಿದ್ಯಾಸಾಗರರೊಂದಿಗೆ ಭೇಟಿ. ಠಾಕುರರು ಅವರನ್ನು ಕಾಣಲು ತಾವೇ ಹೋಗಿದ್ದರು. ಅವರ ಸಾತ್ತ್ವಿಕ ಸ್ವಭಾವಕ್ಕೆ ಮಾರುಹೋಗಿದ್ದರು; ಸಾಗರದಲ್ಲಿರುವ ರತ್ನವನ್ನು ಗುರುತಿಸಿದ್ದರು.

೧೮೮೪ ಜನವರಿ ೮, ಕೇಶವಚಂದ್ರಸೇನರ ದೇಹತ್ಯಾಗ.

೧೮೮೪ ಫೆಬ್ರವರಿ ೨, ಠಾಕುರರ ಗಂಟಲಲ್ಲಿ ವ್ರಣ ಕಾಣಿಸಿಕೊಂಡದ್ದು; ಅನಾರೋಗ್ಯದ ಆರಂಭ.

೧೮೮೪ ಡಿಸೆಂಬರ್ ೬, ಬಂಕಿಮಚಂದ್ರ ಚಟ್ಟೋಪಾಧ್ಯಾಯರೊಂದಿಗೆ ಮಾತುಕತೆ.

೧೮೮೫ ಮೇ ೨೬, ಪಾನಿಹಾಟಿ ವೈಷ್ಣವ ಮೇಳದಲ್ಲಿ ಪಾಲ್ಗೊಂಡದ್ದು. ಬರುವ ವೇಳೆಗೆ ಗಂಟಲ ನೋವು ಹೆಚ್ಚಾದದ್ದು.

೬

೧೮೮೫ ಜುಲೈ ೧೪, ಜಗನ್ನಾಥ ರಥಯಾತ್ರೆ; ಬಲರಾಮ ಬಸುಭವನದಲ್ಲಿ.

೧೮೮೫ ಸೆಪ್ಟೆಂಬರ್, ಕಲ್ಕತ್ತೆಗೆ ಬಂದದ್ದು. ಬಸುಭವನದಲ್ಲಿ ಸಪ್ತಾಹ.

ಗಂಟಲಲ್ಲಿ ನೋವು ಕಾಣಿಸಿಕೊಂಡದ್ದು. ಡಾ॥ ರಾಖಾಲ್‌ದಾಸ ಘೋಷರು ಮತ್ತು ಡಾ॥ ಪ್ರತಾಪಚಂದ್ರ ಮಜೂಮದಾರರು (ಹೋಮಿಯೋಪತಿ) ಚಿಕಿತ್ಸೆ ಮಾಡಿದ್ದು. ಗುಣಕಾಣದೆ, ರಾಮಚಂದ್ರ ದತ್ತರು ಕಾಲೀಪದ ಘೋಷ್, ಗಿರಿಶಚಂದ್ರ ಘೋಷ್ ಮತ್ತು ದೇವೇಂದ್ರನಾಥರೊಂದಿಗೆ ಮಾತನಾಡಿ ಠಾಕುರರನ್ನು ಕಲ್ಕತ್ತೆಗೆ ಕರೆತರಲು ನಿಶ್ಚಯಿಸಿದ್ದು. ಐರೋಪ್ಯ ವೈದ್ಯರಿಂದ ಚಿಕಿತ್ಸೆ ಮಾಡಿಸಿಕೊಳ್ಳಲು ಠಾಕುರರು ಒಪ್ಪದೆ ಇದ್ದದ್ದು. ಮಳೆಗಾಲ, ಗಂಗಾನದಿಯ ನೀರು ಮೇಲೆ ಬರುತ್ತಿತ್ತು. ಠಾಕುರರ ಕೋಣೆಯಲ್ಲಿ ಥಂಡಿ, ಹೀಗಾಗಿ ದಕ್ಷಿಣೇಶ್ವರವನ್ನು ಬಿಟ್ಟರೆ ವಾಸಿ ಎಂದು ಅವರ ಎಣಿಕೆ. ೧೮೫೫ ರಿಂದ ೧೮೮೫ರವರೆಗೆ ಮೂವತ್ತು ವರ್ಷಗಳು ಠಾಕುರರು ದಕ್ಷಿಣೇಶ್ವರದಲ್ಲೇ ಇರುತ್ತಿದ್ದರು. ಎಂಟು ವರ್ಷಗಳ ತೀವ್ರ ಸಾಧನೆ ಬೇರೆ. ಈಗ ಆರೋಗ್ಯ ಕುಸಿಯಿತು.

ಕಲ್ಕತ್ತೆಗೆ ಹೋಗಿರಲು ಠಾಕುರರೂ ಒಪ್ಪಿದರು. ಉತ್ತರ ಭಾಗದಲ್ಲಿ ಬಾಗ್ ಬಜಾರಿನ ಬಳಿ ಗಂಗಾನದಿಗೆ ಹತ್ತಿರದಲ್ಲಿ ಒಂದು ಬಾಡಿಗೆ ಮನೆಯನ್ನು ಗೊತ್ತುಮಾಡಲು ರಾಮಚಂದ್ರ ದತ್ತರಿಗೆ ಹೇಳಿದರು. ಹೊರಡುವ ಗಳಿಗೆಯನ್ನು ಗೊತ್ತುಮಾಡಲು ಹಲಧಾರಿಯನ್ನು ಪಂಚಾಂಗ ನೋಡುವಂತೆ ತಿಳಿಸಿದರು.

೧೮೮೫ ನವೆಂಬರ್ ೬, ಶ್ಯಾಮಾಪುಕುರದಲ್ಲಿ ಶ್ಯಾಮಾಪೂಜೆಯಲ್ಲಿ ಪಾಲ್ಗೊಂಡದ್ದು.

೧೮೮೫ ಡಿಸೆಂಬರ್ - ಮಹೇಂದ್ರಲಾಲ ಸರ್ಕಾರರಿಂದ ಚಿಕಿತ್ಸೆ (ಮೂರು ತಿಂಗಳು). ಕಲ್ಕತ್ತೆಯ ಶ್ಯಾಮ್‌ಪುಕುರ್ ಉದ್ಯಾನಭವನದಲ್ಲಿ ವಾಸ. ಗೋಲಾಪ್ ಮಾನದೇ ಅಡುಗೆ. ಗುಣ ಕಾಣಲಿಲ್ಲ. ನೀರು ಕುಡಿಯುವುದೂ ಕಷ್ಟವಾಯಿತು; ಮಾತನಾಡುವುದೂ ಆಗುತ್ತಿರಲಿಲ್ಲ. ಶ್ರೀ ಶಾರದಾದೇವಿಯೂ ಅಲ್ಲಿಗೆ ಬಂದರು.

೧೮೮೫ ಡಿಸೆಂಬರ್ ೧೧, ಕಾಶೀಪುರದ ಗೋಪಾಲ ಘೋಷ್ ಉದ್ಯಾನವಾಟಿಯಲ್ಲಿ ಎಂಟು ತಿಂಗಳ ವಾಸ. ತೀವ್ರ ಅನಾರೋಗ್ಯ. ಗೋಲಾಪ್‌ಮಾ, ಲಕ್ಷ್ಮೀ, ಶ್ರೀ ಶಾರದಾದೇವಿ ಜೊತೆಗೇ ಇರುತ್ತಿದ್ದರು. ಕೆಲವು ಶಿಷ್ಯರೂ ಇರುತ್ತಿದ್ದು, ಅವರ ಸಂಖ್ಯೆ ಹದಿನೇಳು-ಹದಿನೆಂಟು ಆದಾಗ ಬ್ರಾಹ್ಮಣ ಅಡುಗೆಯವನೊಬ್ಬನನ್ನೂ ಪರಿಚಾರಿಕೆಯೊಬ್ಬಳನ್ನೂ ನೇಮಿಸಿಕೊಂಡರು. ಮನೆಬಾಡಿಗೆ ತಿಂಗಳಿಗೆ ಎಂಬತ್ತು ರೂಪಾಯಿಗಳು. ವೆಚ್ಚವೆಲ್ಲ ರಾಮಚಂದ್ರ ದತ್ತರದ್ದೇ. (೧೮೮೫ರ ಡಿಸೆಂಬರ್ ಮೊದಲ ದಿನ ಈ ಮನೆಗೆ ಬಂದದ್ದು.)

ರಾಜೇಂದ್ರ ದತ್ತ, ನವೀನ ಪಾಲ್, ಕಲ್ಕತ್ತಾ ಮೆಡಿಕಲ್ ಕಾಲೇಜಿನ ಜೆ.ಎಂ. ಕೋಟ್ಸ್-ಈ ವೈದ್ಯರಿಂದ ಚಿಕಿತ್ಸೆ.

೧೮೮೬ ಜನವರಿ ೧, ಸ್ವಲ್ಪ ಗುಣಮುಖರಾದಂತೆ ತೋರಿತು. ಆತ್ಮಪ್ರಕಾಶ, ಅಭಯದಾನ. ಆದರೆ ಶರೀರ ತೀರ ದುರ್ಬಲವಾಗಿಬಿಟ್ಟಿತು. ಆಹಾರ ನುಂಗುವುದು, ಮಾತನಾಡುವುದು, ಎದ್ದು ಕೂಡುವುದು, ನಡೆದಾಡುವುದು ಆಗುತ್ತಿರಲಿಲ್ಲ.

ಒಂದೂವರೆ ವರ್ಷ ಮಾತನಾಡಲಾಗದೆ ಪಿಸುಗುಟ್ಟುವುದು; ಆಹಾರ ಗಂಟಲೊಳಗೆ ಇಳಿಯುತ್ತಿರಲಿಲ್ಲ. ಹಸಿವಾದರೂ ಉಪವಾಸವೇ. ಎಡೆ-ಬಿಡ ನೋವು, ಗಂಟಲ ವ್ರಣ ಉಲ್ಬಣಿಸಿತು. ರಾತ್ರಿ-ಹಗಲು ಮೈಯೆಲ್ಲ ಉರಿ.

ಯಾರಾದರೂ ಬಂದು ತಮ್ಮ ಆರೋಗ್ಯವನ್ನು ವಿಚಾರಿಸಿದರೆ, "ದೇಹವಿದೆ, ರೋಗವಿದೆ, ಒಂದನ್ನೊಂದು ನೋಡಿಕೊಳ್ಳಲಿ, ಬಿಡಿ. ನನ್ನ ಮನಸ್ಸಿಗೇಕೆ ಅದರ ಗೊಡವೆ?" ಎಂದುಬಿಡುತ್ತಿದ್ದರು! ರಕ್ತಸ್ರಾವವೂ ಆಯಿತು.

೧೮೮೬ ಆಗಸ್ಟ್ ೧೫, ಸಂಜೆ, ವಾಡಿಕೆಯಂತೆ, 'ಹರಿಃ ಓಂ, ತತ್ಸತ್' ಜಪ ಮಾಡತೊಡಗಿದರು. ಸ್ವಲ್ಪ ಸಮಯದಲ್ಲೇ ರಾತ್ರಿ ೧೧ ಗಂಟೆ ಸುಮಾರಿಗೆ, ಸಮಾಧಿಗೆ ಜಾರಿದರು. ಸುತ್ತಲೂ ನೆರೆದಿದ್ದ ಶಿಷ್ಯರು ಜಪವನ್ನು ಮುಂದರಿಸಿದರು. ಸರಿರಾತ್ರಿ ಒಂದು ಗಂಟೆಗೆ ಸಮಾಧಿ ಸ್ಥಿತಿಯಿಂದ ಹೊರಬಂದರು. ಒಂದು ಗಂಟೆ ಎರಡು ನಿಮಿಷಕ್ಕೆ ಉಸಿರಾಟ ನಿಂತಿತು. ಗಾಬರಿಗೊಂಡ ಶಿಷ್ಯರು ರಾಮಲಾಲದಾದಾರನ್ನು (ಹಲಧಾರಿ, ರಾಮಕೃಷ್ಣರು ಕಾಶೀಪುರ ಉದ್ಯಾನಭವನದಲ್ಲಿ ಚಿಕಿತ್ಸೆಗಾಗಿ ಇರುವಾಗ ದಕ್ಷಿಣೇಶ್ವರದ ಅವರ ಕೋಣೆಯಲ್ಲಿ ರಾತ್ರಿ ಮಲಗಿರುತ್ತಿದ್ದರು) ಕರೆತರಲು ಗೋಪಾಲದಾದ ಮತ್ತು ಲಾಟು ಮಹಾರಾಜರನ್ನು ಕಳುಹಿಸಿದರು. ಅವರು ದಕ್ಷಿಣೇಶ್ವರ ಮುಟ್ಟಿದಾಗ ರಾತ್ರಿ ಎರಡು ಗಂಟೆ. ರಾಮಲಾಲರು ದಿಗ್ಗನೆ ಎದ್ದು ಅಳುತ್ತಲೇ ಕಾಶೀಪುರಕ್ಕೆ ಬಂದರು. ಠಾಕುರರನ್ನು ನೋಡಿದಾಗ ಅಂಗಾತ ಮಲಗಿದ್ದರು; ಕಣ್ಣು ತೆರೆದಿದ್ದಿತು; ದೃಷ್ಟಿ ನೆಲೆಗಟ್ಟಿತ್ತು. ಅವರಿಗೆ ಹೊರಗಣ ಅರಿವು ಇಲ್ಲವೆಂಬುದು ಸ್ಪಷ್ಟವಾಗಿತ್ತು. ಹಲಧಾರಿಯ ಸೂಚನೆಯಂತೆ ನೇಪಾಳದ ರಾಜವೈದ್ಯ, ಠಾಕುರರ ಭಕ್ತ ಡಾ॥ ವಿಶ್ವನಾಥ ಉಪಾಧ್ಯಾಯರನ್ನು ಕರೆತಂದರು. ಅವರು ಪರೀಕ್ಷೆ ಮಾಡಿ "ನೆತ್ತಿಯಲ್ಲಿ ಸ್ವಲ್ಪ ಕಾವಿದೆ, ಬೆನ್ನಲ್ಲಿ ಮಿಡಿತವಿದೆ, ಪ್ರಾಣ ಹೋಗಿಲ್ಲ" ಎಂದು ಅಭಿಪ್ರಾಯಪಟ್ಟರು. ಅನಂತರ ಕ್ರಮೇಣ ಕಣ್ಣುಮುಚ್ಚಿತು. ಅಷ್ಟು ಹೊತ್ತಿಗೆ ಡಾ॥ ಮಹೇಂದ್ರ ಸರ್ಕಾರರು ಬಂದು, ಪರೀಕ್ಷೆ ಮಾಡಿ "ಈಗಾಗಲೇ ಅರ್ಧಗಂಟೆ ಮೊದಲೇ ಅವರು ತೀರಿಕೊಂಡಿದ್ದಾರೆ" ಎಂಬ ತೀರ್ಮಾನಕ್ಕೆ ಬಂದರು.

ಶ್ರೀ ರಾಮಕೃಷ್ಣರ ದೇಹದೊಂದಿಗೆ ಅವರ ಶಿಷ್ಯರೂ, ಭಕ್ತರೂ, ಅಭಿಮಾನಿಗಳೂ ಇರುವ ಭಾವಚಿತ್ರವನ್ನು ತೆಗೆಯಲು ಡಾ॥ ಸರ್ಕಾರ್ ಹತ್ತು ರೂಪಾಯಿಗಳನ್ನು ಕೊಟ್ಟುಹೋದರು.

೧೮೮೬ ಆಗಸ್ಟ್ ೧೫-೧೬, ಸಂಜೆ ದೇಹವನ್ನು ಗಂಗಾಜಲದಿಂದ ತೊಳೆದು, ಸಿಂಗರಿಸಿ ಉತ್ಸವ ಸಂಭ್ರಮದಲ್ಲಿ ಆರುಗಂಟೆ ಸಮಯಕ್ಕೆ ರಾಮಚಂದ್ರ ದತ್ತರದ್ದೇ ಕಂಖೂರ್‌ಗಾಛಿ ಯೋಗೋದ್ಯಾನಕ್ಕೆ ತಂದು ಅಗ್ನಿಸಂಸ್ಕಾರ ಮೊದಲಾದ ಅಪರ ಕ್ರಿಯೆಗಳನ್ನು ನಡೆಸಲಾಯಿತು.

ಆಗ ಅಲ್ಲಿದ್ದವರಲ್ಲಿ ರಾಮಚಂದ್ರ ದತ್ತನೇ ಮೊದಲಾದ ಹಿರಿಯ ಗೃಹಸ್ಥರೂ, ನರೇಂದ್ರ ರಾಖಾಲ ನಿರಂಜನ ಕಾಳಿಕೃಷ್ಣ ಮೊದಲಾದ ತರುಣ ಶಿಷ್ಯರೂ ಸೇರಿದ್ದರು. ತರುಣ ಶಿಷ್ಯರೇ ಮುಂದೆ ಸಂನ್ಯಾಸಿಗಳಾಗಿ ಸಂಘಟಿತರಾದರು. ಮುಂದಿನ ಕಥೆ ಇಲ್ಲಿ ಅಪ್ರಸ್ತುತ.

ಶ್ರೀ ರಾಮಕೃಷ್ಣರು

ಶ್ರೀ ಶಾರದಾದೇವಿ

ಶ್ರೀ ರಾಮಕೃಷ್ಣರ ವ್ಯಕ್ತಿಚಿತ್ರ

(ಕಂಡವರು ಉಳಿಸಿದ್ದು
ನಾಗೇಂದ್ರನಾಥ ಗುಪ್ತ, ಕ್ಷಿರೋದ ಚಂದ್ರ ಸೇನ, ಬ್ರಜೇಂದ್ರನಾಥ ಬಂದೋಪಾಧ್ಯಾಯ, ಸಜನೀಕಾಂತ ದಾಸ ಮತ್ತಿತರರು)

೧

ಮೈಬಣ್ಣ ಸ್ವಲ್ಪ ಕಪ್ಪಿನ ಮೇಲೆ; ಗಡ್ಡ ಇರುತ್ತಿತ್ತು. ಅವರ ಚರ್ಮ ತುಂಬ ಮೆದುವಾಗಿದ್ದಿತಾಗಿ ಕತ್ತಿಯಿಂದ ಕ್ಷೌರಮಾಡಿಕೊಳ್ಳುವುದು ಕಷ್ಟವಾಗುತ್ತಿತ್ತು. ಪ್ರತಿ ಸೋಮವಾರ ನಾಯಿಂದನೊಬ್ಬ ಬಂದು ಅವರ ಗಡ್ಡವನ್ನು ಓರಣವಾಗಿ ಕತ್ತರಿಸಿ ಹೋಗುತ್ತಿದ್ದ. ಕಣ್ಣು ಯಾವಾಗಲೂ ಅರ್ಧ ಮುಚ್ಚಿರುತ್ತಿತ್ತು. ಸಾಮಾನ್ಯವಾದ ನಿಲುವು; ಅಷ್ಟು ಎತ್ತರವೂ ಅಲ್ಲ, ಕುಳ್ಳೂ ಅಲ್ಲ. ಮೈಕಟ್ಟು ಸಣಕಲ. ದೃಢಕಾಯ ಅಲ್ಲ ಎಂಬುದು ತಟ್ಟನೆ ತಿಳಿಯುತ್ತಿತ್ತು. ನೋಟದಲ್ಲಿ, ಮಾತಿನಲ್ಲಿ, ನಡೆಯಲ್ಲಿ ಚಪಲತೆ ತೋರಿಕೊಳ್ಳುತ್ತಿತ್ತು. ನರ್ವಸ್ ಟೆಂಪರಮೆಂಟ್ ಎನ್ನುವ ಸ್ವಭಾವ.

ಕೆಂಪಂಚಿನ ಪಂಚೆ ಉಡುವುದು ವಾಡಿಕೆ. ಮನೆಯಲ್ಲಿರುವಾಗ ಮೈಮೇಲೊಂದು ಸಣ್ಣ ಅಂಗವಸ್ತ್ರ. ಉಟ್ಟ ಪಂಚೆಯ ಚುಂಗನ್ನೇ ಮುಂಭಾಗವನ್ನೇ ಮೇಲೆ ಹೊದೆಯುವುದು ಹೆಚ್ಚು. ಹೊರಗೆ ಹೋಗುವಾಗ ನಡುವಿಗೆ ಬರುವ ಬಿಳಿಬಣ್ಣದ ಕುರ್ತ. ಒಮ್ಮೊಮ್ಮೆ ಅದರ ಮೇಲೊಂದು ಅಷ್ಟೇ ಸಣ್ಣ, ಎದೆ ಮುಚ್ಚುವ ಕೋಟು. ಕಾಲಲ್ಲಿ ಚಪ್ಪಲಿ.

ನಡೆದಾಡುವಾಗ ಕೈಯಲ್ಲಿ ಏನನ್ನೂ ಹಿಡಿದಿರುತ್ತಿರಲಿಲ್ಲ. ಒಮ್ಮೊಮ್ಮೆ ಉಟ್ಟ ಪಂಚೆಯ ಚುಂಗನ್ನೇ ಬಲಗೈಯಲ್ಲಿ ಹಿಡಿದು ಆಡಿಸುತ್ತಿದ್ದರು.

ಮಾತಾಡುವುದು ಮೆತ್ತಗೆ, ನಿಧಾನವಾಗಿ. ಸಣ್ಣ ಸಣ್ಣ ವಾಕ್ಯಗಳು, ಎರಡು-ಮೂರು ಪದಗಳಿದ್ದರೆ ಆಯಿತು. ಹೆಚ್ಚೆಂದರೆ ನಾಲ್ಕು, ಐದು. ಆಡಿದ ಮಾತು ಪೂರ್ಣವಾಗಿರಬೇಕೆಂಬ ಹಟವೇನೂ ಇರದು; ನಡುವೆಯೇ ಸುಮ್ಮನಾಗಿಬಿಡುವರು. ವ್ಯಾಕರಣಶುದ್ಧವಾಗಿರಬೇಕೆಂಬ ಕಾತರವೂ ಇರದು. ಆದರೆ ಆಡಿದ ಮಾತು ಸುಸಂಗತವಾಗಿರುತ್ತಿತ್ತು. ಆಲೋಚನೆಯಲ್ಲಿ ಏಕತಾನತೆ ಇರುತ್ತಿತ್ತು. ವಾಕ್ಯಗಳಲ್ಲಿ ಸಾಂಗತ್ಯ ಇರದಿದ್ದರೂ ಭಾವನೆಗಳು ಸ್ಪಷ್ಟವಾಗಿ ಅನುಸ್ಯೂತವಾಗಿರುತ್ತಿದ್ದುವು.

ಏನು ಹೇಳಬೇಕೆಂಬುದನ್ನು ಮೊದಲು ನಿರ್ಧರಿಸಿಯೇ ಅನಂತರ ಮಾತನಾಡುವರು. ಆದ್ದರಿಂದಲೇ ಮಾತು ನಿಧಾನ. ಆಡುವ ಮಾತುಗಳು ಬಿಡಿಯ ಹೂಗಳಂತೆ ಹೊರಬರುತ್ತಿದ್ದುವು; ಹೂಮಾಲೆಗಳಂತಲ್ಲ. ಮಾತಿನಲ್ಲಿ ಉಗ್ಗು ಇರುತ್ತಿತ್ತು.

ಮಾತನಾಡುವುದು ಸಾಧಾರಣ ಬಂಗಾಳಿಯಲ್ಲೇ. ಬಹುವೇಳೆ ಗ್ರಾಮೀಣಭಾಷೆ; ಕೆಲವೊಮ್ಮೆ ಅವಾಚ್ಯ ಪದಗಳ ಪ್ರಯೋಗವೂ ಉಂಟು. ಆದರೆ ಆಡಿದ ಮಾತಿನಲ್ಲಿ ಅಪೂರ್ವವಾದ ಒಂದು ಹೊಳಹು ಇರುತ್ತಿತ್ತು. ಮಾತನಾಡುವಾಗ ಅದು ಸಂತವಾಣಿಯೆಂಬುದು ಎದ್ದು ಕಾಣುತ್ತಿತ್ತು. ಯಾರಾಗಲೀ ಗಮನವಿಟ್ಟು ಆದರದಿಂದ, ಗೌರವ ಬುದ್ಧಿಯಿಂದ ಮಾತುಗಳನ್ನು ಆಲಿಸುವರು.

ಅಡಿಗಡಿಗೆ ಭಾವಸಮಾಧಿಗೆ ಜಾರುತ್ತಿದ್ದುದರಿಂದ, ಅವರ ಜೊತೆಗೆ ಯಾರಾದರೂ ಒಬ್ಬರು ಇರಲೇಬೇಕು. ರಾತ್ರಿಯೂ ಅವರನ್ನು ನೋಡಿಕೊಳ್ಳುವವರು ಇರುತ್ತಿದ್ದರು. ಅವರು ಸಮಾಧಿಗೆ ಸಲ್ಲುವಾಗ ಮೊದಲು ಶರೀರವೆಲ್ಲ ಸರಳವಾಗಿ, ಸಡಿಲವಾಗಿ ಬಿಡುವುದು (ರಿಲ್ಯಾಕ್ಸ್‌ಡ್). ಅನಂತರ ಸ್ವಲ್ಪ ಬಿಗಿತ. ಆದರೆ ಯಾವ ಮಾಂಸಖಂಡದಲ್ಲಾಗಲಿ, ನರಗಳಲ್ಲಾಗಲಿ, ದೇಹದ ಯಾವ ಭಾಗದಲ್ಲಾಗಲಿ ಎಳೆತ, ಸೆಳೆತ ಮೊದಲಾಗಿ ಏನೂ ಇರದು. ಅಂಗಾಂಗಗಳನ್ನು ಅಲುಗಾಡಿಸಿದೆ ಕುಳಿತುಬಿಡುವರು.

ಎರಡೂ ಕೈಗಳನ್ನು ಮುಂಭಾಗದಲ್ಲಿ ತೊಡೆಗಳ ಮೇಲೆ ಜೋಡಿಸಿ ಇರಿಸಿಕೊಳ್ಳುವರು. ಕೈಬೆರಳುಗಳು ಹೆಣೆದುಕೊಳ್ಳುವುವು. ಮುಖ ನಿರುದ್ವಿಗ್ನವಾಗಿ ನಿರಾಳವಾಗಿ ಸ್ವಲ್ಪ ಮೇಲೆದ್ದು ನಿಲ್ಲುವುದು; ಶಾಂತವಾದ ಮುಖಮುದ್ರೆ. ಕಣ್ಣುಗಳು ಪೂರ್ಣವಾಗಿ ಮುಚ್ಚಿರುತ್ತಿರಲಿಲ್ಲ ; ತೆರೆದುಕೊಂಡ ಭಾಗದಲ್ಲಿ ನೋಟ ನೆಲೆಯಾಗಿ ನಿಂತಿರುತ್ತಿತ್ತು. ಅರೆಬಿರಿದ ತುಟಿಗಳು; ಮಂದಹಾಸವೊಂದು ಹೊರಬಂದು ಬೆಳಗುತ್ತಿತ್ತು.

ಸಮಾಧಿಯಿಂದ ಏಳುವಾಗ, ನೀರಿನಲ್ಲಿ ಮುಳುಗಿದ್ದವನು ಮೇಲೆದ್ದ ಹಾಗೆ, ಏದುತ್ತಿದ್ದರು. ಯಾರೊಂದಿಗೋ ಮಾತನಾಡುತ್ತಿರುವಂತೆ ಇರುತ್ತಿತ್ತು ; ಆದರೆ ಮಾತುಗಳು ಅರ್ಥವಾಗುತ್ತಿರಲಿಲ್ಲ.

ಅವರ ದಿನಚರಿಯ ಓರೆನೋಟವೊಂದೂ ನಮಗೆ ದೊರಕುತ್ತದೆ (ಹಲಧಾರಿಯ ನೆನಪಿನಿಂದ).

ಠಾಕುರರು ದಕ್ಷಿಣೇಶ್ವರದಲ್ಲಿರುವಾಗ, ಸಾಧನೆಯಿಂದ ಬಳಲಿದ್ದರಾಗಿ, ಬಹುವೇಳೆ ಅಸ್ವಸ್ಥರಾಗಿಯೇ ಇರುತ್ತಿದ್ದುದರಿಂದ, ಅವರು ಒಬ್ಬರೇ ಇರುತ್ತಿರಲಿಲ್ಲ. ಜೊತೆಗೆ ಯಾರಾದರೊಬ್ಬರು (ಅಣ್ಣ ರಾಮೇಶ್ವರನ ಮಗ ಹಲಧಾರಿಯೋ, ಚಿಕ್ಕಪ್ಪನ ಮೊಮ್ಮಗ ಹೃದಯರಾಮನೋ, ಅಣ್ಣ ರಾಮಕುಮಾರನ ಮಗ ರಾಮಾಕ್ಷಯನೋ ಯಾರಾದರೊಬ್ಬರು) ಇರುತ್ತಿದ್ದರು. ರಾತ್ರಿ ಅವರ ಕೋಣೆಯಲ್ಲೇ ನೆಲದ ಮೇಲೆ ಮಲಗಿರುತ್ತಿದ್ದರು.

ಅವರ ನಿದ್ರೆ ತುಂಬ ಲಘುವಾದುದು. ಸುಮಾರು ಒಂದು ಗಂಟೆ ಮಲಗಿದರೆ ಆಯಿತು. ಉಳಿದ ವೇಳೆಯೆಲ್ಲ ಎದ್ದು ಕೋಣೆಯಲ್ಲೇ ಓಡಾಡುವರು, ಅಥವಾ ಧ್ಯಾನದಲ್ಲಿ ಕೂಡುವರು. ಭಜನೆಗಳನ್ನು ಹಾಡುತ್ತ ತಿರುಗಾಡುವರು. ಸಮಾಧಿಸ್ಥಿತಿಯಲ್ಲಿರುವರು.

ಠಾಕುರರು ಮೂರು-ಮೂರುವರೆಗೆಲ್ಲ ಎದ್ದು ಬಿಡುವರು. ಮಂಚದಿಂದ ಇಳಿದು ಕೋಣೆಯಿಂದ ಹೊರಗಾಗಿಬಿಡುವರು. ಆ ವೇಳೆಗೆ ಪರಿಚಾರಕನು ತಾನೂ ಎದ್ದು ಅವರ ನೀರಿನ ತಂಬಿಗೆಯನ್ನೂ ಮಡಿಬಟ್ಟೆಯನ್ನೂ ಹಿಡಿದು, ಅವರ ಹಿಂದೆಯೋ ಮುಂದೆಯೋ ಹೋಗುವನು. ಠಾಕುರರು ತೋಟದಲ್ಲಿನ ಕೊಳದ ಬಳಿ ಬಂದು, ಬಟ್ಟೆ ಬಿಚ್ಚಿ, ದಡದ ಮೇಲೆ ಕೂತು ಕಾಲನ್ನು ನೀರಿನಲ್ಲಿ ಇಳಿಬಿಟ್ಟು ಆಡಿಸುತ್ತ ಕೂಡುವರು. ಪರಿಚಾರಕನು ರಾತ್ರಿಯ ಬಟ್ಟೆಯನ್ನು ಒಗೆದು ಮಡಿ ಮಾಡಿ, ತಂಬಿಗೆ ನೀರನ್ನು ಅವರ ಕೈಗೆ ಕೊಡುವನು. ಅವರು ನೀರಿನಿಂದ ಮುಖ, ಕೈಕಾಲುಗಳನ್ನು ತೊಳೆದುಕೊಂಡು ಚೌಕವೊಂದನ್ನು ನಡುವಿಗೆ ಸುತ್ತಿಕೊಂಡು ಕೋಣೆಯತ್ತ ನಡೆಯುವರು.

ಕೋಣೆಗೆ ಬಂದ ಮೇಲೆ, ಮಡಿಬಟ್ಟೆಯನ್ನುಟ್ಟು ಹಲ್ಲುಜ್ಜಿ ಬಾಯಿ ಮುಕ್ಕಳಿಸಲು ದಕ್ಷಿಣದ ಹಜಾರಕ್ಕೆ ಹೋಗುವರು. ಇದಾದ ಮೇಲೆ ಅಂಗೈಯಲ್ಲಿ ಸ್ವಲ್ಪ ಗಂಗಾಜಲವನ್ನು ಹಿಡಿದು "ಬ್ರಹ್ಮವಾರಿ, ಬ್ರಹ್ಮವಾರಿ, ಗಂಗಾ, ಗಂಗಾ, ಹರಿಃ ಓಂ ತತ್ಸತ್" ಎಂದು ಹೇಳಿ ತಲೆಯ ಮೇಲೆ ಪ್ರೋಕ್ಷಣೆ ಮಾಡಿಕೊಳ್ಳುವರು.

ಅನಂತರ ಅವರು ಜಗನ್ನಾಥನ, ಕಾಳಿಯ ಪ್ರಸಾದವನ್ನಿಷ್ಟು ಬಾಯಿಗೆ ಹಾಕಿಕೊಳ್ಳುವರು. ತಮ್ಮ ಕೈ ಚೀಲದಿಂದ ತಾರಕೇಶ್ವರನ ಪ್ರಸಾದವಾದ ಬಿಲ್ವಪತ್ರದ ಎಸಳುಗಳನ್ನು ಎತ್ತಿಕೊಂಡು ತಿನ್ನುವರು. ಇದಾದ ಮೇಲೆ ಕೋಣೆಯಲ್ಲಿರುವ ಎಲ್ಲ ಚಿತ್ರಪಟಗಳೆದುರು ನಿಂತು ನಮಸ್ಕರಿಸುವರು. ಅವರು ಬಯಸಿ ಸಂಗ್ರಹಿಸಿದ

ಚಿತ್ರಗಳು (ಕೋಣೆಯ ಗೋಡೆಗಳ ಮೇಲೆ ತೂಗಿ ಹಾಕಿದುವು) ಪುರಿ ಜಗನ್ನಾಥ, ಕಾಳಿಘಾಟಿನ ಕಾಳಿ, ಗೌರಾಂಗ, ಧ್ರುವ, ಪ್ರಹ್ಲಾದ ಮತ್ತು ಕಮಲಕಾಮಿನಿ (ಲಕ್ಷ್ಮಿ). ಅನಂತರ ತಮ್ಮ ಸಣ್ಣಮಂಚದ ಮೇಲೆ ಕೂಡುವರು. ಅವರು ಪುರಿ ಜಗನ್ನಾಥನ ಪರಮಭಕ್ತರು. ಕಲಿಯುಗದಲ್ಲಿ ಜಗನ್ನಾಥನೇ ದೈವ ಎಂದು ನಂಬಿದ್ದವರು. ಬಲರಾಮ ಬಸು ಮತ್ತೆ ಮತ್ತೆ ಜಗನ್ನಾಥ ಕ್ಷೇತ್ರಕ್ಕೆ ಹೋಗಿ ಅಲ್ಲಿನ ಪ್ರಸಾದವನ್ನು ತಂದುಕೊಡುವರು. ಇವರು ಭಕ್ತಿಯಿಂದ ಅದನ್ನು ಸ್ವೀಕರಿಸಿ ಜೋಪಾನವಾಗಿ ಇರಿಸಿಕೊಳ್ಳುವರು. ಆದರೆ ಅವರು ಮಾತ್ರ ಎಂದೂ ಜಗನ್ನಾಥ ಕ್ಷೇತ್ರಕ್ಕೆ ಹೋಗಿಬರಲೇ ಇಲ್ಲ. ಕಲಿಯುಗದಲ್ಲಿ ಪುರಿ ಜಗನ್ನಾಥ, ಗಂಗೆಯ ನೀರು, ಬೃಂದಾವನ ಭೂಭಾಗದ ಮಣ್ಣು ಇವು ದುರ್ಲಭವೆಂದು ಅವರು ಮತ್ತೆ ಮತ್ತೆ ಹೇಳುತ್ತಿದ್ದರು.

ಆಗ ಭಕ್ತರು ಬರುವರು. ಅವರೊಂದಿಗೆ ಒಂಬತ್ತು-ಹತ್ತು ಗಂಟೆಯವರೆಗೂ ಮಾತನಾಡಿದ ನಂತರ ಪರಿಚಾರಕನು ಅವರ ಮೈಗೆ ತೈಲವನ್ನುಜ್ಜಿ ಮಜ್ಜನಕ್ಕೆ ಸಿದ್ಧಮಾಡುವನು.

ತೈಲವನ್ನುಜ್ಜಿದ ನಂತರ ಠಾಕುರರು ಎದ್ದು ಚಾಂದನೀ ಸ್ನಾನಘಟ್ಟದ ಕಡೆ ಹೊರಡುವರು. ಇದು ದಕ್ಷಿಣೇಶ್ವರದ ಪ್ರಧಾನ ಸ್ನಾನಘಟ್ಟ. ಗುಡಿಗೆ ಬರುವುದೂ ಇಲ್ಲಿಂದಲೇ; ದೋಣಿಗಳು ಕಾಣಿಸಿಕೊಳ್ಳುವುದೂ ಇಲ್ಲಿಯೇ. ಇಲ್ಲಿ ಗಂಗಾಸ್ನಾನ ಮಾಡಿದ ಮೇಲೆ ಕಾಳಿಯ ಗುಡಿಗೆ ಹೋಗುವರು. ಹೂಗಳನ್ನೂ ಬಿಲ್ವಪತ್ರಗಳನ್ನೂ ದೇವಿಯ ಪಾದಗಳಿಗೆ ಅರ್ಪಿಸಿ, ಸಮಾಧಿಯಲ್ಲಿ ಸ್ವಲ್ಪ ಕಾಲ ಕೂಡುವರು.

ಶ್ರೀ ರಾಮಕೃಷ್ಣರದ್ದು ಎರಡು ಮುಖಗಳು. ಒಂದು ನಿಷ್ಠಾವಂತ ಸನಾತನಿಯದು, ಇನ್ನೊಂದು ಅವಧೂತಯೋಗಿಯದು. ಬಹುವೇಳೆ ಆಚಾರದ ಎಲ್ಲ ವಿಧಿ-ನಿಷೇಧಗಳನ್ನೂ ಕ್ರಮವರಿತು, ತಪ್ಪದೆ, ಎಚ್ಚರಿಕೆಯಿಂದ ಪರಿಪಾಲಿಸುವರು. ಪೂಜಾದಿಗಳನ್ನು ವಿಧಿವತ್ತಾಗಿ ನಡೆಸುವರು. ಒಮ್ಮೊಮ್ಮೆ ಹಾಸಿಗೆಯಿಂದ ಎದ್ದೊಡನೆ "ತಿನ್ನಲು ಏನಾದರೂ ಕೊಡಿ" ಎಂದು ಕೇಳುವರು. ಆಹ್ನಿಕಕ್ಕೆಂದು ಕೂತೊಡನೆ ಭಾವಸಮಾಧಿಯನ್ನು ಸೇರಿಬಿಡುವರು. ಪೂಜೆಗೆಂದು ಕಾಳಿಯ ಮುಂದೆ ಬಂದಾಗ, ದಿವ್ಯೋನ್ಮಾದದ ಅನುಭವವೇ.

ಅನಂತರ ಬಳಕೆಗೆ ಬಂದ ಅಭಿಪ್ರಾಯದಲ್ಲಿ ಅವರು ಅನಕ್ಷರಸ್ಥರು, ಏನನ್ನೂ ಓದಿದವರಲ್ಲ. ಆದರೆ ಇದು ಸರಿಯಲ್ಲ. ಇಂಗ್ಲಿಷ್‌ವಿದ್ಯೆ ಇರಲಿಲ್ಲ ಎಂಬಷ್ಟು

ಮಟ್ಟಿಗೆ ದಿಟ. 'ಥ್ಯಾಂಕ್ಯು' ಎಂಬುದನ್ನು ಬಿಟ್ಟರೆ ಅವರಿಗೆ ಇನ್ನೊಂದು ಇಂಗ್ಲಿಷ್ ಮಾತು ಬಾರದು. ಅವರು ಹೆಚ್ಚು ಓದಿರಲಿಲ್ಲದಿದ್ದರೂ ಅವರ ತಂದೆ ಕ್ಷುದಿರಾಮರೂ ಅಣ್ಣ ರಾಮಕುಮಾರನೂ ದೊಡ್ಡ ಪಂಡಿತರು. ಅವರೊಂದಿಗೆ ಒಡನಾಟ ಇದ್ದಿತಾಗಿ ಇವರಿಗೂ ಶಾಸ್ತ್ರಭಾಗದ ಪರಿಚಯ ಚೆನ್ನಾಗಿಯೇ ಆಯಿತು. ಮತ್ತೆ, ಅವರು ದಕ್ಷಿಣೇಶ್ವರಕ್ಕೆ ಬಂದ ಮೇಲೆ ಅವರನ್ನು ನೋಡಿಕೊಳ್ಳಲೆಂದು ಅವರೊಂದಿಗೆ ಬಂದ ಹಲಧಾರಿಯೂ ವಿದ್ವಾಂಸನೇ. ದಿನವೂ ಬೆಳಿಗ್ಗೆ ಪೂಜಾದಿಗಳು ಮುಗಿದ ಮೇಲೆ ಹಲಧಾರಿ ಭಾಗವತವೇ ಮೊದಲಾದ ಗ್ರಂಥಗಳನ್ನು ಕುರಿತು ಪ್ರವಚನ ಮಾಡುತ್ತಿದ್ದನು. ಶ್ರೀ ರಾಮಕೃಷ್ಣರು ಈ ಸಂದರ್ಭಗಳಲ್ಲಿ ಅಲ್ಲಿಯೇ ಇದ್ದು, ಅನೇಕ ವಿಚಾರಗಳನ್ನು ಅರಿತುಕೊಂಡರು; ಅವರ ವಿದ್ವತ್ತೆಯನ್ನು ಕೇಶವಚಂದ್ರ ಸೇನರೂ ಮೆಚ್ಚಿಕೊಂಡಿದ್ದರು.

ರಾಣಿ ರಾಸಮಣಿಯ ಅಪೇಕ್ಷೆಯಂತೆ ದಕ್ಷಿಣೇಶ್ವರದಲ್ಲಿ ಕಾಳೀಮಂದಿರದ ನಿರ್ಮಾಣ ನಡೆಯುತ್ತಿದ್ದ ಆರೇಳು ವರ್ಷಗಳು ಶ್ರೀ ರಾಮಕೃಷ್ಣರು ಅಲ್ಲಿಯೇ ಇದ್ದರು. ನವೀನಪಾಲ ರಾಯಚೌಧುರಿ (ಜೋಗೀಂದ್ರನಾಥ ಅಥವಾ ಜೋಗಿನ್ ತಂದೆ) ಅದೇ ಊರಿನವರು. ಕಾಳಿಯ ಗುಡಿ ಕಟ್ಟುವ ಮೊದಲೇ ಅಲ್ಲಿದ್ದವರು. ತುಂಬ ಆಚಾರಶೀಲರಾದ ಅವರು ಮನೆಯಲ್ಲೇ ದಿನವೂ ಭಾಗವತ ಪ್ರವಚನ ಮಾಡುತ್ತಿದ್ದರು. ಶ್ರೀ ರಾಮಕೃಷ್ಣರು ಒಂದು ದಿನವೂ ತಪ್ಪದೆ ಬರುತ್ತಿದ್ದರು.

ಆದರೆ ಅವರು ಪುಸ್ತಕದ ಪಾಠವನ್ನು ಒಪ್ಪಿಸುತ್ತಿರಲಿಲ್ಲ. ತಮ್ಮ ಅನುಭವದ ಮೇಲೇ ಅವರ ಮಾತುಕತೆ.

ಅವರಿಗೆ ಯಾವ ಬಗೆಯ ಬಂಧನವೂ ಹಿಡಿಸುತ್ತಿರಲಿಲ್ಲ. ಕಡೆಗೆ ಅವರ ಹಾಸುಗೆಗೆ ಹಾಕುವ ಸೊಳ್ಳೆಪರದೆಯನ್ನೂ ಸುಮ್ಮನೆ ಇಳಿಬಿಡಬೇಕಷ್ಟೆ; ಹಾಸುಗೆಯ ಕೆಳಗೆ ಸರಿಸಿ ಭದ್ರಪಡಿಸಬಾರದು. ಅವರ ಅಂಗಿಯ ಗುಂಡಿಗಳನ್ನೂ ಅವರು ಹಾಕಿಕೊಳ್ಳುತ್ತಿರಲಿಲ್ಲ ; ಶಿಷ್ಯರು ಯಾರಾದರೂ ಹಾಕಬೇಕಷ್ಟೆ. ಕೋಣೆಯ ಬಾಗಲಿಗೆ ಅಗುಳಿ ಹಾಕುತ್ತಿರಲಿಲ್ಲ. ರಾತ್ರಿ, ಹಗಲು ಅದು ತೆರೆದೇ ಇರಬೇಕು.

ಮತ್ತೆ, ಅವರು ಸಾಮಾನ್ಯವಾಗಿ ದಕ್ಷಿಣೇಶ್ವರದಲ್ಲೇ ಊಟ ಮಾಡುತ್ತಿದ್ದುದು; ತಪ್ಪಿದರೆ ಕಲ್ಕತ್ತೆಯ ಬಸುಭವನದಲ್ಲಿ. ಉಳಿದಂತೆ "ಅಡುಗೆ ಪವಿತ್ರವಾಗಿಲ್ಲ, ಅವರಿವರ ಹಂಗು ನನಗೇಕೆ" ಎಂದುಬಿಡುವರು.

ಶ್ರೀ ರಾಮಕೃಷ್ಣ ಪರಮಹಂಸರ ಮಾತುಕತೆಗಳು

೧

ರಾಮಲಾಲ ಚಟ್ಟೋಪಾಧ್ಯಾಯ (ಹಲಧಾರಿ) (೧೮೫೩-೧೯೩೩) ಶ್ರೀ ರಾಮಕೃಷ್ಣರ ಅಣ್ಣ ರಾಮೇಶ್ವರನ ಮಗ; ಮನೆಯಲ್ಲಿ ಎಲ್ಲರೂ ಅವನನ್ನು ಹಲಧಾರಿಯೆಂದೇ ಕರೆಯುತ್ತಿದ್ದರು. ಎಳೆವೆಯಿಂದಲೂ ಅವನಿಗೆ ವಿದ್ಯೆಯಲ್ಲಿ ಆಸಕ್ತಿ. ಏಳು ವರ್ಷಗಳು ಸಂಸ್ಕೃತ, ಸಾಹಿತ್ಯ, ವೇದಾಂತಗಳನ್ನು ಅಭ್ಯಾಸ ಮಾಡಿ,

ಶ್ರೀ ರಾಮಕೃಷ್ಣರು

ಆಗಮೋಕ್ತ ಪೂಜಾವಿಧಾನಗಳಲ್ಲಿಯೂ ನಿಪುಣನಾಗಿದ್ದನು. ಸದಾಚಾರಶೀಲ, ಸಜ್ಜನ, ಗಂಭೀರ ಸ್ವಭಾವದವನು.

ತನ್ನ ಇಪ್ಪತ್ತನೆಯ ವಯಸ್ಸಿಗೇ ದಕ್ಷಿಣೇಶ್ವರಕ್ಕೆ ಬಂದು ಅಲ್ಲಿದ್ದ ರಾಧಾಕಾಂತ ದೇವಾಲಯದಲ್ಲಿ ಅರ್ಚಕ ವೃತ್ತಿಯನ್ನು ಹಿಡಿದನು. ಆ ವೇಳೆಗೆ ಹೃದಯನು ದಕ್ಷಿಣೇಶ್ವರವನ್ನು ಬಿಟ್ಟು ಹೊರಟುಹೋಗಿದ್ದುದರಿಂದ, ಅರ್ಚನೆಗೆ ಯಾರಾದರೂ

ಬೇಕಾಗಿತ್ತು. ಪರಮ ವೈಷ್ಣವನಾಗಿದ್ದುದರಿಂದ ಅಲ್ಲಿನ ಪ್ರಧಾನ ದೇವತೆಯಾಗಿದ್ದ ಕಾಳಿಯ ಪೂಜೆ ಮಾಡುವುದು ಅವನ ಮನಸ್ಸಿಗೊಡಂಬಡಲಿಲ್ಲ. ರಾಧಾಕಾಂತ ದೇವರ ಪೂಜೆಯನ್ನು ಹಿಡಿದನು. ಅದೂ ಅಲ್ಲಿಯೇ ಇದ್ದಿತಷ್ಟೆ. ಅಲ್ಲಿನ ಪ್ರಸಾದವನ್ನು ತಿನ್ನಲು ಅವನಿಗೆ ಅಡ್ಡಿಯೇನಿಲ್ಲ.

ಹಲಧಾರಿ ದಕ್ಷಿಣೇಶ್ವರಕ್ಕೆ ಬಂದು ಶ್ರೀ ರಾಮಕೃಷ್ಣರನ್ನು ಸೇರಿಕೊಂಡ ಹೊಸದರಲ್ಲಿ ಅವರ ಭಾವಾವೇಶಗಳನ್ನು ಉನ್ಮಾದದ ಸ್ಥಿತಿಯೆಂದೇ ಭಾವಿಸಿದ್ದ. ಆದರೆ ಅವರು ಆಗ ಆಡುತ್ತಿದ್ದ ಮಾತುಗಳನ್ನು ಕೇಳಿ, 'ಇದು ಈಶ್ವರಾವೇಶವೇ ಇದ್ದೀತು; ಭೂತಚೇಷ್ಟೆಯಲ್ಲ' ಎಂಬ ಮನವರಿಕೆ ಮಾಡಿಕೊಂಡ. ಒಂದು ದಿನ, ಶ್ರೀ ರಾಮಕೃಷ್ಣರು ಭಾವಸಮಾಧಿಯಲ್ಲಿದ್ದಾಗ ಅವರ ಮುಖದಲ್ಲಿ ಮೂಡಿಕೊಂಡ ಅಪೂರ್ವ ತೇಜಸ್ಸನ್ನು ನೋಡಿ ಹಲಧಾರಿ "ದಿಟವಾಗಿಯೂ ಇವನೊಳಗೆ ಈಶ್ವರಾವೇಶವೇ ಇರುವುದು' ಎಂದು ದೃಢಪಡಿಸಿಕೊಂಡ. ಸಮಾಧಿಯಿಳಿದು ಎಚ್ಚರಗೊಂಡ ಮೇಲೆ ಇದನ್ನು ಶ್ರೀ ರಾಮಕೃಷ್ಣರಿಗೆ ಹೇಳಿಯೂ ಹೇಳಿದ. ಅದಕ್ಕೆ ಅವರು 'ಮನಸ್ಸು ಏಕಾಗ್ರವಾಗುವುದು ಆವೇಶವಿರುವಾಗಲೇ; ಅಲ್ಲಿ ಆಗ ಯಾವ ಭ್ರಮೆಗೂ ಅವಕಾಶವಿರದು' ಎಂದರು.

ಮರುದಿನ, ಹಲಧಾರಿಯು ರಾಧಾಕಾಂತ ದೇಗುಲದ ಪೂಜೆ ಮುಗಿಸಿ, ಹೊರಗೆ ನಸ್ಯ ತೀಡುತ್ತ ಕುಳಿತಿದ್ದಾಗ ಶ್ರೀ ರಾಮಕೃಷ್ಣರು ಬಂದರು. ದಿನವೂ ಅವರು ಅಲ್ಲಿಗೆ ಬಂದು ಒಂದೆರಡು ಗಂಟೆ ಹಲಧಾರಿಯೊಂದಿಗೆ ಮಾತನಾಡುತ್ತ, ಅವನು ಓದುವ ಭಾಗವತ, ಅಧ್ಯಾತ್ಮರಾಮಾಯಣಗಳನ್ನು ಕೇಳುತ್ತ ಕುಳಿತಿರುವುದು ವಾಡಿಕೆ. ಅಂದೂ ಹಾಗೆಯೇ ಬಂದರು. ಅಂದು ಹಲಧಾರಿ ಮೂಗಿಗೆ ನಸ್ಯವೇರಿಸಿ ಶಾಸ್ತ್ರಾಭ್ಯಾಸದ ಅಗತ್ಯವನ್ನು ವಿವರಿಸತೊಡಗಿದನು. ಶ್ರೀ ರಾಮಕೃಷ್ಣರು 'ಶಾಸ್ತ್ರಾಭ್ಯಾಸ ಮಾಡದೇನೆ, ನನಗೆ ಶಾಸ್ತ್ರದ ಸಾರ ತಿಳಿದಿದೆ' ಎಂದರು.

ಅದಕ್ಕೆ ಹಲಧಾರಿ ಕಣ್ಣರಳಿಸಿ, ತಲೆಯೆತ್ತಿ "ಅದು ಮೂರ್ಖನ ಮಾತು! ಶಾಸ್ತ್ರ ಓದದೆ ಶಾಸ್ತ್ರದ ಅರ್ಥ ತಿಳಿಯಿತೆಂದರೆ ಅದು ಹೇಗೆ?" ಎಂದು ಕೇಳಿದನು. ಶ್ರೀ ರಾಮಕೃಷ್ಣರು ತಮ್ಮ ಎದೆಯ ಕಡೆ ಬೆರಳು ತೋರಿಸುತ್ತ "ಇದರೊಳಗೆ ಇರುವುದು ನನಗೆ ಎಲ್ಲವನ್ನೂ ತಿಳಿಸುತ್ತದೆ. ನನ್ನೊಳಗೆ ಈಶ್ವರಾವೇಶ ಇದೆಯೆಂದು ನೀನೇ ನೆನ್ನೆ ಹೇಳಲಿಲ್ಲವೆ?" ಎಂದುತ್ತರವಿತ್ತರು.

೨

ಶ್ರೀ ರಾಮಕೃಷ್ಣರ ಸಾಧನೆಯ ಆರಂಭದ ದಿನಗಳಲ್ಲಿ ನಡೆದದ್ದು.

ಒಮ್ಮೆ ಹಲಧಾರಿ ಶ್ರೀ ರಾಮಕೃಷ್ಣರಿದ್ದಲ್ಲಿಗೆ ಬಂದನು. ಆಗ ಶ್ರೀ ರಾಮಕೃಷ್ಣರು (ಆಗ ಇನ್ನೂ ಗದಾಧರರನೇ) ಭಾವಸಮಾಧಿಯಲ್ಲಿದ್ದರು. ಎಚ್ಚರ ತಿಳಿದಮೇಲೆ ಎದುರಿಗೆ ಹಲಧಾರಿ ಇದ್ದುದನ್ನು ಕಂಡು, ತಾವು ಸಮಾಧಿಯಲ್ಲಿ ನೋಡಿದುದನ್ನು ಅವನಿಗೆ ತಿಳಿಸತೊಡಗಿದರು. ಹಲಧಾರಿ ಎಲ್ಲವನ್ನೂ ಕೇಳಿ, "ಗದಾಇ, ಭಾವದಲ್ಲಿ ಕಂಡದ್ದನ್ನು ದಿಟವೆಂದು ತಿಳಿಯಬಾರದು. ಇಂದ್ರಿಯಗಳು ಎಚ್ಚರದಲ್ಲಿ ಪಡೆದು ಕೊಂಡದ್ದೇ ದಿಟ. ಭಾವದಲ್ಲಿ ಬರಿಯ ಕಲ್ಪನೆಗಳಷ್ಟೆ; ಮನಸ್ಸಿನ ವಿಕಾರಗಳು. ಶಾಸ್ತ್ರವೂ ಇದನ್ನೆ ಹೇಳುತ್ತದೆ" ಎಂದು ಹೇಳಿದನು.

ಇದನ್ನು ಕೇಳಿದ ಶ್ರೀ ರಾಮಕೃಷ್ಣರಿಗೆ ಅಳುವೇ ಬಂದಿತು. ಇಲ್ಲಿಯವರೆಗೆ ತಾನು ನಂಬಿಕೊಂಡಿದ್ದುದೆಲ್ಲ ಸಟೆಯೇ ಆಯಿತೆ? ತಾನು ವಿದ್ಯಾವಂತನಲ್ಲವೆಂದು, ಅಮಾಯಕನೆಂದು ಬಗೆದು ತನ್ನ ಇಷ್ಟದೈವವಾದ ಕಾಳಿಯೇ ತನಗೆ ಭಾವಸಮಾಧಿ ಯನ್ನೊದಗಿಸಿ ಮೋಸಮಾಡಿ ಬಿಟ್ಟಳೆ? ಅಳು ತಡೆಯಲಾಗದೆ ಅವರು ಪ್ರಜ್ಞೆ ತಪ್ಪಿ ಬಿದ್ದುಬಿಟ್ಟರು. ಕಣ್ಣೆದುರು ದಟ್ಟವಾದ ಹೊಗೆ ಮೂಡಿಕೊಂಡಿತು. ಹೊಗೆಯೊಳಗಿನಿಂದ ಸುಂದರ ಪುರುಷನೊಬ್ಬ ಕಾಣಿಸಿಕೊಂಡು ರಾಮಕೃಷ್ಣರಿಗೆ "ನೀನು ಭಾವದ ನೆಲೆಯಲ್ಲೇ ನಿಲ್ಲು!" ('ಭಾವ ಮುಖೇ ಥಾಕ್ ತುಇ') ಎಂದು ಮೂರು ಬಾರಿ ಹೇಳಿದಂತಾಯಿತು.

ಈ ಉಪದೇಶದಿಂದ ಅವರ ಮನಸ್ಸು ನೆಮ್ಮದಿಗೊಂಡಿತು. ಹಲಧಾರಿಯ ಮಾತಿಗೆ ಗಮನ ಕೊಡಬಾರದೆಂದುಕೊಂಡರು.

ಭಾವಸಮಾಧಿಯಲ್ಲಿನ ವಿದ್ಯಮಾನಕ್ಕೆ ಎಚ್ಚರದ ಸಾಕ್ಷಿ ಬೇಕೆ? ಎಚ್ಚರವನ್ನು ತಳ್ಳಿಹಾಕಿಯೇ ಅಲ್ಲವೆ ಭಾವಸಮಾಧಿ ಒದಗುವುದು? ಅಲ್ಲಿ ದಿಟವೆಂದಾದುದು ಇಲ್ಲಿ ಸಟೆ; ಇಲ್ಲಿನದು ಸಟೆಯೆಂದು ತೋರಿಕೊಳ್ಳುವುದು ಅಲ್ಲಿಯೇ. ಅದನ್ನು ಬಿಟ್ಟರೆ ಇದು; ಇದನ್ನು ಬಿಟ್ಟರೆ ಅದು! ಉಪನಿಷತ್ತು 'ಸಂಪರಾಯ'ವೆನ್ನುವುದು ಇದೇ. ಇಂದ್ರಿಯಗಳಾಚೆ, ಮನಸ್ಸಿನಾಚೆ ಇರುವುದೇ ತತ್ತ್ವ. ಅದು ವ್ಯವಹಾರದ ಅನುಭವಕ್ಕೆ ಬರಲಾರದು. ವ್ಯವಹಾರದ ಪ್ರಪಂಚವೊಂದೇ ದಿಟವೆಂದು ನಂಬಿಕೊಂಡ ವರಿಗೆ ತತ್ತ್ವದ ಸುಳಿವು ಸಿಗಲಾರದು.

೩

ಇನ್ನೊಮ್ಮೆ ಹಲಧಾರಿಯು ಶ್ರೀ ರಾಮಕೃಷ್ಣರಿಗೆ "ಗದಾಇ, ಕಾಳಿಯು ತಾಮಸ ದೇವತೆ. ಅವಳನ್ನು ಆರಾಧಿಸಿ ನೀನು ಪಡೆಯುವುದಾದರೂ ಏನು? ಪರಮಾರ್ಥದ ದಾರಿಯಲ್ಲಿ ಮುಳ್ಳಿನಂತೆ ಕಾಲನ್ನು ತೊಡರಿಸುತ್ತದೆ ಅಷ್ಟೆ!" ಎಂದು ಹೇಳಿದನು.

ಕೇಳಿದ್ದನ್ನೆಲ್ಲ ದಿಟವೆಂದು ನಂಬುವ ಸ್ವಭಾವ ಶ್ರೀ ರಾಮಕೃಷ್ಣರದ್ದು. ಹಲಧಾರಿಯ ಮಾತನ್ನು ಕೇಳಿ ಬೆಚ್ಚಿಬಿದ್ದರು; ಮುಗಿಲೇ ಕಳಚಿ ತಲೆಯ ಮೇಲೆ ಬಿದ್ದಂತಾಯಿತು; ದುಃಖ ಉಮ್ಮಳಿಸಿ ಬಂದಿತು. ದಿಗ್ಗನೆ ಎದ್ದು ಕಾಳಿಯ ಗುಡಿಯ ಕಡೆ ಓಡಿದರು. ಕಾಳಿಯೆದುರು ನಿಂತು ಗಳಗಳನೆ ಅಳುತ್ತ "ಅಮ್ಮ, ನೀನು ತಾಮಸ ದೇವತೆಯೆ? ನನಗೇಕೆ ಮೊದಲೇ ತಿಳಿಸಲಿಲ್ಲ? ಇಷ್ಟು ಕಾಲ ನಿನ್ನನ್ನೆ ಪರದೈವವೆಂದು ನಂಬಿಬಿಟ್ಟೆನಲ್ಲ? ಹೀಗೆ ನನಗೆ ಮೋಸಮಾಡಬಹುದೆ? ನಿನ್ನ ದಿಟವಾದ ಸ್ವರೂಪ ವೇನೆಂಬುದನ್ನು ಈಗಲಾದರೂ ತೋರಿಸು" ಎಂದು ಅಂಗಲಾಚಿ ಬೇಡಿಕೊಂಡರು. ಶ್ಯಾಮಲೆಯಾದ ಕಾಳಿ ಅವರಿಗೆ ತನ್ನನ್ನು ತಾನು ತೋರಿಸಿಕೊಂಡಳು.

ಆಗ ಸಂಶಯ ಹರಿಯಿತು, ದುಗುಡ ದೂರವಾಯಿತು, ಮನಸ್ಸು ಹಗುರಾಯಿತು. ಭಾವಸಮಾಧಿ ತಟ್ಟನೆ ಒದಗಿತು. ಎಚ್ಚರ ತಿಳಿದ ಮೇಲೆ ಹಲಧಾರಿಯನ್ನು ಹುಡುಕಿಕೊಂಡು ಹೊರಟರು. ಆ ವೇಳೆಗೆ ಹಲಧಾರಿ ತನ್ನ ನಿತ್ಯಕರ್ಮವಾದ ರಾಧಾಕಾಂತನ ಪೂಜೆಯಲ್ಲಿ ತೊಡಗಿದ್ದನು. ಆಸನದ ಮೇಲೆ ಕೂತು, ಎದುರಿಗೆ ಪೂಜೆಯ ಉಪಕರಣಗಳನ್ನೂ ನೈವೇದ್ಯದ ಸಾಮಗ್ರಿಯನ್ನೂ ಇರಿಸಿಕೊಂಡು, ವಿಷ್ಣುಮಂತ್ರವನ್ನು ಹೇಳುತ್ತ ಪೂಜೆಗೆ ಅಣಿಮಾಡಿಕೊಳ್ಳುತ್ತಿದ್ದ.

ರಾಮಕೃಷ್ಣರು ಇನ್ನೂ ಆವೇಶದಲ್ಲೇ ಇದ್ದುಕೊಂಡು, ರಾಧಾಕಾಂತನ ಗರ್ಭಗುಡಿಯ ಒಳಹೊಕ್ಕು ಹಲಧಾರಿಯ ಎದುರಿಗೇ, ಪೂಜೋಪಕರಣಗಳು, ನೈವೇದ್ಯ ಎಲ್ಲವನ್ನೂ ಬದಿಗೆ ತಳ್ಳಿ, ಕುಳಿತರು. ಅವನನ್ನೆ ದಿಟ್ಟಿಸಿ ನೋಡುತ್ತ, "ಹಲಧಾರಿ, ನನ್ನ ಕಾಳಿಯನ್ನು ನೀನು ಏನೆಂದು ತಿಳಿದೆ? ಅವಳೇನು ತಾಮಸ ದೇವಿಯಲ್ಲ! ಅವಳು ಸರ್ವೇಶ್ವರಿ, ಜಗನ್ಮಾತೆ! ಸೃಷ್ಟಿ, ಸ್ಥಿತಿ, ಲಯ ಎಂಬ ಕೆಲಸಗಳಿಗಾಗಿ ಅವಳದ್ದು ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರೂ ಗುಣಗಳು.

ಆದರೆ ತ್ರಿಗುಣಾತೀತಳೂ ಅವಳೇ; ಪರಬ್ರಹ್ಮ ಸ್ವರೂಪಿಣಿ. ಇದನ್ನು ಅವಳೇ ನನಗೀಗ ತಿಳಿಸಿದಳು!" ಎಂದು ಹೇಳಿದರು.

ಹಲಧಾರಿಗೊಂದು ಹೊಸ ಅರಿವು ಮೂಡಿಕೊಂಡಿತು. ಸಗುಣಾರಾಧನೆ ಸಾರ್ಥಕವಾಗುವುದು ನಿರ್ಗುಣತತ್ತ್ವದ ಚಿಂತನೆಯಿಂದಲೇ. ಹಲಧಾರಿ (ರಾಮಲಾಲ) ಕಾಳಿಯ ಮುಂದೆ ಭಕ್ತಿಭಾವದಿಂದ ನಿಂತಾಗ ಕಣ್ಣು ಮುಚ್ಚಿಬಿಡುತ್ತಿದ್ದ. ಶ್ರೀ ರಾಮಕೃಷ್ಣರು—

"ಅಯ್ಯಾ, ಹಾಗೆ ಕಣ್ಣು ಮುಚ್ಚುವುದು ಯಾಕೆ? ಕಾಳಿಯ ರೂಪವನ್ನು ಕಣ್ಣಾರೆ ನೋಡು, ಮನಸಾರೆ ಗ್ರಹಿಸಿಕೋ, ಹೃದಯಾರೆ ಅನುಭವಿಸು. ಧ್ಯಾನ, ಜಪ ಮುಂತಾಗಿ ಬೇರೆ ಸಾಧನೆಗಳನ್ನು ಮಾಡಬೇಕೆಂದರೆ ಬೇರೆ ಕಡೆ ಹೋಗು, ಬೇರೆ ಸಮಯವನ್ನು ಆರಿಸಿಕೋ. ಕಾಳಿಯ ಮುಂದೆ ನಿಂತಾಗ ಅವೆಲ್ಲ ಬೇಡ.

ನಿನ್ನ ತಾಯಿಯನ್ನು ನೋಡಲು ಮನೆಗೆ ಹೋದಿ ಎಂದುಕೋ. ನೀನೇನು ಕಣ್ಣು ಮುಚ್ಚಿಕೊಂಡು ತಾಯಿಯೆದುರು ನಿಲ್ಲುವೆಯಾ? ಅಥವಾ ಆಕೆಯ ನಾಮಜಪ ಮಾಡುತ್ತ ಕೂಡುವೆಯಾ?" ಎಂದರು.

ಅಣ್ಣ ರಾಮೇಶ್ವರನ ಮಗ ಹಲಧಾರಿ ದಕ್ಷಿಣೇಶ್ವರದಲ್ಲಿರುವವರೆಗೂ (೧೮೫೮- ೧೮೬೫), ರಾಧಾಕಾಂತ ದೇವರ ಗುಡಿಯ ಅರ್ಚಕನಾಗಿದ್ದನು. ದಿನವೂ ಬೆಳಿಗ್ಗೆ ಪೂಜೆ ಮುಗಿಸಿ ಹೊರಗೆ ಬಂದು ಬಾಗಿಲ ಬಳಿ ಕೂತು ಭಾಗವತ



ರಾಮಲಾಲ ಚಟ್ಟೋಪಾಧ್ಯಾಯ (ಹಲಧಾರಿ)

ಓದಿ ಅರ್ಥ ಹೇಳುತ್ತಿದ್ದನು. ಶ್ರೀ ರಾಮಕೃಷ್ಣರಿಗೆ ಭಾಗವತವೆಂದರೆ ತುಂಬ ಒಲುಮೆ. ಶುಕನ ವ್ಯಕ್ತಿತ್ವಕ್ಕೆ ಮಾರು ಹೋಗಿದ್ದರು. ದಿನವೂ ತಪ್ಪದೆ ಕೂತು ಆಲೈಸುತ್ತಿದ್ದರು.

ಒಂದು ದಿನ ಹಲಧಾರಿಯು ಭಗವದ್ವಾಕ್ಯವಾದ—

'ಅಥ ಮಾಂ ಸರ್ವಭೂತೇಷು ಭೂತಾತ್ಮಾನಂ ಕೃತಾಲಯಂ ।
ಅರ್ಹಭೇದ್ದಾನಮಾನಾಭ್ಯಾಂ ಮೈತ್ರ್ಯಭಿನ್ನೇನ ಚಕ್ಷುಷಾ ॥'

'ಎಲ್ಲ ಜೀವಿಗಳಲ್ಲೂ ನಾನಿದ್ದೇನೆ, ನೆಲೆಸಿದ್ದೇನೆ, ಅವೇ ಆಗಿದ್ದೇನೆ. ದಾನ, ಸನ್ಮಾನಗಳಿಂದ ಎಲ್ಲ ಪ್ರಾಣಿಗಳನ್ನೂ ಗೌರವಿಸಬೇಕು; ಸ್ನೇಹವನ್ನು ಬಿಡದ ಕಂಗಳಿಂದ ಕಾಣಬೇಕು!' ಎಂಬುದನ್ನು ಓದುತ್ತಿದ್ದನು.

ಒಡನೆಯೇ ಶ್ರೀ ರಾಮಕೃಷ್ಣರು—

'ಹೇಥಾಯ್ ಹೇಥಾಯ್ ಜ್ಞಾನ,
ಸೇಥಾಯ್ ಸೇಥಾಯ್ ಅಜ್ಞಾನ!'

('ಇಲ್ಲಿದೆ ಇಲ್ಲಿದೆ ಜ್ಞಾನ. ಅಲ್ಲಿ ಹೋಯಿತು ಅಜ್ಞಾನ!')

ಎಂದು ಉದ್ಗಾರ ತೆಗೆದರು.

೫೯

ಶ್ರೀ ರಾಮಕೃಷ್ಣರಿಗೆ ಪ್ರಿಯವಾದ ಭಜನೆ ಇದು: ಇದನ್ನು ಹಾಡಿಕೊಂಡು ಬೆಳಿಗ್ಗೆ, ಸಂಜೆ ಕುಣಿಯುವರು—

'ಜಯ ಗೋವಿಂದ ಜಯ ಗೋಪಾಲ
ಕೇಶವ ಮಾಧವ ದೀನದಯಾಲ
ಹರೇ ಮುರಾರೇ ಗೋವಿಂದ

ವಸುದೈವಕಿನಂದನ ಗೋವಿಂದ
ಹರೇ ನಾರಾಯಣ ಗೋವಿಂದ ಹರೇ
ಹರೇ ಕೃಷ್ಣ ವಾಸುದೇವ'

ಒಮ್ಮೆ ಹತ್ತಿರವೇ ನಿಂತಿದ್ದ ರಾಮಲಾಲನಿಗೆ 'ನೀನೂ ಹಾಡು!' ಎಂದರು. ಅವನಿಗೋ ಎಲ್ಲರೆದುರು ಹಾಡಲು ಬಲು ನಾಚಿಕೆ. ಬಾಯೇ ಬಿಡಲಿಲ್ಲ. ಆಗ ಶ್ರೀ ರಾಮಕೃಷ್ಣರು "ಭಜನೆ ಮಾಡಲು ಹೆದರಿಕೆಯೇಕೆ? ನಾಚಿಕೆಯೇಕೆ? ದೇವರ ಮುಂದೆ ಹಾಡುವಾಗ ಆ ದೇವರ ಆಕಾರವನ್ನು ಮನಸ್ಸಿನಲ್ಲಿ ರೂಪಿಸಿಕೋ; ಅದೇ ಮೂರ್ತಿ ನಿನ್ನೆದುರು ಇರುವಂತೆ ಭಾವಿಸಿಕೋ. ಅನಂತರ ಅವನಿಗಾಗಿ ನೀನು ಹಾಡುತ್ತಿರುವೆ ಎಂದು ಮನಸ್ಸಿನಲ್ಲಿ ಗಟ್ಟಿಮಾಡಿಕೋ! ನಿನ್ನನ್ನು ನೀನು ಮರೆತುಬಿಡು. ಯಾವನೋ ಒಬ್ಬ ಹುಲುಮನುಷ್ಯನೆದುರು, ಅವನಿಗಾಗಿ ಹಾಡುತ್ತಿದ್ದೀ ಎಂದುಕೊಂಡರೆ ಅವನೇನಂದುಕೊಂಡಾನು, ಏನು ತಪ್ಪು ಹುಡುಕಿಯಾನು ಎಂದು ನಾಚಿಕೆ, ಹೆದರಿಕೆ!" ಎಂದರು.

೬

ಶರತ್ಕಾಲದ ಒಂದು ರಾತ್ರಿ. ಹುಣ್ಣಿಮೆಯ ಚಂದ್ರ ಆಗಸದಲ್ಲಿ ಬೆಳಗುತ್ತ, ಹತ್ತೂ ದಿಕ್ಕುಗಳನ್ನು ಬೆಳಗಿಸುತ್ತಿದ್ದಾನೆ. ಇರುಳೋ ಹಗಲೋ ತಿಳಿಯದಂತೆ ಬೆಳಕು. ಆಗ ಹಲಧಾರಿಯ ಬಳಿ ಶ್ರೀ ರಾಮಕೃಷ್ಣರು ಬಂದರು. "ಇಂದು ಏನು ಹಲಧಾರಿ, ಹುಣ್ಣಿಮೆಯೋ ಅಮಾವಾಸ್ಯೆಯೋ?" ಎಂದು ಕೇಳಿದರು. ಅಚ್ಚರಿಗೊಂಡ ಹಲಧಾರಿ, "ಇದೇನು ಗದಾಇ, ಹೀಗೆ ಕೇಳುವೆ? ನೋಡಿದರೆ ತಿಳಿಯುವುದಿಲ್ಲವೆ? ಭೂಮಿಯ ಮೇಲೆ ನಿನ್ನಂಥ ಬೆಪ್ಪ ಇನ್ನೊಬ್ಬ ದೊರಕಲಾರ!" ಎಂದ.

ಯಾರು ಬೆಪ್ಪ, ಯಾರು ಬುದ್ಧಿವಂತ? ಬುದ್ಧಿವಂತನಿಗೆ ಎಲ್ಲವೂ ಏಕಾಕಾರವೇ; ಕತ್ತಲೆ, ಬೆಳಕೆಂಬ ಭೇದ ತೋರಿಕೊಳ್ಳಲಾರದು. ಅವನಿಗೆ ಹಗಲೂ ಇರುಳೂ ಒಂದೇ. ಭೇದಾಭೇದರಹಿತವಾದ ತತ್ತ್ವದಲ್ಲೇ ಅವನ ಗಮನವೆಲ್ಲ. ಬರಿದೆ ಶಾಸ್ತ್ರವನ್ನು ಓದಿದ ಮಾತ್ರಕ್ಕೆ ಬುದ್ಧಿವಂತನಾಗಲಾರ. ವಿವೇಕ-ವೈರಾಗ್ಯಗಳು ಬೆಳೆದು, ತತ್ತ್ವದರ್ಶನವಾದ ಮೇಲೆ ವ್ಯವಹಾರಪ್ರಪಂಚದ ಯಾವ ವಿಂಗಡಣೆಗಳೂ ಅವನಿಗೆ ತೋರಿಕೊಳ್ಳುವುದಿಲ್ಲ. ಭೇದವಿಲ್ಲದ್ದನ್ನು ಕಂಡುಕೊಳ್ಳುವವನೇ ಪೂರ್ಣಜ್ಞಾನಿ; ಅವನೇ ಬುದ್ಧಿವಂತ.

೭

ಶ್ರೀ ರಾಮಕೃಷ್ಣರೊಮ್ಮೆ ಶಾರದನೊಂದಿಗೆ (ಶಾರದಾಪ್ರಸಾದ ಮಿತ್ರ ೧೮೬೫-೧೯೧೫) ಮಾತನಾಡುತ್ತ ಕುಳಿತಿದ್ದರು. ಮಾತು ಬಂಕಿಮಚಂದ್ರ ಚಟ್ಟೋಪಾಧ್ಯಾಯರ ದೇವಿ ಚೌಧುರಾಣಿಯತ್ತ ಹೊರಳಿತು. ಶಾರದ ಹೇಳಿದ—

"ಪುಸ್ತಕಗಳನ್ನು ಓದದೆ ತಿಳಿವಳಿಕೆ ಬಾರದು. ದೇವರನ್ನು ತಿಳಿಯಬೇಕೆಂದರೆ ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡಬೇಕು ಎಂದು ಗ್ರಂಥಕಾರರ ಅಭಿಪ್ರಾಯವಿರುವಂತೆ ತೋರುತ್ತದೆ."

ಶ್ರೀ ರಾಮಕೃಷ್ಣರು—

"ಅದು ಹೇಗೆ, ಶಾರದ? ಈಗ ನೋಡು, ನಮ್ಮ ಜದು ಮಲ್ಲಿಕ ಇದ್ದಾನೆ. ಅವನನ್ನು ತಿಳಿಯಬೇಕೆಂದುಕೋ. ಅವನಿಗೆ ಎಷ್ಟು ಜಮೀನಿದೆ, ಎಷ್ಟು ಮನೆಗಳಿವೆ, ಮನೆಗಳಲ್ಲಿ ಯಾರು ಯಾರು ಇದ್ದಾರೆ, ಸರಕಾರದ ಠೇವಣಾತಿಗಳಲ್ಲಿ ಅವನ ಹೆಸರಿನಲ್ಲಿ ಎಷ್ಟು ಹಣ ಇದೆ, ಇವನ್ನೆಲ್ಲ ತಿಳಿದುಕೊಂಡರೆ ಜದು ಮಲ್ಲಿಕನನ್ನು ತಿಳಿದಂತಾಯಿತೆ?

ದೇವರನ್ನು ತಿಳಿಯಲು ದೇವರ ಕಡೆಗೇ ನೇರಾಗಿ ಮುನ್ನುಗ್ಗಬೇಕು. ಅವನ ಪ್ರಪಂಚವನ್ನು ಕುರಿತು ತಿಳಿದುಕೊಂಡರೆ ಅದರಿಂದ ವೇಳೆ ಹಾಳು ಅಷ್ಟೆ. ಪ್ರಪಂಚದ ವಿಚಾರ ತಿಳಿಯುವುದು ಅಶುದ್ಧವಾದ ಮನಸ್ಸು. ಅಶುದ್ಧವಾದ ಮನಸ್ಸು ದೇವರನ್ನು ತಿಳಿಯಲಾರದು! ವ್ಯಾಸಂಗದಿಂದ ಸಿದ್ಧವಾಗುವುದು ಅಶುದ್ಧವಾದ ಮನಸ್ಸು!"

೮

ವೈಕುಂಠನಾಥ ಸನ್ಯಾಲ್ (೧೮೫೬-೧೯೩೬) ಶ್ರೀ ರಾಮಕೃಷ್ಣರ ಒಲುಮೆಯ ಶಿಷ್ಯ, ಅಂತರಂಗ ಭಕ್ತ. ಸಾಧನೆಯಲ್ಲಿ ಅವನಿಗಿದ್ದ ತೀವ್ರ ಆಸಕ್ತಿಯನ್ನು ಗಮನಿಸಿ, ಸಾಧನೆಯ ಒಳಗುಟ್ಟುಗಳನ್ನೆಲ್ಲ ತಿಳಿಯಹೇಳಿದರು. ಅವನು ಬರೆದಿರುವ ಬಂಗಾಳಿ



ವೈಕುಂಠನಾಥ ಸನ್ಯಾಲ್

ಪುಸ್ತಕ ('ಶ್ರೀ ರಾಮಕೃಷ್ಣ ಲೀಲಾಮೃತ') ಸಾಧಕರಿಗೊಂದು ದಾರಿದೀಪ ಇದ್ದಂತೆ ಇದೆ.

ತನ್ನ ತಾರುಣ್ಯದಲ್ಲೆ ಶ್ರೀ ರಾಮಕೃಷ್ಣರನ್ನು ಸಂಧಿಸಿ, ಆಕರ್ಷಿತನಾದ, ಪ್ರಭಾವಿತನಾದ. ಅವರಿಗೆ ವಯಸ್ಸಾಗಿದ್ದರೂ ಹುಡುಗುತನದ ಚರ್ಯೆ. ತುಟಿಗಳಲ್ಲಿ

ಚಂಚಲತೆ, ಕಣ್ಣುಗಳಲ್ಲಿ ಹೊಳಪು, ಮುಖದಲ್ಲಿ ಬೆಳಕು, ಮಾತಿನಲ್ಲಿ ಮೆರುಗು. ಅವರ ಬಳಿ ಇರುವುದೇ ಒಂದು ಸುಖದ ಅನುಭವ. ಸೂರ್ಯನ ಬೆಳಕಿನಂತೆ ಅವರ ಅಧ್ಯಾತ್ಮಿಕತೆ ಸುತ್ತಲೂ ಹರಡಿಕೊಳ್ಳುತ್ತಿದ್ದಿತು.

ಇದು ಸಾಧಕನ ಒಂದು ಮುಖವಾದರೆ, ಇನ್ನೊಂದು ಅವರ ಸತತವಾದ ಕ್ರಿಯಾಶೀಲತೆ. ಮುಂಜಾನೆ ಎದ್ದು ಕೋಣೆಯಿಂದ ಹೊರಗೆ ಬಂದ ಮೇಲೆ ರಾತ್ರಿ ಹತ್ತು ಗಂಟೆಯವರೆಗೂ ಯಾವುದಾದರೊಂದು ಉದ್ಯಮದಲ್ಲಿ ತೊಡಗಿಯೇ ಇರುವವರು. ಜಪ, ಪೂಜೆ, ನಾಮಸಂಕೀರ್ತನೆ, ಭಾವೋನ್ಮಾದದ ನೃತ್ಯ, ಭಜನೆ, ಬಂದವರೊಂದಿಗೆ ಮಾತನಾಡುವುದು, ಸಾಧಕರಿಗೆ ಮಾರ್ಗದರ್ಶನ, ಆರ್ತರಿಗೆ ಸಾಂತ್ವನ, ಭಕ್ತರಿಗೆ ಕಿವಿಮಾತು, ಆಗಂತುಕರಿಗೆ ಉಪಚಾರ, ಹೀಗೆ.

ಒಮ್ಮೊಮ್ಮೆ ಊಟಕ್ಕೂ ವೇಳೆ ಇರುತ್ತಿರಲಿಲ್ಲ. ಐದಾರು ನಿಮಿಷಗಳಲ್ಲೇ ಊಟ ಮುಗಿಸಿಬಿಡುವರು. ತಮ್ಮ ಬದುಕು ಬೇರೆಯವರಿಗಾಗಿಯೇ ಎಂಬುದು ಅವರ ನಿಲುವು. ಮುಂದೆ ಪ್ರಚಾರಕ್ಕೆ ಬಂದ 'ಶಿವಜ್ಞಾನೇ ಜೀವಸೇವಾ' ಎಂಬ ಮಾತು ಇವರ ಜೀವನ ಸೂತ್ರವಾಗಿದ್ದಿತು. ಎಲ್ಲವೂ ಶಿವ ಎಂಬುದು ಅರಿವಿಗೆ ಬಂದಾಗ, ಮನದಟ್ಟಾದಾಗ, ಸಾಧಕನು ಮಾಡುವುದಕ್ಕೆ ಇನ್ನೇನಿದೆ? ಆ ಅರಿವು ಇಲ್ಲದ ಜೀವರನ್ನು ಉದ್ಧಾರ ಮಾಡಲು, ಅರಿವು ಎಲ್ಲರಿಗೂ ಒದಗುವಂತೆ ಮಾಡುವುದು. ಇದನ್ನೇ ಶ್ರೀ ರಾಮಕೃಷ್ಣರು ಮಾಡಿದ್ದು.

ಎಲ್ಲರೂ ಎಲ್ಲ ಸಾಧನೆಗಳನ್ನೂ ಮಾಡಿಕೊಳ್ಳಬೇಕಾಗಿಲ್ಲ. ಮನೆಯಲ್ಲಿ ಒಬ್ಬೊಬ್ಬರೂ ತಂತಮ್ಮ ಅಡುಗೆಯನ್ನು ತಾವೇ ಮಾಡಿಕೊಳ್ಳುತ್ತಾರೆಯೆ? ತಾಯಿ ಒಬ್ಬಳು ಮಾಡಿ ಎಲ್ಲರಿಗೂ ಬಡಿಸುತ್ತಾಳೆ. ಹಾಗೆ ಶ್ರೀ ರಾಮಕೃಷ್ಣರ ಸಾಧನೆ.

೯

ಜಮೀನುದಾರ ಮಥುರಬಾಬುವಿನ ಪಾರಂಪರಿಕ ಗುರು ಭರತಭೂಷಣ ಭಟ್ಟಾಚಾರ್ಯನಿಗೂ ಮಥುರಬಾಬುವಿಗೂ ಏನೋ ಮನಸ್ತಾಪ ಒದಗಿದ್ದಾಗ, ಅದರ ಪರಿಹಾರಕ್ಕೆಂದು ಶ್ರೀ ರಾಮಕೃಷ್ಣರನ್ನು ತನ್ನ ಜಮೀನಿನಲ್ಲಿನ ಅರಮನೆಗೆ ಕರೆದೊಯ್ದನು. ಅಲ್ಲಿ ಅವರಿಗೆ ವಿಶೇಷ ಆದರ; ಅತಿಥಿಗಳಿಗೆ ಅದ್ದೂರಿಯ ಊಟ. ದೊಡ್ಡ ದೊಡ್ಡ ಮೀನುಗಳ ತಲೆಗಳನ್ನೆ ತುಂಡರಿಸಿ ಅಡುಗೆ ಮಾಡಿದ್ದರು. ಎಲ್ಲರ ತಟ್ಟೆಗಳಲ್ಲೂ ಈ ತಲೆಗಳು ಬಂದು ಕೂತವು.

ಶ್ರೀ ರಾಮಕೃಷ್ಣರೆದುರು ಮೀನಿನ ತಲೆಯನ್ನು ಬಡಿಸಲೆಂದು ಪರಿಚಾರಕನು ಬಂದಾಗ ಅವರಿಗೆ ಕಣ್ಣು ಕತ್ತಲಿಟ್ಟಿತು; ಓಕರಿಕೆ ಬಂದಿತು. ಅಲ್ಲಿಂದ ಹೊರಗೆ ಹೋಗಲು ಎದ್ದು ನಿಂತರು. "ಹತ್ತಿರ ಬರಬೇಡ! ದೂರ ಹೋಗು!" ಎಂದು ಕೂಗಿಕೊಂಡರು. ಎಲ್ಲರೂ ಎದ್ದು ನಿಂತರು. ಮಥುರಬಾಬು ಓಡಿಬಂದ. ನಡೆದದ್ದೇನೆಂದು ವಿಚಾರಿಸಿದಾಗ, ಶ್ರೀ ರಾಮಕೃಷ್ಣರು "ಇದೇನು, ಹಸುವಿನ ತಲೆಯನ್ನು ನನಗೆ ತಿನಿಸುತ್ತೀಯಾ?" ಎಂದು ಸಿಟ್ಟಿನಿಂದಲೇ ಕೇಳಿದರು.

ಮಥುರಬಾಬುವಿಗೆ ಅರ್ಥವಾಯಿತು. ಮುಂದೆ ಶ್ರೀ ರಾಮಕೃಷ್ಣರಿಗೆ ಇಂಥ ಅಡುಗೆಯನ್ನು ಮಾಡಬೇಡಿರೆಂದು ಪರಿಚಾರಕರಿಗೆ ತಿಳಿಯಹೇಳಿದರು.

೧೦

ಇನ್ನೊಮ್ಮೆ ಪ್ರತಾಪಚಂದ್ರ ಹಾಜ್ರಾ ಶ್ರೀ ರಾಮಕೃಷ್ಣರ ಕೋಣೆಯ ಹೊರಗೆ ಹಜಾರದಲ್ಲಿ ಕೂತು ಕೆಲವು ಹುಡುಗರೊಂದಿಗೆ ಮಾತನಾಡುತ್ತಿದ್ದರು. ಮಾತಿನ ನಡುವೆ "ಹುಡುಗರಾ, ನಿಮಗೆ ಏನೂ ತಿಳಿಯದು. ಗುರುಗಳನ್ನು ಕಾಣಲು ಬರುತ್ತಿರುತ್ತೀರಿ. ನೀವು ಬಂದಾಗ ಅವರು ಒಂದಿಷ್ಟು ಹಣ್ಣು, ಸಿಹಿತಿಂಡಿ, ತಿನಿಸು ಏನನ್ನಾದರೂ ಕೊಟ್ಟು ಕಳುಹಿಸಿಬಿಡುತ್ತಾರೆ. ಅವರನ್ನು ಕೇಳಿ ಅವರಿಂದ ಶಕ್ತಿಯನ್ನೋ, ಜ್ಞಾನವನ್ನೋ, ಸಮಾಧಿಯ ಸುಖವನ್ನೋ ಐಶ್ವರ್ಯವನ್ನೋ ಪಡೆದುಕೊಳ್ಳಿ!" ಎಂದು ಹೇಳಿದರು.

ಇದು ಶ್ರೀ ರಾಮಕೃಷ್ಣರಿಗೆ ಕೇಳಿಸಿತು. ಅವರು ಸಿಟ್ಟಿಗೆದ್ದು "ಏ ಹಾಜ್ರಾ, ಬಾ ಇಲ್ಲಿ! ಹುಡುಗರಾ, ನೀವೂ ಬನ್ನಿ" ಎಂದು ಕರೆದರು. ಅವರೆಲ್ಲ ಬಂದಾಗ,

"ಹುಡುಗರಾ, ಈ ಪಾಪಿಯ ಮಾತನ್ನು ಕೇಳಬೇಡಿ! ಇವನ ಅಭ್ಯಾಸವೇನು? ಯಾರಾದರೂ ಶ್ರೀಮಂತನನ್ನು ಕಂಡು ಅದು ಕೊಡಿ, ಇದು ಕೊಡಿ, ಅಷ್ಟು ಕೊಡಿ, ಇಷ್ಟು ಕೊಡಿ ಎಂದು ಬೇಡುವುದು, ಕಾಡುವುದು. ಅವರಿಗೆ ಬೇಸರಿಕೆಯಾಗಿ ಸ್ವಲ್ಪ ಹಣವನ್ನು ಬಿಸಾಡಿ 'ಇದನ್ನು ತೆಗೆದುಕೊಂಡು ತೊಲಗು!' ಎನ್ನುವರು. ಅದನ್ನೇ ನಿಮಗೆ ಕಲಿಸುತ್ತಿದ್ದಾನೆ.

ನೀವು ನನ್ನನ್ನು ಏನೂ ಕೇಳಬೇಕಾಗಿಲ್ಲ. ನನ್ನಲ್ಲಿರುವುದೆಲ್ಲ ನಿಮ್ಮದೇ. ನಿಮ್ಮ ಕಣ್ಣು ತಪ್ಪಿಸಿ ನಾನೇನೂ ಜೋಪಾನ ಮಾಡುತ್ತಿಲ್ಲ".

೧೧

೧೮೭೨ರ ಮೇ ತಿಂಗಳಲ್ಲಿ ಹುಣ್ಣಿಮೆಯ ರಾತ್ರಿ. ಶ್ರೀ ರಾಮಕೃಷ್ಣರು ಶ್ರೀ ಶಾರದಾದೇವಿಯನ್ನು ಒಂಬತ್ತು ಗಂಟೆಗೆ ತಮ್ಮ ಕೋಣೆಗೆ ಬರಮಾಡಿಕೊಂಡರು. ಆಕೆ ನವಬತ್‌ಖಾನೆಯಿಂದ ಬಂದೊಡನೆ ಶ್ರೀ ರಾಮಕೃಷ್ಣರ ಕೋಣೆಯಲ್ಲಿ ಪೂಜೆ ಎಲ್ಲವೂ ಸಿದ್ಧವಾಗಿದ್ದಿತು. ದೇವಿಯ 'ಸಿಂಹಾಸನ' ಮಾತ್ರ ತೆರವಾಗಿದ್ದಿತು. ತಾವು ಅರ್ಚಕನ ಪೀಠದಲ್ಲಿ ಕೂತರು. ಶ್ರೀ ಶಾರದಾದೇವಿಯನ್ನು 'ಸಿಂಹಾಸನ'ದ ಮೇಲೆ ಕೂಡಲು ಹೇಳಿದರು. ಆಕೆಗೆ ಸ್ವಲ್ಪ ನಾಚಿಕೆಯಾದರೂ ಅರೆಸಮಾಧಿಸ್ಥಿತಿಯಲ್ಲಿದ್ದರು.

ಒಡನೆಯೇ ಸಾಂಗವಾದ ಪೂಜೆ, ಪರಿಚಾರಕನೊಬ್ಬನ ನೆರವಿನಿಂದ, ಆರಂಭವಾಯಿತು. ಹೂಮಾಲೆಗಳಿಂದ ಸಿಂಗರಿಸಿ, ಶಂಖದ ಬಳೆ ಮೊದಲಾದ ಆಭರಣಗಳನ್ನು ತೊಡಿಸಿ ಕುಂಕುಮಾದಿ ದ್ರವ್ಯಗಳನ್ನು ಪೂಸಿ, ಉಪಹಾರಗಳನ್ನರ್ಪಿಸಿ ಷೋಡಶೋಪಚಾರ ಪೂಜೆ ನಡೆಯಿತು. ನಡುರಾತ್ರಿ ಸಮಾಪ್ತಿಗೊಂಡಿತು. ಅಲ್ಲಿಯವರೆಗೆ ಇಬ್ಬರೂ ಸಮಾಧಿಸ್ಥಿತಿಯಲ್ಲೇ.

ಮರುದಿನ ಬೆಳಿಗ್ಗೆ, ಶ್ರೀ ಶಾರದಾದೇವಿ "ಈ ಹೂವು, ಹಣ್ಣು, ಒಡವೆ, ಉಪಹಾರ ಇವನ್ನೆಲ್ಲ ನಾನೇನು ಮಾಡಲಿ?" ಎಂದು ಶ್ರೀ ರಾಮಕೃಷ್ಣರನ್ನು ಕೇಳಲು, ಅವರು ಒಂದು ಗಳಿಗೆ ಆಲೋಚನೆ ಮಾಡಿ, "ಇವನ್ನೆಲ್ಲ ನಿನ್ನ ತಾಯಿಗೆ ಕೊಟ್ಟು ಬಿಡು. ಆಕೆಗೆ ಸಂತೋಷವಾಗುತ್ತದೆ. ಆದರೆ ನೋಡು, ನಿನ್ನ ತಾಯಿಯೆಂಬ ಭಾವನೆಯಿಂದ ಕೊಡಬಾರದು. ಜಗನ್ಮಾತೆಯೆಂದೇ ಭಾವಿಸಿಕೊಂಡು ಕೊಡಬೇಕು. ನಾನು ನಿನ್ನನ್ನು ಪೂಜಿಸಿದ್ದೂ ಅದೇ ಭಾವನೆಯಿಂದ. ಹೆಂಗಳೆಯರೆಲ್ಲರೂ ನನ್ನ ಪಾಲಿಗೆ ದೇವಿಯ ಅವತಾರಗಳೇ, ಶಕ್ತಿಯ ರೂಪಗಳೇ" ಎಂದರು.

೧೨

ಲಕ್ಷ್ಮೀದೇವಿ (೧೮೬೪-೧೯೨೬) ಶ್ರೀ ರಾಮಕೃಷ್ಣರ ಅಣ್ಣ ರಾಮೇಶ್ವರನ ಮಗಳು. ವಿಧವೆಯಾಗಿ ದಕ್ಷಿಣೇಶ್ವರವನ್ನು ಸೇರಿದಳು. ಆಗ ಶ್ರೀ ಶಾರದಾಮಾತೆಯೂ ಅಲ್ಲಿಯೇ ಇದ್ದರು. ಇಬ್ಬರೂ ಆವರಣದ ನವಬತ್‌ಖಾನೆಯಲ್ಲಿ ಇರುತ್ತಿದ್ದರು.

ಲಕ್ಷ್ಮೀದೇವಿ

ಒಂದು ದಿನ ಶಾರದಾಮಾತೆ ಲಕ್ಷ್ಮೀಯನ್ನು ಕುರಿತು "ನೀನು ಇವರಿಂದ ಮಂತ್ರದೀಕ್ಷೆ ಪಡೆಯಬಾರದೇಕೆ? ನನ್ನ ನಾಲಗೆಯ ಮೇಲೆ ಬೀಜಾಕ್ಷರವನ್ನು ಬರೆದು ನನಗೆ ಮಂತ್ರದೀಕ್ಷೆ ಕೊಟ್ಟಿದ್ದಾರೆ" ಎಂದು ಸೂಚಿಸಿದರು. ಲಕ್ಷ್ಮೀ ಒಡನೆಯೆ ಎದ್ದು ಶ್ರೀ ರಾಮಕೃಷ್ಣರಿದ್ದಲ್ಲಿಗೆ ಹೋದಳು.

ಆದರೆ ಅಲ್ಲಿ ಬಹುಮಂದಿ ಇದ್ದುದರಿಂದ, ಆಕೆ ನಾಚಿಕೊಂಡು ಹಿಂದಿರುಗಿ ಬಂದುಬಿಟ್ಟಳು. ಮರುದಿನ ಮತ್ತೆ ಶ್ರೀ ರಾಮಕೃಷ್ಣರಿದ್ದಲ್ಲಿಗೆ ಹೋದಾಗಲೂ ಜನ ಇದ್ದರು. ಆದರೆ ಶ್ರೀ ರಾಮಕೃಷ್ಣರು ಆಕೆಯನ್ನು ಕಂಡೊಡನೆ, "ಏನಮ್ಮಾ ಲಕ್ಷ್ಮೀ, ನಿನ್ನ ಇಷ್ಟದೈವ ಯಾವುದು?" ಎಂದು ಕೇಳಿದರು. ಆಕೆ "ರಾಧಾಕೃಷ್ಣ" ಎಂದಳು.

'ಸರಿ' ಎಂದು ಹೇಳಿ, ಅವಳನ್ನು ಹತ್ತಿರ ಕರೆದು ನಾಲಗೆಯ ಮೇಲೆ ಬೀಜಾಕ್ಷರವನ್ನು ಬರೆದರು.

ಇದಾದ ದಿನವೇ ಕಾಮಾರಪುಕುರದಿಂದ ಲಾಹಾ ಮನೆತನದ ಸಾಧ್ವಿಯೊಬ್ಬಳು, ಪ್ರಸನ್ನಾ ಎಂಬಾಕೆ, ತುಳಸೀ ಮಾಲೆಯೊಂದನ್ನು ತಂದು ಲಕ್ಷ್ಮಿಯ ಕೈಗಿತ್ತಳು.

ಮುಂದೆ ಪೂರ್ಣಾನಂದನೆಂಬ ಸಂನ್ಯಾಸಿಯು ಶ್ರೀ ಶಾರದಾಮಾತೆ, ಲಕ್ಷ್ಮಿಯರಿಗೆ ಶಾರದಾ-ಲಕ್ಷ್ಮೀ ಪೂಜಾವಿಧಾನಮಂತ್ರಗಳನ್ನು ತಿಳಿಸಿಕೊಟ್ಟು ಹೋದನು.

೧೮೭೫ ಮಾರ್ಚ್ ತಿಂಗಳು. ಹೃದಯರಾಮನೊಂದಿಗೆ ಶ್ರೀ ರಾಮಕೃಷ್ಣರು ಕೇಶವಚಂದ್ರ ಸೇನರನ್ನು ಕಾಣಲೆಂದು ಜಯಗೋಪಾಲಸೇನರ ಬೇಲ್‌ಘಾರಿಯಾ

ಕೇಶವಚಂದ್ರಸೇನ್

ಉದ್ಯಾನಭವನಕ್ಕೆ ಬಂದರು. ಅವರು ಬಂದಾಗ ಅವರ ಉಡುಗೆ ಸೊಂಟದಲ್ಲೊಂದು ಕೆಂಪಂಚಿನ ಪಂಚೆ. ಅದರ ಚುಂಗನ್ನೆ ಉತ್ತರೀಯದಂತೆ ಹೆಗಲ ಮೇಲೆ ಹೊದ್ದಿದ್ದರು. ಉಳಿದಂತೆ ಬರಿಮೈ.

"ನಿಮಗೆ ದೇವರ ದರ್ಶನವಾಗಿದೆ ಎಂದು ಜನ ಹೇಳುತ್ತಾರೆ. ಅದರ ವಿಚಾರ ಕೇಳೋಣವೆಂದು ಬಂದೆ" ಎಂದು ಶ್ರೀ ರಾಮಕೃಷ್ಣರು ಆರಂಭಿಸಿದರು. ಕೇಶವಚಂದ್ರರು ತಮಗಾದ ಅನುಭವಗಳನ್ನು ವಿವರಿಸಿದರು. "ಇವನೊಬ್ಬ ಅಸಾಧಾರಣ

ವ್ಯಕ್ತಿ, ಮಹಾಪುರುಷ" ಎಂಬುದು ಶ್ರೀ ರಾಮಕೃಷ್ಣರಿಗೆ ಮನದಟ್ಟಾಯಿತು. ರಾಮಪ್ರಸಾದರ ಗೀತವೊಂದನ್ನು ಹಾಡಿದರು; ಸಮಾಧಿಯ ನೆಲೆಗೇರಿದರು. ಎಚ್ಚರಿಕೆ ತಿಳಿದ ಮೇಲೆ, ಕೇಶವಚಂದ್ರರನ್ನು ಕುರಿತು—

"ಮಹಾಶಯ, ನಿಮ್ಮ ಬಾಲ ಬಿದ್ದುಹೋಯಿತು. ಕಪ್ಪೆಮರಿಗೆ ಬಾಲ ಇರುವವರೆಗೆ ಅದು ನೀರಿನಲ್ಲೇ ವಾಸಮಾಡಬೇಕು. ಬಾಲ ಬಿದ್ದುಹೋದ ಮೇಲೆ ನೆಲದ ಮೇಲೂ ಇರಬಲ್ಲುದು, ನೀರಿನಲ್ಲೂ ಇರಬಲ್ಲುದು. ಮನುಷ್ಯನ ಬಾಲವೆಂದರೆ ಅಜ್ಞಾನ; ಅದು ಇರುವವರೆಗೆ ಅವನು ಪ್ರಪಂಚದಲ್ಲೇ ಇರಬೇಕು. ಅದು ಬಿದ್ದುಹೋದರೆ, ವ್ಯಕ್ತಿಯು ಪ್ರಪಂಚದಲ್ಲಾದರೂ ಇರಬಹುದು, ಪರಮಾರ್ಥ ದಲ್ಲಾದರೂ ಇರಬಹುದು. ತನಗಿಷ್ಟ ಬಂದಂತೆ ಅಲ್ಲಿಯೂ ಇಲ್ಲಿಯೂ ವಿಹರಿಸ ಬಹುದು. ಪ್ರಪಂಚದಲ್ಲೇ ಲೌಕಿಕನಾಗಿಯೇ ಇದ್ದುಕೊಂಡು, ಜೊತೆ ಜೊತೆಗೇ ಭಗವದನುಭವವನ್ನೂ ಪಡೆಯುತ್ತಿರಬಹುದು."

ಮೊದಲು ಕೇಶವಚಂದ್ರರು ಮಾತನಾಡಿದರು; ಶ್ರೀ ರಾಮಕೃಷ್ಣರು ಕೇಳುತ್ತ ಕುಳಿತಿದ್ದರು. ಅನಂತರ ಶ್ರೀ ರಾಮಕೃಷ್ಣರು ಮಾತನಾಡತೊಡಗಿದರು, ಕೇಶವಚಂದ್ರರು ಕೇಳುತ್ತ ಕುಳಿತಿದ್ದರು. ಹೀಗೆ ಮೂರು ನಾಲ್ಕು ಬಾರಿ ಪರ್ಯಾಯ ಸಂವಾದವಾಯಿತು. ಇದು ಮುಗಿಯುವಾಗ ಸುಮಾರು ಐದು ಗಂಟೆ ಕಾಲ ಸರಿದಿದ್ದಿತು!

೧೪

ಶ್ರೀ ಶಾರದಾದೇವಿಯ ತಾಯಿಗೆ ತನ್ನ ಮಗಳನ್ನು ಹುಚ್ಚನಿಗೆ ಕೊಟ್ಟು ಮದುವೆ ಮಾಡಿರುವೆನೆಂಬ ದುಗುಡ. ಇದು ಕಡೆಯವರೆಗೂ ಇದ್ದಿತು.

ಆಕೆ ಒಮ್ಮೆ ಗಯೆಗೆ ಹೋಗಿಬಂದರು. ಗಯಾ ಯಾತ್ರೆ ಮಾಡಿ ಬಂದವರು ಪಿಂಡಪ್ರದಾನ ಮಾಡಬೇಕೆಂಬುದೊಂದು ವಿಧಿ. ಗಂಡಸರೇ ಮಾಡಬೇಕು. ತಮ್ಮ ಅಳಿಯನಿಗೆ ಹೇಳಿದರು. ಶ್ರೀ ರಾಮಕೃಷ್ಣರು "ಅಯ್ಯೊ ಎಲ್ಲಾದರೂ ಉಂಟೆ? ನನ್ನ ತಾಯಿ ಇನ್ನೂ ಬದುಕಿದ್ದಾರೆ. ನಾನು ಪಿಂಡಪ್ರದಾನ ಹೇಗೆ ಮಾಡಲಿ? ಸಾಧ್ಯವಿಲ್ಲ" ಎಂದುಬಿಟ್ಟರು. ಬಲವಂತ ಮಾಡಿದರೆ, "ಈಗ ನಾನು ಗಯೆಗೆ ಹೋದರೆ ಹಿಂದಕ್ಕೆ ಬರುವ ನಂಬಿಕೆ ಇಲ್ಲ!" ಎಂದರು.

ತನ್ನ ಮಗಳಿಗೆ ಮಕ್ಕಳಾಗಲಿಲ್ಲ ಎಂಬ ಕೊರತೆ ಬೇರೆ ಶ್ರೀ ಶಾರದಾದೇವಿಯ ತಾಯಿಗೆ. ಅದಕ್ಕೆ ಶ್ರೀ ರಾಮಕೃಷ್ಣರು "ಅದಕ್ಕೇನು ಯೋಚನೆ? ನನ್ನಲ್ಲಿಗೆ ಬರುವ ಹುಡುಗರಿಗೆಲ್ಲ ನಿನ್ನ ಮಗಳೇ ತಾಯಿಯಲ್ಲವೆ?" ಎಂದರು.

೧೫

ಶ್ರೀ ರಾಮಕೃಷ್ಣರ ನೇರ ಶಿಷ್ಯರಲ್ಲಿ ತುಂಬ ಹತ್ತಿರದವರು ರಾಮಚಂದ್ರ ದತ್ತರು (೧೮೫೧-೧೮೯೯). ಕಲ್ಕತ್ತೆಯ ವೈದ್ಯರು, ಅಧ್ಯಾತ್ಮ ರಸಿಕರು. ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲೇ ಶ್ರೀ ರಾಮಕೃಷ್ಣರನ್ನು ಸೇರಿ, ಅವರು ತೀರಿಕೊಳ್ಳುವವರೆಗೂ ಅವರ ಸೇವೆ ಮಾಡಿದರು. ಠಾಕುರರ ಬದುಕನ್ನು ಕುರಿತಂತೆ 'ಶ್ರೀ ರಾಮಕೃಷ್ಣ ಪರಮಹಂಸ ದೇವೇರ ಜೀವನ ವೃತ್ತಾಂತ' ಎಂಬ ಗ್ರಂಥವನ್ನೂ (೧೮೯೦) ಅವರ



ರಾಮಚಂದ್ರ ದತ್ತ

ಉಪದೇಶವನ್ನು ಕುರಿತು 'ತತ್ತ್ವಸಾರ' ಎಂಬ ಹೊತ್ತಿಗೆಯನ್ನೂ (೧೮೮೫) ಬಂಗಾಳಿಯಲ್ಲಿ ರಚಿಸಿದ್ದಾರೆ. ಅವರ ವಿಚಾರವಾಗಿ ಮಹೇಂದ್ರನಾಥ ದತ್ತರ 'ಗುರುಪ್ರಾಣ ರಾಮಚಂದ್ರೇರ ಅನುಧ್ಯಾನ' (೧೯೫೮) ಎಂಬ ಪುಸ್ತಕವಿದೆ.

ಇವರು ಶ್ರೀ ರಾಮಕೃಷ್ಣರನ್ನು ಮೊಟ್ಟಮೊದಲು ಕಂಡದ್ದು ೧೮೭೦ರಲ್ಲಿ. ತಮ್ಮ ಒಡನಾಡಿಗಳಾಗಿದ್ದ ಮನೋಮೋಹನಮಿತ್ರ ಮತ್ತು ಗೋಪಾಲಚಂದ್ರಮಿತ್ರ ರೊಂದಿಗೆ ದಕ್ಷಿಣೇಶ್ವರಕ್ಕೆ ಹೋದಾಗ. ಮೂರೂ ಮಂದಿ ನಾಸ್ತಿಕರು. ಠಾಕುರರ ಪ್ರಭಾವದಿಂದ ಭಗವದನುಭವದ ರುಚಿಯನ್ನು ಕಂಡುಕೊಂಡರು.

"ದೇವರು ಇದ್ದಾನೆಯೆ? ಇದ್ದರೆ ಅವನನ್ನು ಕಾಣುವುದು ಹೇಗೆ?"

"ದೇವರು ಇದ್ದಾನೆ. ಅದರಲ್ಲಿ ಸಂಶಯವೇ ಇರದು. ಹಗಲು ನಿಮಗೆ ನಕ್ಷತ್ರಗಳು ಕಾಣುವುದಿಲ್ಲ. ಆದರೆ ನಕ್ಷತ್ರಗಳು ಇಲ್ಲವೆ? ಹಾಲಿನಲ್ಲಿ ಬೆಣ್ಣೆಯಿದೆ; ಹಾಲನ್ನು ನೋಡಿದರೆ ಬೆಣ್ಣೆ ಕಾಣುವುದೆ? ಬೆಣ್ಣೆಯನ್ನು ಕಾಣಬೇಕೆಂದರೆ ಹಾಲನ್ನು ಮುಂಜಾನೆಯೇ ಕಡೆಯಬೇಕು. ಕೊಳದಲ್ಲಿ ಮೀನನ್ನು ಹಿಡಿಯಬೇಕೆಂದರೆ, ನೀರಿಗೆ ಗಾಳ ಹಾಕಬೇಕು. ತಿಳಿದವರಿಂದ ಮೀನು ಹಿಡಿಯುವ ಪರಿಯನ್ನು ಅರಿತುಕೊಳ್ಳಬೇಕು. ಅನಂತರ ತಾಳ್ಮೆಯಿಂದ ದಡದ ಮೇಲೆ ಕೂಡಬೇಕು. ಗಾಳ ಮುಳುಗುವವರೆಗೂ ಕಾಯಬೇಕು. ಒಮ್ಮೆ ಅದು ನೀರೊಳಗೆ ಮುಳುಗಿತೆಂದರೆ, ಮೀನು ಹಿಡಿಯಿತೆಂದೇ ಅರ್ಥ. ಆಗ ಅದನ್ನು ಮೇಲೆಳೆದುಕೊಳ್ಳಬೇಕು. ದೇವರನ್ನು ಕಾಣುವುದೂ ಹೀಗೆಯೇ. ನಿನ್ನ ಮನಸ್ಸೆಂಬುದು ಗಾಳ; ಪ್ರಾಣವೆನ್ನುವುದು ಕೊಕ್ಕೆ. ನೀನು ಮಾಡುವ ಧ್ಯಾನ, ಜಪ ಎಲ್ಲವೂ ಕೊಕ್ಕೆಗೆ ಸಿಕ್ಕಿಸಿರುವ ತಿನಿಸು. ಅವಸರ ಪಡದೆ ಕಾದರೆ ಮೀನು ಗಾಳವನ್ನು ಕಚ್ಚಿದಂತೆ ದೇವರು ನಮ್ಮನ್ನು ಹಿಡಿಯುತ್ತಾನೆ; ಕಾಣಿಸಿಕೊಳ್ಳುತ್ತಾನೆ."

೧೬

ಶ್ರೀ ರಾಮಕೃಷ್ಣರ ತಾಯಿ (ದಢೂತಿಯ ಹೆಂಗಸು, ಚೆಲುವೆ, ಹಳೆಯ ಕಾಲದವರು) ದಕ್ಷಿಣೇಶ್ವರದಲ್ಲಿ ಇದ್ದ ಕಾಲ. ಆಗಲೇ ಆಕೆಯ ಇಬ್ಬರು ಗಂಡುಮಕ್ಕಳು (ಶ್ರೀ ರಾಮಕೃಷ್ಣರ ಅಣ್ಣಂದಿರು, ರಾಮಕುಮಾರ ಮತ್ತು ರಾಮೇಶ್ವರ) ತೀರಿಕೊಂಡಿದ್ದರು. ಮನಸ್ಸಿಗೆ ತುಂಬ ದುಗುಡವಾಗಿದ್ದಿತು; ಬೇಸರ ಬೇರೆ.

ದಿನವೂ ಬೆಳಿಗ್ಗೆ ತನಗೆ ನಮಸ್ಕರಿಸಲು ಬಂದ ಶ್ರೀ ರಾಮಕೃಷ್ಣರನ್ನು ಕುರಿತು 'ಇಂದು ನಿನ್ನ ಹೊಟ್ಟೆ ಹೇಗಿದೆ?' ಎಂದು ಕೇಳುವರು. 'ಇಂದೇಕೋ ಅಷ್ಟು ಸರಿಯಾಗಿಲ್ಲ, ಅಮ್ಮ' ಎಂದು ಉತ್ತರ ಬಂದರೆ, "ಮಗು, ಇವತ್ತು ನೀನು ಆ ಕಾಳಿಯ ಪ್ರಸಾದ ತಿನ್ನಬೇಡ; ನಾನೇ ನಿನಗೆ ಸಾತ್ತ್ವಿಕ ಆಹಾರ ಮಾಡಿ ಬಡಿಸುತ್ತೇನೆ!" ಎನ್ನುವರು. ಎಷ್ಟೋ ದಿನ ಅವರದ್ದೇ ಅಡುಗೆ.

ಮಧ್ಯಾಹ್ನ ಅಲಂಬಜಾರಿನ ಗುಡಿಯಿಂದ ಸಿಳ್ಳಿನ ಶಬ್ದ ಕೇಳಿ, 'ಓ, ಇನ್ನೇನು ಲಕ್ಷ್ಮೀನಾರಾಯಣರಿಗೆ ನೈವೇದ್ಯ ಆಗುತ್ತದೆ' ಎಂದುಕೊಂಡು ತಾವೂ ಊಟ ಮಾಡುವರು. ಭಾನುವಾರದಂದು ಇಡೀ ದಿನ ಉಪವಾಸ.

ಇದು ಶ್ರೀ ರಾಮಕೃಷ್ಣರಿಗೆ ಮುಜಗರವಾಗುತ್ತಿತ್ತು. ಏನಾದರೂ ಉಪಾಹಾರವನ್ನಾದರೂ ಮಾಡುವಂತೆ ಬಲವಂತ ಮಾಡುತ್ತಿದ್ದರು. ಹೃದಯಬಾಬು (ಹೃದಯರಾಮ ಮುಖೋಪಾಧ್ಯಾಯ, ಚಿಕ್ಕಪ್ಪನ ಮಗಳು ಹೇಮಾಂಗಿನಿಯ ಮಗ) ಶ್ರೀ ರಾಮಕೃಷ್ಣರನ್ನು ನೋಡಿಕೊಳ್ಳುತ್ತ ಅವರ ಜೊತೆಗೇ ಇರುತ್ತಿದ್ದವನು "ಹಸಿವಾದರೆ ಅವಳೇ ಊಟಮಾಡುತ್ತಾಳೆ, ಬಿಡು!" ಎನ್ನುತ್ತಿದ್ದನು. ಅದಕ್ಕೆ ಶ್ರೀ ರಾಮಕೃಷ್ಣರು—

"ಹಾಗೆನ್ನಲಾದೀತೆ, ಹೃದಯ? ಇಬ್ಬರು ಹಿರಿಯ ಮಕ್ಕಳನ್ನು ಕಳೆದುಕೊಂಡು ದುಃಖಪಡುತ್ತಿದ್ದಾಳೆ ಅಮ್ಮ. ಉಳಿದಿರುವವನು ನಾನೊಬ್ಬ. ನಾನೂ ಸಮಾಧಾನ ಮಾಡದಿದ್ದರೆ ಹೇಗೆ? ನನ್ನ ತಾಯಿಯಲ್ಲವೆ?" ಎನ್ನುವರು.

೧೭

ಶ್ರೀ ರಾಮಕೃಷ್ಣರ ಮಹತಿಯನ್ನು ಮೊದಲು ಗುರುತಿಸಿದವರಲ್ಲಿ ಕಲ್ಕತ್ತೆಯ ಜನಪ್ರಿಯ ಬ್ರಾಹ್ಮೋ ನಾಯಕರೂ ಪ್ರಸಿದ್ಧರೂ ಆಗಿದ್ದ ಬ್ರಹ್ಮಾನಂದ ಕೇಶವಚಂದ್ರ ಸೇನರು ಪ್ರಮುಖರು. ಅವರನ್ನು ಪರಮಹಂಸರೆಂದು ಕರೆದವರು ಇವರೇ. ಮೊದಲ ಭೇಟಿಯಾದದ್ದು ೧೮೭೫ರ ಮಾರ್ಚ್‌ನಲ್ಲಿ.



ಶಶಿಭೂಷಣ ಚಕ್ರವರ್ತಿ

'ಇಂಡಿಯನ್ ಮಿರರ್' (೧೮೭೫ ಮಾರ್ಚ್ ೨೮) 'ಮಿರರ್' (೧೮೭೬ ಫೆಬ್ರುವರಿ ೨೦), ಬ್ರಾಹ್ಮೋಪತ್ರಿಕೆಗಳಾದ 'ಧರ್ಮತತ್ತ್ವ', 'ಸುಲಭ ಸಮಾಚಾರ್', ಥಿಯಿಸ್ಟಿಕ್ ಕ್ವಾರ್ಟರ್ಲಿ ರೆವ್ಯೂ' ಮೊದಲಾದ ಪತ್ರಿಕೆಗಳಲ್ಲಿ ಈ ಪ್ರಥಮ ಸಮಾಗಮಕ್ಕೆ ತುಂಬ ಪ್ರಚಾರ ದೊರೆಯಿತು. 'ದಕ್ಷಿಣೇಶ್ವರದ ಪರಮಹಂಸ',

‘ಪರಮಹಂಸದೇವ’, ‘ಪರಮಹಂಸ ಮಹಾಶಯ’, ‘ರಾಮಕೃಷ್ಣ ಭಟ್ಟಾಚಾರ್ಯ’ ಮೊದಲಾದ ಹೆಸರುಗಳಿಂದ ಇವರು ಪ್ರಸಿದ್ಧರಾದರು.

ಅವರಿಬ್ಬರ ನಿಲುವುಗಳು ತೀರ ಬೇರೆ ಬೇರೆಯಾಗಿದ್ದರೂ ಇಬ್ಬರ ನಡುವೆ ಪ್ರೀತಿ, ವಿಶ್ವಾಸ, ಸಂಪರ್ಕಗಳು ಬೆಳೆದವು. ಶ್ರೀ ರಾಮಕೃಷ್ಣರು ಹಲವು ಬಾರಿ ಬ್ರಾಹ್ಮೋ ಪ್ರಾರ್ಥನಾ ಸಭೆಗಳಿಗೆ ಹೋಗಿಬರುತ್ತಿದ್ದರು. ಅನೇಕ ಬ್ರಾಹ್ಮೋ ಯುವಕರು ದಕ್ಷಿಣೇಶ್ವರಕ್ಕೆ ಬರತೊಡಗಿದರು.

ಶಶಿಭೂಷಣ ಚಕ್ರವರ್ತಿ (೧೮೬೩-೧೯೧೧, ಮುಂದೆ ರಾಮಕೃಷ್ಣಾನಂದರು) ಕೇಶವಚಂದ್ರರ ಪಟ್ಟಶಿಷ್ಯ, ಶ್ರದ್ಧಾವಂತ ಬ್ರಾಹ್ಮೋ ಆಗಿದ್ದವರು. ಅವರು ಶ್ರೀ ರಾಮಕೃಷ್ಣರನ್ನು ೧೮೮೩ರಲ್ಲಿ ಶರತ್‌ನೊಂದಿಗೆ ಭೇಟಿಮಾಡಿದರು. ಆಗ ಶ್ರೀ ರಾಮಕೃಷ್ಣರು—

“ನೋಡಿ, ಇಟ್ಟಿಗೆ ಕಾಸುವವರು, ಹೆಂಚನ್ನು ತಯಾರು ಮಾಡುವವರು. ಹಸಿಯಿರುವಾಗಲೇ ಅದರ ಮೇಲೆ ಕಂಪನಿಯ ಹೆಸರನ್ನೋ ಸಂಖ್ಯೆಯನ್ನೋ ಕಂಡರಿಸಿ ಬಿಡುತ್ತಾರೆ. ಅದು ಕಾದು ಗಟ್ಟಿಯಾದ ಮೇಲೂ ಈ ಹೆಸರು, ಸಂಖ್ಯೆ ಹಾಗೆಯೇ ಉಳಿದುಕೊಳ್ಳುತ್ತದೆ. ಹೀಗೆ ಅಧ್ಯಾತ್ಮವೂ ಸಣ್ಣ ವಯಸ್ಸಿನಲ್ಲೇ ಬಂದೊದಗಿದರೆ ಬೆಳೆದ ಮೇಲೂ ಉಳಿದುಕೊಳ್ಳುತ್ತದೆ.”

೧೮

ಶ್ರೀ ರಾಮಕೃಷ್ಣರ ಹಿರಿಮೆಯನ್ನು ಸಭ್ಯ ಸಮಾಜಕ್ಕೆ ಮೊಟ್ಟಮೊದಲು ಪರಿಚಯ ಮಾಡಿಕೊಟ್ಟವರು ಕೇಶವಚಂದ್ರಸೇನರಷ್ಟೆ? ಅವರ ಉಪದೇಶವನ್ನು ಸಂಗ್ರಹಿಸಿ ಬಂಗಾಳಿಯಲ್ಲಿ 'ಪರಮಹಂಸೇರ ಉಕ್ತಿ' (೧೮೭೮) ಎಂಬ ಸಣ್ಣ ಪುಸ್ತಕವನ್ನು ಹೊರತಂದರು. 'ಇಂಡಿಯನ್ ಮಿರರ್' ಪತ್ರಿಕೆಯಲ್ಲಿ (೨೮.೩.೧೮೭೫; ೧೯.೮.೧೮೮೬; ೨೧.೮.೧೮೮೬; ೧೦.೯.೧೮೮೬), 'ಧರ್ಮತತ್ತ್ವ' ಪತ್ರಿಕೆಯಲ್ಲಿ (೩೧.೮.೧೮೮೬; ೧೯.೯.೧೮೮೬), ಅವರನ್ನು ಕುರಿತು ಲೇಖನಗಳನ್ನು ಬರೆದರು. ಇದು ಶ್ರೀ ರಾಮಕೃಷ್ಣರಿಗೆ ಹಿಡಿಸಲಿಲ್ಲ. ಅವರು ಕೇಶವಚಂದ್ರರಿಗೆ ಹೇಳಿದರು—

"ಅಯ್ಯಾ, ನಿಮ್ಮ ಪತ್ರಿಕೆಗಳಲ್ಲಿ ನನ್ನನ್ನು ಕುರಿತು ಏಕೆ ಬರೆಯುತ್ತಿದ್ದೀರಿ? ಪತ್ರಿಕೆಗಳಲ್ಲಿ, ಪುಸ್ತಕಗಳಲ್ಲಿ ಬರೆದು ಯಾರನ್ನಾದರೂ ಮಹಾತ್ಮನನ್ನಾಗಿ ಮಾಡಲು ಸಾಧ್ಯವೆ? ದೇವರು ಯಾರನ್ನಾದರೂ ದೊಡ್ಡವನನ್ನಾಗಿ ಮಾಡಿದರೆ ಮಾತ್ರ, ಅವನು ಎಲ್ಲಿದ್ದರೂ ಹೇಗಿದ್ದರೂ ಜನ ಅವನನ್ನು ಮಹಾತ್ಮನೆಂದು ಗುರುತಿಸಿಯಾರು. ಸುವಾಸನೆಯ ಹೂವು ಕಾಡಿನಲ್ಲಿದ್ದರೂ ದುಂಬಿಗಳು ಬಂದು ಮುತ್ತಿಕೊಳ್ಳುತ್ತವೆ, ಅಲ್ಲವೆ?

ನನಗೇನು ಹೆಸರು ಬೇಕಾಗಿಲ್ಲ, ಹಿರಿಮೆ ಬೇಕಾಗಿಲ್ಲ; ಕೀರ್ತಿಯ ಕಾಮನೆ ನನಗೇನು ಇರದು. ನನ್ನ ಪಾಡಿಗೆ ನಾನು ಇರುತ್ತೇನೆ; ಇರುವಂತೆ ಇರುತ್ತೇನೆ. ದೊಡ್ಡವನೆನಿಸಿಕೊಂಡು ನನಗಾಗಬೇಕಾದುದು ಏನೂ ಇರದು. ನನಗೆ ಬೇಕಾದುದು ಒಂದೇ—ದೇವರ ಅನುಭವ. ಅಷ್ಟಿದ್ದರೆ ಸಾಕು. ಸಣ್ಣವರಲ್ಲಿ ಸಣ್ಣವನಾಗಿಯೇ ಇರುತ್ತೇನೆ.

"ನಿನ್ನ ಉದ್ದೇಶ ನನ್ನ ಪ್ರಚಾರ ಮಾಡುವುದಾದರೆ ಇನ್ನು ಮೇಲೆ ಇಲ್ಲಿಗೆ ನೀನು ಬರಲೇಬೇಡ!"

೧೯

ಶ್ರೀ ರಾಮಕೃಷ್ಣರು ತಮ್ಮ ಬಳಿ ಬಂದವರಿಗೆಲ್ಲ ಅಧ್ಯಾತ್ಮದ ರುಚಿಯನ್ನು ಕಾಣಿಸುತ್ತಿರಲಿಲ್ಲ. ಯಾರಿಗೆ ಆಸಕ್ತಿಯಿದೆಯೋ, ಪೂರ್ವಸಿದ್ಧತೆ ಇದೆಯೋ, ಮುಂದರಿಯಬೇಕೆಂಬ ಕಾತರ ಇದೆಯೋ ಅಂಥವರಿಗೆ ಮಾತ್ರ ಅಧ್ಯಾತ್ಮದ ಉಪದೇಶ, ದೀಕ್ಷೆ, ಮಾರ್ಗದರ್ಶನಗಳನ್ನು ನೀಡುತ್ತಿದ್ದರು. ಇಂಥ ಭಕ್ತರು ಸಾಮಾನ್ಯ ಜೀವಗಳಲ್ಲ, ಈಶ್ವರ ಕೋಟಿಗೆ ಸೇರಿದವರು.

ನಿತ್ಯನಿರಂಜನ ಘೋಷ್

ಅವರ ಹತ್ತಿರದ ಶಿಷ್ಯರೆಲ್ಲ ಇಂಥವರೇ. ಅವರಲ್ಲಿ ನಿತ್ಯನಿರಂಜನ ಘೋಷ್ (ಮುಂದೆ ಸ್ವಾಮಿ ನಿರಂಜನಾನಂದರು, ೧೮೬೨-೧೯೦೪, ಶ್ರೀ ರಾಮಕೃಷ್ಣರನ್ನು ಮೊಟ್ಟಮೊದಲು ಕಂಡದ್ದು ೧೮೮೨ರಲ್ಲಿ) ತನ್ನ ಅನುಭವಗಳನ್ನು ತಿಳಿಸಿದ್ದಾನೆ.

ಒಮ್ಮೆ ನಿತ್ಯನಿರಂಜನನು ಠಾಕುರರನ್ನು ನೋಡಲು ಹೋದಾಗ, ಇದ್ದಕ್ಕಿದ್ದಂತೆ ಠಾಕುರರು ಅವನ ನಾಲಗೆಯ ಮೇಲೆ ಮಂತ್ರವೊಂದನ್ನು ಬರೆದು, ಅದನ್ನು ಹೇಳಿ, ಅದರ ಜಪ ಮಾಡುವಂತೆ ತಿಳಿಸಿದರು. ದಕ್ಷಿಣೇಶ್ವರವನ್ನು ಬಿಟ್ಟು ಮನೆಗೆ ಬಂದ ಮೇಲೂ ಕಣ್ಣು ಮುಚ್ಚಿದರೆ ಸಾಕು, ಈ ಮಂತ್ರವೇ ಸಾವಿರಾರು ದೀಪದ ಹುಳುಗಳು ಮಿನುಗುತ್ತ ಹಾರಾಡುತ್ತಿರುವಂತೆ ತೋರಿತು. ತಲೆಯೊಳಗೆ ಈ ಮಂತ್ರದ್ದೇ ಮಾರ್ದನಿ, ಮೈಯಲ್ಲೆಲ್ಲ ಅದರದ್ದೇ ಆಟ.

ನಿದ್ರೆ ಮಾಡಲೂ ಆಗಲಿಲ್ಲ; ಮಂತ್ರದ ಜಪ ಏನು ಮಾಡಿದರೂ ನಿಲ್ಲಲಿಲ್ಲ. ಅದು ಎಡೆಬಿಡದೆ ನಡೆಯುತ್ತಲೇ ಇತ್ತು. ಅದೊಂದನ್ನು ಬಿಟ್ಟು ಅವನಿಗೆ ಬೇರೆ ಯಾವ ಚಿಂತನೆಯೂ ಸಾಧ್ಯವಿರಲಿಲ್ಲ. ಅವನಿಗೆ ಗಾಬರಿಯಾಯಿತು. ತನಗೆ ಹುಚ್ಚು ಹಿಡಿಯಿತೆಂದೇ ತೀರ್ಮಾನಿಸಿದ. ಈಗೇನು ಮಾಡುವುದು ಎಂದು ಅವನಿಗೆ ತೋಚದಾಯಿತು.

ಹೀಗೆಯೇ ಮೂರು ದಿನಗಳು ಕಳೆದುವು. ನಿತ್ಯನಿರಂಜನ ದಕ್ಷಿಣೇಶ್ವರಕ್ಕೆ ಓಡಿದ. ಠಾಕುರರ ಬಳಿ ಬಂದು ನಡೆದುದನ್ನೆಲ್ಲ ತಿಳಿಸಿದ. ಅದನ್ನು ಕೇಳಿ ಠಾಕುರರು ಗಟ್ಟಿಯಾಗಿ ನಕ್ಕುಬಿಟ್ಟು ಮಂತ್ರವನ್ನು ಹಿಂದಕ್ಕೆ ತೆಗೆದುಕೊಂಡು—"ನೋಡು, ಇದಕ್ಕೆ ಅಜಪಾಜಪವೆಂದು ಹೆಸರು. ಜಪ ನಡೆಯುತ್ತಲೇ ಇರುತ್ತದೆ; ಆದರೆ ಬಾಯಿಂದ ನಡೆಯುವುದಲ್ಲ, ಮನಸ್ಸಿನ ಸಂಪರ್ಕ ಅದಕ್ಕಿರದು; ಸಂಕಲ್ಪವಂತೂ ಇರುವುದೇ ಇಲ್ಲ. ಎಲ್ಲವನ್ನೂ ಮೀರಿ, ಇಡೀ ಬದುಕಿನಲ್ಲೇ ರಣರಣಿಸುವ ಮಂತ್ರಜಪ. ಬದುಕು ಬೇರೆ ಅಲ್ಲ, ಈ ಮಂತ್ರಜಪ ಬೇರೆ ಅಲ್ಲ" ಎಂದು ವಿವರಿಸಿದರು.

೨೦

ಶ್ರೀ ರಾಮಕೃಷ್ಣರು ಒಬ್ಬ ಭಕ್ತ, ಗೋಪಾಲದಾದಾ ಜೊತೆ ಮಾತನಾಡುತ್ತಿದ್ದರು. ಗೋಪಾಲನಿಗೆ ಆಗಷ್ಟೆ ಪತ್ನೀವಿಯೋಗವಾಗಿತ್ತು. ದುಃಖ ಮರೆಯಲು ತೀರ್ಥಯಾತ್ರೆ ಮಾಡಿಕೊಂಡು ಬರುವ ಮನಸ್ಸು ಮಾಡಿದ. ಶ್ರೀ ರಾಮಕೃಷ್ಣರು "ಏನು ಗೋಪಾಲ, ತೀರ್ಥಯಾತ್ರೆಗೆ ಹೊರಟಿದ್ದೀಯಂತೆ?" ಎಂದು ಕೇಳಿದರು.

ಗೋಪಾಲದಾದಾ

"ಹೌದು ಗುರುಗಳೇ, ದೈವಸಾನ್ನಿಧ್ಯಗಳನ್ನು ಕಂಡು ಬಂದರೆ ಮನಸ್ಸಿಗೆ ನೆಮ್ಮದಿಯಾದೀತು, ಅಲ್ಲವೆ?"

"ಗೋಪಾಲ, ದೂರದ ತೀರ್ಥಗಳಲ್ಲಿ ಕ್ಷೇತ್ರಗಳಲ್ಲಿ ದೈವಸಾನ್ನಿಧ್ಯವಿದೆ;

ಇಲ್ಲಿಲ್ಲ ಎಂದು ಬಗೆದರೆ ನಿನಗೇನು ತಿಳಿಯದು. ದೈವಸಾನ್ನಿಧ್ಯವನ್ನು 'ಅಲ್ಲಿ' ಹುಡುಕಬಾರದು, ಅದು 'ಇಲ್ಲೇ' ಇದೆ. ಒಂದು ಕತೆ ಹೇಳುತ್ತೇನೆ ಕೇಳು.

ಗುಡಿಗುಡಿ ಸೇದುವ ಚಪಲ ಇದ್ದವನೊಬ್ಬ, ಒಂದು ನಡುರಾತ್ರಿ ಗುಡಿಗುಡಿಗೆ ಕೆಂಡ ಹೊತ್ತಿಸಲು ಕಡ್ಡೀ ಪೆಟ್ಟಿಗೆಗೆ ಮನೆಯೆಲ್ಲ ತಡಕಾಡಿದ. ಸಿಗಲಿಲ್ಲ. ಅವನ ಚಪಲವೋ ತಡೆಯಲಾರದು. ಕೈಯಲ್ಲಿ ಲಾಟೀನು ಹಿಡಿದು ಪಕ್ಕದ ಮನೆಗೆ ಹೋಗಿ ಬಾಗಿಲು ಬಡಿದು ಅರಚಿದ. ಆ ಮನೆಯಾತ ಎದ್ದು ಬಂದು ಬಾಗಿಲು ತೆರೆದು, "ಏನಯ್ಯಾ, ಇಷ್ಟು ಗಲಾಟೆ ಮಾಡುತ್ತಿದ್ದೀ ಈ ನಡುರಾತ್ರಿಯಲ್ಲಿ? ಏನಷ್ಟು ಅವಸರ" ಎಂದು ಕೇಳಿದ.

ಅದಕ್ಕೆ ಬಂದಾತ "ನೋಡಯ್ಯ, ನನಗೆ ಗುಡಿಗುಡಿ ಸೇದುವ ಚಪಲ ಇರುವುದು ನಿನಗೆ ತಿಳಿದೇ ಇದೆ! ಮನೆಯಲ್ಲಿ ಕಡ್ಡಿಪೆಟ್ಟಿಗೆ ಸಿಗಲಿಲ್ಲ. ಸ್ವಲ್ಪ ಬೆಂಕಿ ಕೊಡುವಿಯೆಂದು ಬಂದೆ."

ಅದನ್ನು ಕೇಳಿ ಮನೆಯಾತ ಗಟ್ಟಿಯಾಗಿ ನಕ್ಕು, "ಎಂಥ ಬುದ್ಧಿವಂತನಯ್ಯ ನೀನು! ಕೈಯಲ್ಲೇ ಲಾಟೀನು ಹಿಡಿದಿದ್ದೀ. ಅದರಲ್ಲಿ ಬೆಂಕಿ ಇಲ್ಲವೆ? ಅದನ್ನು ಹುಡುಕಿಕೊಂಡು ಎಲ್ಲೆಲ್ಲೋ ಅಲೆದಾಡುವುದೆ? ಇಲ್ಲಿಗೆ ಬಂದು ಇಷ್ಟು ಅವಾಂತರ ಮಾಡುತ್ತಿದ್ದೀ!" ಎಂದು ಹೇಳಿ ಮನೆಯ ಬಾಗಿಲು ಹಾಕಿಕೊಂಡ.

ನಾವು ಹುಡುಕುತ್ತಿರುವುದು ನಮ್ಮೊಳಗೇ ಇದೆ. ಬೇರೆಲ್ಲೂ ಅದನ್ನು ಕಾಣಲಾರೆವು."

೨೧

ಪಂಡಿತ ಶಿವನಾಥಶಾಸ್ತ್ರಿ (೧೮೪೭-೧೯೧೯) ಸಾಧಾರಣ ಬ್ರಾಹ್ಮೋ ಸಮಾಜದ ನಾಯಕರು. ಶ್ರೀ ರಾಮಕೃಷ್ಣರಿಗೆ ಅವರ ಮೇಲೆ ತುಂಬ ಪ್ರೀತಿ. ಶಿವನಾಥಶಾಸ್ತ್ರಿಯೂ ಪದೇ ಪದೇ ದಕ್ಷಿಣೇಶ್ವರಕ್ಕೆ ಬರುತ್ತಲೆ ಇದ್ದರು. ಹಾಗೊಮ್ಮೆ

ಪಂಡಿತ ಶಿವನಾಥಶಾಸ್ತ್ರಿ

ಬರುವಾಗ ಅವರೊಂದಿಗೆ ಕ್ರೈಸ್ತಪಾದ್ರಿಯೊಬ್ಬರಿದ್ದರು. ಅವರನ್ನು ಶ್ರೀ ರಾಮಕೃಷ್ಣರಿಗೆ ಪರಿಚಯ ಮಾಡಿಸುತ್ತ, "ಇವರು ಕ್ರೈಸ್ತರು, ತಮ್ಮನ್ನು ಕಾಣಲು ಕುತೂಹಲಿಗಳಾಗಿದ್ದಾರೆ" ಎಂದು ಶಾಸ್ತ್ರಿ ಹೇಳಿದರು.

ಶ್ರೀ ರಾಮಕೃಷ್ಣರು ಒಡನೆಯೇ, "ಏಸುವಿನ ಪಾದಗಳಿಗೆ ನಮಸ್ಕಾರ!" ಎಂದು ಮೂರು ನಾಲ್ಕು ಬಾರಿ ಹೇಳಿದರು. ಅದನ್ನು ಕೇಳಿ ಆ ಪಾದ್ರಿಯು, "ನೀವು ಹಿಂದೂ ಅಲ್ಲವೆ? ಏಸುವಿಗೇಕೆ ನಮಸ್ಕಾರ ಮಾಡುತ್ತೀರಿ?" ಎಂದು ಕೇಳಿದ.

"ಏಕೆಂದರೆ, ಅವನೊಬ್ಬ ದೇವರ ಅವತಾರ"

"ಅವತಾರವೆಂದರೇನು?"

"ರಾಮ, ಕೃಷ್ಣ ಇದ್ದಂತೆ ವಿಷ್ಣುವಿನ ಅವತಾರಗಳು ಅಸಂಖ್ಯವೆಂದು ಭಾಗವತದಲ್ಲಿದೆ."

"ನನಗೆ ಅರ್ಥವಾಗಲಿಲ್ಲ!"

"ನೋಡಿ, ಸಮುದ್ರ ಇದೆ; ವಿಶಾಲವಾದ ವ್ಯಾಪಕವಾದ ನೀರು, ದಡವೋ ಇಲ್ಲವೆನಿಸುತ್ತದೆ. ಆದರೆ ಕೆಲವು ಕಡೆ, ಕೆಲವೊಂದು ಕಾರಣದಿಂದ, ಈ ನೀರಿನಲ್ಲಿ ಸ್ವಲ್ಪ ಭಾಗ ಹೆಪ್ಪುಗಟ್ಟುತ್ತದೆ. ಐಸ್ ಆಗಿ ಕೈಯಲ್ಲಿ ಹಿಡಿದುಕೊಳ್ಳಲು ಬರುತ್ತದೆ, ಅದನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತದೆ, ತಿನ್ನಲೂಬಹುದು. ನಿರಾಕಾರ ವಾದ ನೀರು ಸಾಕಾರವಾದ ಐಸ್ ಆಗುತ್ತದೆ. ಅದೇ ಅವತಾರ. ಇತಿಹಾಸದಲ್ಲಿ ಅದಕ್ಕೊಂದು ಕಾರಣವಿರುತ್ತದೆ, ಪ್ರಯೋಜನವಿರುತ್ತದೆ, ಸ್ವಾರಸ್ಯವಿರುತ್ತದೆ.

ಅಪಾರವಾದ, ಅಪರಿಮಿತವಾದ ದೈವೀಶಕ್ತಿಯ ಒಂದು ಖಂಡಾಭಿವ್ಯಕ್ತಿ. ಮಹಾಪುರುಷರ ಮಹತ್‌ಕಾರ್ಯಗಳೆಲ್ಲ ಈ ಶಕ್ತಿಯ ಅಭಿವ್ಯಕ್ತಿಗಳೇ. ಇದೇ ಅವತಾರದ ಸ್ವಾರಸ್ಯ!"

೨೨

ಅಧರಬಾಬು ಕಲ್ಕತ್ತೆಯಲ್ಲಿ ಡೆಪ್ಯುಟಿ ಮೇಜಿಸ್ಟ್ರೇಟ್. ಶ್ರೀ ರಾಮಕೃಷ್ಣರ ಭಕ್ತ. ಅವನ ಮನೆಯಲ್ಲೇ ಶ್ರೀ ರಾಮಕೃಷ್ಣರು ಬಂಕಿಮಚಂದ್ರ ಚಟ್ಟೋಪಾಧ್ಯಾಯರನ್ನು ಕಂಡದ್ದು.

ಅವರು ದಿನವೂ ದಕ್ಷಿಣೇಶ್ವರಕ್ಕೆ ಬರುತ್ತಿದ್ದರು. ಬರುವಾಗ ಊಟವನ್ನೂ ಸಿದ್ಧಪಡಿಸಿಕೊಂಡು ಬರುವರು. ಆದರೆ ದಕ್ಷಿಣೇಶ್ವರವನ್ನು ತಲುಪಿದೊಡನೆ ಮಲಗಿ ನಿದ್ರೆ ಮಾಡಿಬಿಡುವರು. ಇದನ್ನು ಕಂಡು ಹಲವರು ಹಾಸ್ಯ ಮಾಡುವರು. ಇದೇನು ಮಾಡಿದ ಹಾಗಾಯಿತು? ಅಲ್ಲಿಂದ ಇಲ್ಲಿಗೆ ಕಷ್ಟಪಟ್ಟು ಬರುವುದು ನಿದ್ರೆ ಮಾಡುವುದಕ್ಕೇ?

ಶ್ರೀ ರಾಮಕೃಷ್ಣರು ಅದನ್ನು ಕೇಳಿ—

"ನಿಮಗೇನು ತಿಳಿದಿದೆ? ಇದು ಜಗನ್ಮಾತೆಯ ಸ್ಥಾನ. ಇಲ್ಲಿ ಶಾಂತಿ ನೆಲೆಸಿದೆ. ಇಲ್ಲಿ ಬಂದು ಹಾಳುಹರಟೆ ಹೊಡೆಯುವುದಕ್ಕಿಂತ ಸುಖವಾಗಿ ನಿದ್ರೆ ಮಾಡುವುದು ಲೇಸಲ್ಲವೆ?" ಎಂದರು.

ಒಮ್ಮೆ ಅಧರಬಾಬು ಶ್ರೀ ರಾಮಕೃಷ್ಣರನ್ನು "ನಿಮ್ಮಲ್ಲಿ ಯಾವ ಯಾವ ಶಕ್ತಿಗಳಿವೆ?" ಎಂದು ಕೇಳಿದರು. ಶ್ರೀ ರಾಮಕೃಷ್ಣರು ನಗುತ್ತ "ಬೇರೆಡೆ ಎಲ್ಲರನ್ನೂ ಹೆದರಿಸುತ್ತ ಎಲ್ಲರ ಮೇಲೆ ಅಧಿಕಾರಮಾಡುವ ಡೆಪ್ಯುಟಿ ಮೇಜಿಸ್ಟ್ರೇಟರುಗಳನ್ನು ನಿದ್ರೆಮಾಡಿಸುವ ಶಕಿಯಂತೂ ನನಗಿದೆ" ಎಂದುತ್ತರವಿತ್ತರು.

೨೩

ಹರಿಪ್ರಸನ್ನ ಚಟ್ಟೋಪಾಧ್ಯಾಯರು (ಮುಂದೆ ಸ್ವಾಮಿ ವಿಜ್ಞಾನಾನಂದರೆಂದಾದವರು ೧೮೬೮-೧೯೩೮) ಬೇಲ್‌ಘಾರಿಯಾದ ಜಯಗೋಪಾಲಸೇನರ ಉದ್ಯಾನವಾಟಿಕೆಯಲ್ಲಿ ಕೇಶವಚಂದ್ರಸೇನರನ್ನು ಕಾಣಲು ಬಂದಿದ್ದರು, ೧೮೭೮ರಲ್ಲಿ. ಆಗ ಅಲ್ಲಿಯೇ ಇದ್ದ ಶ್ರೀ ರಾಮಕೃಷ್ಣರನ್ನೂ ಕಂಡರು.

ಹರಿಪ್ರಸನ್ನ ಚಟ್ಟೋಪಾಧ್ಯಾಯ

ಮುಂದೆ ದಿವಾನ್ ಗೋವಿಂದ ಮುಖೋಪಾಧ್ಯಾಯರ ಮನೆಯಲ್ಲಿ ಶ್ರೀ ರಾಮಕೃಷ್ಣರನ್ನು ಕಂಡರು (೧೮೮೪ರ ಸುಮಾರಿಗೆ). ಅಲ್ಲಿ ಅವರ ಸಮಾಧಿಯನ್ನೂ ನೋಡುವುದಾಯಿತು.

ಇನ್ನೊಮ್ಮೆ ಇವರು ಶ್ರೀ ರಾಮಕೃಷ್ಣರ ಕೋಣೆಗೆ ಬಂದರು. ಶ್ರೀ ರಾಮಕೃಷ್ಣರು "ಏನಯ್ಯಾ, ನೀನು ಕುಸ್ತಿಯಾಡುತ್ತೀಯಂತೆ? ನನ್ನೊಂದಿಗೆ ಕುಸ್ತಿಯಾಡು ನೋಡೋಣ" ಎಂದರು. ಹರಿಪ್ರಸನ್ನ ಇನ್ನೂ ತರುಣ, ಬಲಶಾಲಿ. ಆಗಲೆಂದ. ಶ್ರೀ ರಾಮಕೃಷ್ಣರು ತಮ್ಮ ಮಂಚದಿಂದ ಎದ್ದು ಬಂದು, ಅವನ ತೋಳನ್ನು ಗಟ್ಟಿಯಾಗಿ ಹಿಡಿದು ನೂಕಲು ಮೊದಲು ಮಾಡಿದರು. ಆದರೇನು, ಹರಿಪ್ರಸನ್ನ ಸುಲಭವಾಗಿ ಅವರನ್ನು ಮಂಚದ ಕಡೆ ತಳ್ಳಿ ಕುಳ್ಳಿರಿಸಿದ.

ಇನ್ನು ಹರಿಪ್ರಸನ್ನನೇ ಹೇಳುವುದು—

"ಅವರು ನನ್ನನ್ನು ಗಟ್ಟಿಯಾಗಿ ಹಿಡಿದಾಗ, ಅವರ ಮೈಯಿಂದ ನನ್ನ ಮೈಯೊಳಗೆ ವಿದ್ಯುತ್ ಪ್ರವಾಹವೊಂದು ಹರಿಯುತ್ತಿರುವ ಅನುಭವವಾಯಿತು. ಅವರ ಸ್ಪರ್ಶ ನನ್ನನ್ನು ಆವರಿಸಿ, ಮೆಟ್ಟಿ ನಿಂತಿತು; ನನ್ನ ಬಲವೆಲ್ಲ ಉಡುಗಿಹೋಯಿತು. ಮೈನವಿರೆದ್ದಿತು. ಸಮಾಧಿಯ ಅನುಭವವಾಯಿತು."

ಅನಂತರ, ಶ್ರೀ ರಾಮಕೃಷ್ಣರು ನಗುತ್ತ, "ನೀನೇ ಗೆದ್ದೆ, ಬಿಡು" ಎಂದರು.

೨೪

ಮನೋಮೋಹನ ಮಿತ್ರ (೧೮೫೧-೧೯೦೩) ಶ್ರೀ ರಾಮಕೃಷ್ಣರ ಪಟ್ಟಶಿಷ್ಯ ರಾಮಚಂದ್ರ ದತ್ತನ ನಂಟ. ದತ್ತನೇ ಮಿತ್ರನನ್ನು ೧೮೭೯ರ ನವೆಂಬರ್ ೧೩ರಂದು

ಮನೋಮೋಹನ ಮಿತ್ರ

ಶ್ರೀ ರಾಮಕೃಷ್ಣರ ಬಳಿ ಕರೆದೊಯ್ದನಂತರ ಅವರ ಅವಿಚ್ಛಿನ್ನ ಭಕ್ತನಾಗಿಬಿಟ್ಟ. ದತ್ತ ಮತ್ತು ಮಿತ್ರ ಇಬ್ಬರೂ ಒಮ್ಮೆ ದಕ್ಷಿಣೇಶ್ವರಕ್ಕೆ ಹೋಗಿದ್ದಾಗ ನಡೆದದ್ದು ಇದು.

ಶ್ರೀ ರಾಮಕೃಷ್ಣರ ೧೮೮೧ರ ಸಾಲಿನ ಜನ್ಮದಿನೋತ್ಸವವನ್ನು ದಕ್ಷಿಣೇಶ್ವರದ ಪಂಚವಟಿಯಲ್ಲಿ ಆಚರಿಸಲು ರಾಮಚಂದ್ರ ದತ್ತನ ನೆರೆಮನೆಯಾತ ಸುರೇಂದ್ರನಾಥ ಮಿತ್ರ ನಿಶ್ಚಯಿಸಿ, ಅದಕ್ಕೆ ತಗಲುವ ವೆಚ್ಚವನ್ನೆಲ್ಲ ತಾನೇ ಭರಿಸಲು ಮುಂದಾದ.

ಶ್ರೀ ರಾಮಕೃಷ್ಣರ ಜನ್ಮದಿನೋತ್ಸವಗಳನ್ನು ಆಚರಿಸಲು ಆರಂಭಿಸಿದ್ದು ಅದೇ

ಮೊದಲು. ನೆರವಿಗೆ ಅವನ ಸೋದರ ಗಿರೀಂದ್ರನಾಥ ಮಿತ್ರ ಇದ್ದ. ದತ್ತ-ಮಿತ್ರರೂ ಕೂಡಿ ಬಹುಮಂದಿ ನೆರೆದಿದ್ದರು.

ಸಂಕೀರ್ತನ ಪ್ರಸಂಗವು ರಾಮಚಂದ್ರ ದತ್ತನ ಭಜನೆಯಿಂದಲೇ ಮೊದಲಾಯಿತು. ಸ್ವಲ್ಪ ಹೊತ್ತಿನಲ್ಲೇ ರಾಮಕೃಷ್ಣರೂ ಕೂಡಿಕೊಂಡರು. ಅವರ ದಿವ್ಯೋನ್ಮಾದದ ಸ್ಫೂರ್ತಿಯಿಂದ ನೆರೆದಿದ್ದವರೆಲ್ಲ ಸಂಕೀರ್ತನ, ನರ್ತನಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡರು.

ಕಡೆಗೆ ಶ್ರೀ ರಾಮಕೃಷ್ಣರು ಸಮಾಧಿಸ್ಥಿತಿಗೆ ಬಂದು, ಮರದ ಬೊಂಬೆಯಂತೆ ನಿಶ್ಚೇಷ್ಟರಾಗಿ ಕೂತುಬಿಟ್ಟರು. ಕಣ್ಣುಗಳು ನೆಲೆಗಟ್ಟಿದ್ದುವು. ಮುಖಮಂಡಲವು ಅಪೂರ್ವವಾದ ಕಳೆಯಿಂದ ಮಿನುಗುತ್ತಿತ್ತು. ಮುಖದ ಮಂದಹಾಸ ಎಲ್ಲರನ್ನೂ ಸೆರೆಹಿಡಿದಿತ್ತು. ಅದೊಂದು ದಿವ್ಯಾನುಭವ.

ಅದೇ ವರ್ಷ ಮಾಘೋತ್ಸವವನ್ನು ದಕ್ಷಿಣೇಶ್ವರದಲ್ಲಿ ಆಚರಿಸಲಾಯಿತು. ಬ್ರಾಹ್ಮೋಗಳಿಗೆ ವಿಶೇಷವಾದ ಹಬ್ಬ ಅದು. ಈ ಉತ್ಸವಕ್ಕೆ ಕಲ್ಕತ್ತೆಯಿಂದ ಕೇಶವಚಂದ್ರಸೇನರೂ ಬಂದಿದ್ದರು. ಮನೋಮೋಹನ ಮಿತ್ರನೂ ಬ್ರಾಹ್ಮೋ ಆಗಿದ್ದವನೇ; ಕೇಶವಚಂದ್ರರ ಶಿಷ್ಯನೇ. ಆದರೆ ಶ್ರೀ ರಾಮಕೃಷ್ಣರ ಪ್ರಸಿದ್ಧಿ, ಪ್ರಚಾರಗಳಿಗೆ ನಡುಕಟ್ಟಿ ನಿಂತವನು. ಹೋದಲ್ಲಿ ಬಂದಲ್ಲಿ ಅವರದ್ದೇ ಮಾತು, ಅವರ ಉಪದೇಶಗಳದ್ದೇ ಬರಹ. ಜನಸಾಮಾನ್ಯರಲ್ಲಿ ಶ್ರೀ ರಾಮಕೃಷ್ಣರ ಮಹತಿಯನ್ನು ಹರಡಿದವರಲ್ಲಿ ಮನೋಮೋಹನನೇ ಮೊದಲಿಗ.

೨೫

ಬ್ರಾಹ್ಮೋಗಳಿಗೆ ಪ್ರಿಯವಾದ ವಿಚಾರವೆಂದರೆ ದೇವರು ನಿರಾಕಾರನೆಂಬುದು, ಮೂರ್ತಿಪೂಜೆಯಲ್ಲಿ ಹುರುಳಿಲ್ಲವೆಂಬುದು. ಶ್ರೀ ರಾಮಕೃಷ್ಣರ ಬಳಿ ಬಂದವರೆಲ್ಲ ಅವರನ್ನು ಈ ವಿಚಾರವಾಗಿಯೆ ಪ್ರಶ್ನಿಸುತ್ತಿದ್ದರು. ಮನೋಮೋಹನ ಮಿತ್ರನೇನು ಅಪವಾದವಲ್ಲ.

ಶ್ರೀ ರಾಮಕೃಷ್ಣರು "ಅಯ್ಯಾ ದೇವರೇನೋ ನಿರಾಕಾರನೇ. ಆದರೆ ಸರ್ವಶಕ್ತನಾದುದರಿಂದ ಸಾಕಾರನೂ ಹೌದು. ನೀರಾಗಿದ್ದರೆ ನೀರು, ಗಟ್ಟಿಯಾದರೆ ಐಸ್, ಗಾಳಿಯಾದರೆ ಆವಿ. ಯಾವ ರೀತಿ ಭಕ್ತನ ಮನೋವೃತ್ತಿಯಿದೆಯೋ ಅದೇ ರೀತಿ ಅವನು ನಿರಾಕಾರ, ವ್ಯಾಪಕ, ಆಕಾಶದಂತೆ. ಭಕ್ತನಿಗಾದರೆ ಸಾಕಾರ. ಎಲ್ಲವೂ ಬ್ರಹ್ಮ ಎಂದ ಮೇಲೆ ಕಾಳಿ ಯಾತಕ್ಕೆ ಬ್ರಹ್ಮ ಅಲ್ಲ? ಕೃಷ್ಣ ಯಾತಕ್ಕೆ ದೇವರಲ್ಲ?

ದೇವರ ಸ್ವರೂಪ ಏನೆಂದು ನೀನೇ ತಿಳಿದುಕೊಳ್ಳಬೇಕೆಂದರೆ ಏಕಾಂತದಲ್ಲಿ ಕೂತು ಧ್ಯಾನಮಾಡು. ಸಾಕಾರದಂತೆ ತೋರಿಕೊಂಡದ್ದೇ ದಿಟವಾಗಿ ನಿರಾಕಾರ ಎಂಬ ತತ್ತ್ವ ಹೊರಹೊಮ್ಮುತ್ತದೆ. ಮನಸ್ಸಿನ ದಾರಿಯನ್ನು ಬಿಟ್ಟು ಹೃದಯದ ದಾರಿಯನ್ನು ಹಿಡಿ. ಕಾಲ ಪಕ್ವವಾದಾಗ ಫಲ ದೊರೆಯುತ್ತದೆ.

ಯಾವುದಕ್ಕಾದರೂ ಶ್ರದ್ಧೆ ಬೇಕು. ಶ್ರದ್ಧೆಯಲ್ಲಿ ಎರಡು ಬಗೆ. ಮೊದಲನೆಯದು ಶಾಸ್ತ್ರ ಹೇಳಿದ್ದನ್ನೋ ಗುರು ಹೇಳಿದ್ದನ್ನೊ ನಂಬಿಕೊಂಡು ಅದರಂತೆ ನಡೆಯುವುದು. ಇದು ಮೊದಲಲ್ಲಿ ಬೇಕೇ ಬೇಕು. ಇದಲ್ಲದೆ ಅಧ್ಯಾತ್ಮದಲ್ಲಿ ಮುಂದುವರಿಯಲಾರೆ. ಎರಡನೆಯದು ನಿನ್ನ ಅನುಭವದಲ್ಲಿ ಶ್ರದ್ಧೆ. ದಿಟವಾದ ಶ್ರದ್ಧೆಯೆಂದರೆ ಇದೇ—ನೇರಾದ ಅನುಭವ. ಆದರೆ ಆರಂಭಿಕ ಶ್ರದ್ಧೆಯನ್ನು ಗಟ್ಟಿಮಾಡಿಕೋ. ಅದು ಹಸಿಯಾಗಿದ್ದರೆ ನಿಜಶ್ರದ್ಧೆ ಹುಟ್ಟಿಕೊಳ್ಳಲಾರದು.

ದೇವರನ್ನು ಕಾಣಲು ತವಕ ಇರಬೇಕು. ಹೃದಯದಲ್ಲಿ ತವಕ ಇಲ್ಲದೆ ಮನಸ್ಸಿನಿಂದಲೇ ದೇವರನ್ನು ಅರಿತುಕೊಳ್ಳಲಾರೆ. ಅಂಥ ತವಕವೂ ಹಸಿವೆಯಂತೆ, ಬಾಯಾರಿಕೆಯಂತೆ ತಾನೇ ತೋರಿಕೊಳ್ಳಬೇಕು; ನಾವು ಕೃತಕವಾಗಿ ಮಾಡಿ

ಕೊಳ್ಳಲಾರೆವು. ಪ್ರಪಂಚದ ಭೋಗಗಳನ್ನು ಅನುಭವಿಸದೆ, ಅನಂತರ ಅವುಗಳಲ್ಲಿ ಆಸಕ್ತಿಯನ್ನು ತೊರೆಯದೆ, ದೇವರನ್ನು ಕಾಣುವ ತವಕ ತೋರಿಕೊಳ್ಳುವುದಿಲ್ಲ; ತವಕ ತೋರಿಕೊಳ್ಳದಿದ್ದರೆ ದೇವರೂ ದೊರಕುವುದಿಲ್ಲ.

ಹೆಂಡಿರು, ಮಕ್ಕಳು, ಮನೆ, ಉದ್ಯಮ ಇವುಗಳಿಗೆ ಜನ ಕೊಡಗಟ್ಟಳೆ ಕಣ್ಣೀರು ಸುರಿಸುತ್ತಾರೆ. ದೇವರನ್ನು ಕಾಣಲು ಮಾತ್ರ ಒಂದು ತೊಟ್ಟು ಕಣ್ಣೀರು ಬರುವುದಿಲ್ಲ!"

೨೬

'ಮ' (ಮಹೇಂದ್ರನಾಥ ಗುಪ್ತ; ಮಾಸ್ಟರ್ ಮಶಾಯ್) ದಕ್ಷಿಣೇಶ್ವರಕ್ಕೆ ಬಂದಿದ್ದಾಗ ಒಮ್ಮೆ ಶ್ರೀ ರಾಮಕೃಷ್ಣರು "ಅಯ್ಯಾ, ತಾಯಿ ಒಳಗಿದ್ದುಕೊಂಡು ಎಲ್ಲವನ್ನೂ ಮಾಡಿಸುತ್ತಾಳೆ. ನಾನು ಮಾಡುವುದೆಂಬುದು ಏನೂ ಇರದು! ಇದು



'ಮ' (ಮಹೇಂದ್ರನಾಥ ಗುಪ್ತ)

ನನ್ನ ನಂಬಿಕೆ. ಇಷ್ಟರಿಂದ ಕೆಲವರು ನನ್ನನ್ನು ಕಾಳಿಯ ಪೂರ್ಣಾವತಾರವೆಂದೇ ಹೇಳುತ್ತಾರೆ. ಇದು ಸರಿಯೆ?" 'ಮ' ಉತ್ತರವಿತ್ತರು—

"ಗುರುಗಳೇ ನನಗೆ ತಿಳಿಯದು. ಪೂರ್ಣಾವತಾರವೋ, ಅರ್ಧಾವತಾರವೋ, ಅಂಶಾವತಾರವೋ ನಾನಂತೂ ಹೇಳಲಾರೆ. ಆದರೆ ನೀವು ಹಿಂದೆ ಹೇಳಿದ ಮಾತೊಂದು ನನಗೆ ಅರ್ಥವಾಗಿದೆ; ನಾನು ಅದನ್ನು ಒಪ್ಪಿಯೂ ಇದ್ದೇನೆ. ಅದೇನೆಂದರೆ—

'ಗೋಡೆಯನ್ನು ನೋಡು, ಹೊರಗಣ ಯಾವ ವಸ್ತು ಕಾಣಿಸುತ್ತದೆ? ಎಲ್ಲವನ್ನೂ ಗೋಡೆ ಮರೆ ಮಾಡಿಬಿಡುತ್ತದೆ. ಆದರೆ ಈ ಗೋಡೆಯಲ್ಲಿ

ಸಣ್ಣದೊಂದು ಗುಂಡಾಗಿರುವ ಕಿಂಡಿ ಇದ್ದರೆ, ಅದರ ಮೂಲಕ ಇಣುಕಿನೋಡಿ ಹೊರಗಣ ವಿಶಾಲವಾದ ಮೈದಾನ, ಗಿಡಮರಗಳು, ಬೆಟ್ಟ ಗುಡ್ಡಗಳು ಎಲ್ಲವನ್ನೂ ಕಾಣಬಹುದಲ್ಲವೆ? ಬರಿಯ ಗೋಡೆಯಿಂದ ಏನು ಕಂಡೀತು?'

ಮಹಾಶಯರೇ, ನೀವೊಂದು ಅಂಥ ಕಿಂಡಿ. ಪ್ರಪಂಚವನ್ನು ನೋಡಿದರೆ ಗೋಡೆಯನ್ನು ನೋಡಿದಂತೆ. ಅಧ್ಯಾತ್ಮ ಅದರ ಮೂಲಕ ಕಾಣುವುದಿಲ್ಲ. ಆದರೆ ಪ್ರಪಂಚದಲ್ಲೇ ಇರುವ ನಿಮ್ಮನ್ನು ನೋಡಿದಾಗ, ನಿಮ್ಮ ಮಾತನ್ನು ಕೇಳಿದಾಗ ಒಂದು ಕಿಂಡಿ ತೋರಿಕೊಳ್ಳುತ್ತದೆ. ನಿಮ್ಮ ಮೂಲಕ ಅಧ್ಯಾತ್ಮದ ಅನುಭವವಾಗುತ್ತದೆ.

ನಿಮ್ಮ ಹತ್ತಿರ ಹತ್ತಿರ ಬಂದು ನೋಡಿದಾಗ, ಕಿಂಡಿಯಿಂದ ಕಾಣುವ ನೋಟ ಹೆಚ್ಚು ಹೆಚ್ಚು ವಿಶಾಲವಾಗುತ್ತದೆ. ಅಥವಾ, ಕಿಂಡಿಯನ್ನೇ ಹೆಚ್ಚು ಹೆಚ್ಚು ದೊಡ್ಡದು ಮಾಡಿದರೂ ಆಯಿತು! ಗುರುಗಳ ಅಗತ್ಯ ಇಷ್ಟೇ ತಾನೆ?

ಗುರುವಿನೊಂದಿಗೆ ಸಂಪರ್ಕ ಬೆಳೆದಂತೆಲ್ಲ, ಅಧ್ಯಾತ್ಮದಲ್ಲಿ ರುಚಿ ಹೆಚ್ಚುತ್ತದೆ, ಅಧ್ಯಾತ್ಮದ ಅರಿವು ಆಳವಾಗುತ್ತದೆ, ಅನುಭವ ಬೆಳಗುತ್ತದೆ."

ಈ ಮಾತುಗಳನ್ನು ಕೇಳಿ ಶ್ರೀ ರಾಮಕೃಷ್ಣರಿಗೆ ಸಂತೋಷವಾಯಿತು.

೨೭

ಒಮ್ಮೆ 'ಮ' (ಮಹೇಂದ್ರನಾಥ ಗುಪ್ತ) ಶ್ರೀ ರಾಮಕೃಷ್ಣರೊಂದಿಗೆ ಮಾತನಾಡುತ್ತ ಕುಳಿತಿದ್ದಾಗ, ಯಾವುದೋ ವಿಚಾರವೆತ್ತಿಕೊಂಡು ವಾದಮಾಡಲು ತೊಡಗಿದರು. ಶ್ರೀ ರಾಮಕೃಷ್ಣರು—

"ಅಯ್ಯಾ, ನಿಮ್ಮ ಕಲ್ಕತ್ತಾ ಮಂದಿಗೆ ಪ್ರಿಯವಾದ ಹವ್ಯಾಸವೆಂದರೆ ಜನರನ್ನು ಸೇರಿಸುವುದು, ಭಾಷಣ ಬಿಗಿಯುವುದು, ಊರವರಿಗೆಲ್ಲ ಬೆಳಕನ್ನು ಕಾಣಿಸಲು ಹವಣಿಸುವುದು. ತಾನೇ ಬೆಳಕನ್ನು ಕಂಡುಕೊಳ್ಳಬೇಕೆಂಬ ಆಸೆ ಯಾರಿಗೂ ಇರದು! ಬೇರೆಯವರಿಗೆ ಪರಮಾರ್ಥವನ್ನು ಬೋಧಿಸಲು ನಿಮಗೆ ಯಾರಾದರೂ ಪರವಾನಿಗೆ ಕೊಟ್ಟು ಇಲ್ಲಿಗೆ ಕಳುಹಿಸಿದ್ದಾರೆಯೆ?

ಈ ವಿಚಾರವಾಗಿ ನೀವೇನು ನಿಮ್ಮ ಮೆದುಳನ್ನು ದಣಿಸಬೇಕಾಗಿಲ್ಲ. ಒಮ್ಮೆ ಸುತ್ತಲೂ ಕಣ್ತೆರೆದು ನೋಡಿ, ಸಾಕು. ಜಗತ್ತು ಎಷ್ಟು ಕ್ರಮಬದ್ಧವಾಗಿ ಸಾಗಿಹೋಗುತ್ತಿದೆ! ದಿನವೂ ಸೂರ್ಯ ಕಾಣಿಸಿಕೊಳ್ಳುತ್ತಾನೆ. ಹಗಲಾಗುತ್ತದೆ. ಹಾಗೆಯೇ ರಾತ್ರಿಯೂ ಆಗುತ್ತದೆ. ಮಳೆಗಾಲದಲ್ಲಿ ಮಳೆ ಬರುತ್ತದೆ. ಭೂಮಿ ನೆನೆಯುತ್ತದೆ, ಪೈರು ಬರುತ್ತದೆ. ಜನರಿಗೆ ಆಹಾರ ದೊರೆಯುತ್ತದೆ.

ಮತ್ತೆ, ಮನೆ-ಮಠ, ಗುಡಿ-ಗುಂಡಾರ ಎಲ್ಲವೂ ಎದ್ದುಕೊಳ್ಳುತ್ತದೆ. ಕಲೆ, ಸಂಸ್ಕೃತಿ ಎಲ್ಲವೂ ಮೂಡಿಕೊಳ್ಳುತ್ತದೆ. ದೇವರು ಎಲ್ಲವನ್ನೂ ನೋಡಿಕೊಳ್ಳುತ್ತಾನೆ; ಯಾವೊಂದು ಪ್ರಾಣಿಯನ್ನೂ ಉಪೇಕ್ಷೆ ಮಾಡುವುದಿಲ್ಲ. ಇರುವೆಗೂ ಆಹಾರ ಇದೆ, ಆನೆಗೂ ಆಹಾರ ಇದೆ.

ಯಾವುದರ ವಿಚಾರವಾಗಿಯೂ ಮನುಷ್ಯನೇನು ತಲೆ ಕೆಡಿಸಿಕೊಳ್ಳ ಬೇಕಾದುದಿಲ್ಲ. ತಲೆ ಕೆಡಿಸಿಕೊಂಡು ಅವನು ಮಾಡಬಹುದಾದದ್ದು ಕೂಡ ಏನಿದೆ? ಹೀಗೆ ಎಲ್ಲಕ್ಕೂ ನಿಯಾಮಕನಾದ ದೇವರನ್ನು ತನ್ನ ಬದುಕಿನಲ್ಲಿ ಕಂಡುಕೊಳ್ಳುವುದಷ್ಟೆ ಅವನು ಮಾಡಬೇಕಾದ ಕೆಲಸ. ಆ ಬೆಳಕು ಅವನನ್ನು ಎತ್ತುತ್ತದೆ, ಅವನನ್ನು ತಿದ್ದುತ್ತದೆ, ನೆಮ್ಮದಿ ನೀಡುತ್ತದೆ" ಎಂದರು.

ಅಂದಿನಿಂದ 'ಮ' ವಾದವಿವಾದಗಳಿಂದ ದೂರವಾದ.

೨೮

ಬಂಗಾಳೀ ನಟಸಾರ್ವಭೌಮ ಗಿರಿಶಚಂದ್ರ ಘೋಷ್ ಶ್ರೀ ರಾಮಕೃಷ್ಣರ ಭಕ್ತ. ಮತ್ತೆ ಮತ್ತೆ ದಕ್ಷಿಣೇಶ್ವರಕ್ಕೆ ಬರುತ್ತಿದ್ದ. ಹಾಗೊಮ್ಮೆ ಬರುವಾಗ ಅವನ ಜೊತೆಗೆ ಕಾಳೀಪದ ಘೋಷ್ ಎಂಬ ಇನ್ನೊಬ್ಬ ನಟ ಬಂದ. ಅವನೂ ಉತ್ತಮ ನಟನೇ; ಅಷ್ಟೇ ಭಾರಿ ಕುಡುಕ. ಸಂಪಾದನೆಯನ್ನೆಲ್ಲ ಹಾಳು ಮಾಡಿ ಹನ್ನೆರಡು ವರ್ಷ ಹೆಂಡತಿಯ ಕಣ್ಣೀರಿಗೆ ಕಾರಣನಾಗಿದ್ದ. ಹೆಂಡತಿ ಶ್ರೀ ರಾಮಕೃಷ್ಣರಲ್ಲಿ ತನ್ನ ಅಳಲನ್ನು ತೋಡಿಕೊಂಡಿದ್ದಳು.

ಗಿರಿಶಚಂದ್ರ ಘೋಷ್

ಮರುದಿನವೇ ಕಾಳೀಪದ ಕಾಣಿಸಿಕೊಂಡ. ಶ್ರೀ ರಾಮಕೃಷ್ಣರು "ಓಹೋ, ಹನ್ನೆರಡು ವರ್ಷ ಹೆಂಡತಿಯನ್ನು ಹುರಿದು ಬಾಯಿಗೆ ಹಾಕಿಕೊಂಡಿರುವವನು!"

ಎಂದರು. ಈ ಮಾತಿಗೆ ಕಾಳೀಪದ ಅಚ್ಚರಿಗೊಂಡರೂ ಸುಮ್ಮನಿದ್ದ. ಅನಂತರ ಶ್ರೀ ರಾಮಕೃಷ್ಣರು "ನಿನಗೇನು ಬೇಕು?" ಎಂದು ಕೇಳಿದರು. ನಾಚಿಕೆಗೆಟ್ಟ ಕಾಳೀಪದ, "ಕುಡಿಯಲು ವೈನ್ ಇದ್ದರೆ ಕೊಡಿ!" ಎಂದ. ಮುಂದೆ ಅವರಿಬ್ಬರ ನಡುವೆ ಸಂಭಾಷಣೆ.

ಕಾಳಿಪದ ಘೋಷ್

"ಓಹೋ, ಇಲ್ಲದೆ ಏನು ಸೊಗಸಾದ ವೈನೇ ಇದೆ!"

"ಹಾಗಾದರೆ ಕೊಡಿ, ಚೆನ್ನಾಗಿ ಅಮಲೇರುವುದೋ?"

"ಆಹಾ, ಅದರ ರುಚಿ, ಕಂಪು, ತಂಪು, ಕಾವು ಏನು ಹೇಳುವುದು?"

"ಏನು ಬ್ರಿಟಿಷ್ ವೈನೋ?"

"ಅದಕ್ಕಿಂತ ಹೆಚ್ಚು ಬಲಕಾರಿ. ಅದನ್ನು ಕುಡಿದರೆ ಬ್ರಿಟಿಷ್ ವೈನು ಬರಿಯ ನೀರು. ಇದನ್ನು ಇಲ್ಲಿಯೇ ಮಾಡಿದ್ದು, ಮನೆಯಲ್ಲೇ ತಯಾರಾದದ್ದು!"

“ಹಾಗಾದರೆ ತಡವೇಕೆ? ಕೊಡಿ!”

“ಕೇಳಿದವರಿಗೆಲ್ಲ ಕೊಡುವುದಕ್ಕಾಗುತ್ತದೆಯೇ? ಅದನ್ನು ತಾಳಿಕೊಳ್ಳುವ ಸಾಮರ್ಥ್ಯವಿದ್ದರೆ ಕೊಡಬಹುದು.”

“ನನಗೆ ಸಾಮರ್ಥ್ಯವಿಲ್ಲವೆ? ಕುಡಿದ ಮೇಲೆ ಬದುಕಿನುದ್ದಕ್ಕೂ ಮತ್ತು ಇದ್ದರೂ ಸರಿಯೇ!”

“ಹಾಗಾದರೆ ಸರಿ!” ಎಂದು ಶ್ರೀ ರಾಮಕೃಷ್ಣರು ಅವನ ಎದೆಯ ಮೇಲೆ ಕೈಯಿಟ್ಟರು. ಒಡನೆಯೇ ಅವನ ಮೈಯೆಲ್ಲ ರೋಮಾಂಚವಾಯಿತು. ಗಟ್ಟಿಯಾಗಿ ಅಳಲು ಮೊದಲು ಮಾಡಿದ. ಲಾಟು ಮತ್ತಿತರ ಶಿಷ್ಯರು ಎಷ್ಟು ಸಮಾಧಾನ ಮಾಡಿದರೂ ಅಳು ನಿಲ್ಲಲಿಲ್ಲ. ಕಡೆಗೆ, ಬದುಕಿನಲ್ಲೇ ಒಂದು ಪರಿವರ್ತನೆಯಾಗಿಬಿಟ್ಟಿತು. ಕುಡಿಯುವುದನ್ನು ಬಿಟ್ಟ, ಹೆಂಡತಿ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳತೊಡಗಿದ. ಶ್ರೀ ರಾಮಕೃಷ್ಣರ ಪರಮಭಕ್ತನಾದ.

ಮುಂದೊಂದು ದಿನ ಶ್ರೀ ರಾಮಕೃಷ್ಣರೊಂದಿಗೆ ದೋಣಿಯಲ್ಲಿ ಕೂತು ಗಂಗಾನದಿಯನ್ನು ದಾಟುತ್ತಿರುವಾಗ, ಶ್ರೀ ರಾಮಕೃಷ್ಣರು ಅವನ ನಾಲಗೆಯ ಮೇಲೆ ಮಂತ್ರಾಕ್ಷರವನ್ನು ಬರೆದರು.

೨೯

ಶ್ರೀ ರಾಮಕೃಷ್ಣರ ಶಿಷ್ಯರಲ್ಲೆಲ್ಲ ಲಾಟು ಮಹಾರಾಜನದು (ರಖ್‌ತು ರಾಮ, ಮುಂದೆ ಸ್ವಾಮಿ ಅದ್ಭುತಾನಂದರು) ಅತ್ಯಂತ ಸ್ವಾರಸ್ಯವಾದ ವ್ಯಕ್ತಿತ್ವ, ಉಜ್ವಲವಾದದ್ದು. ಬಿಹಾರದಿಂದ ಕೆಲಸಕ್ಕೆಂದು ಕಲ್ಕತ್ತೆಗೆ ಬಂದ ಬಡ ಹುಡುಗ. ರಾಮಚಂದ್ರ ದತ್ತರ ಮನೆಯಲ್ಲಿ ಊಳಿಗಕ್ಕೆ ಸೇರಿದ. ಹದಿನಾರಾಣೆ ಹಳ್ಳಿಯ ಮುಕ್ಕ. ಶಾಲೆಯ ಮುಖ ಕಂಡವನಲ್ಲ. ಅಷ್ಟೇ ಅಮಾಯಕ. ಶ್ರೀ ರಾಮಕೃಷ್ಣರೊಮ್ಮೆ ಅವನ ಅಧ್ಯಾತ್ಮಿಕ ಸಾಮರ್ಥ್ಯವನ್ನು ಗಮನಿಸಿ ತಮ್ಮ ಬಳಿ ಇರಿಸಿಕೊಂಡರು. ಅವರು ಕಣ್ಣುಮುಚ್ಚುವ



ಲಾಟು ಮಹಾರಾಜ್

ವರೆಗೂ ಲಾಟು ಅವರ ಒಲುಮೆಯ ಬಂಟ. ಅಧ್ಯಾತ್ಮದಲ್ಲೂ ಅವರು ಅವನ ಮಾರ್ಗದರ್ಶಿಯಾದರು.

ಒಮ್ಮೆ ಭಕ್ತರೊಬ್ಬರು ಲಾಟುವಿಗೆಂದು ಒಂದು ಜೊತೆ ಹೊಸ ಚಪ್ಪಲಿಗಳನ್ನು

ತಂದರು. ಎಲ್ಲೊ ಬಿಡುವಿಲ್ಲದೆ ಇರುತ್ತಿದ್ದ ಲಾಟುವನ್ನು ಅವರು ಕಾಣಲಿಲ್ಲ. ಸರಿ, ಶ್ರೀ ರಾಮಕೃಷ್ಣರಿಗೇ ಹೇಳಿ, ಕೋಣೆಯ ಹೊರಗಿರಿಸಿ ಹೊರಟು ಹೋದರು. ಅಂದು ಕೆಲಸದ ನಡುವೆ ಶ್ರೀ ರಾಮಕೃಷ್ಣರಿಗೆ ಇದು ಮರೆತುಹೋಯಿತು. ರಾತ್ರಿ ಕಳೆಯಿತು.

ಮರುದಿನ ಮುಂಜಾನೆ ಕೋಣೆಯ ಹೊರಗೆ ಹೋಗಿ ನೋಡಿದರು. ಒಂದೇ ಚಪ್ಪಲಿ ಇದ್ದಿತು. ಇನ್ನೊಂದನ್ನು (ಆಗ ಅದು ಕಾಡುಪ್ರದೇಶವಾಗಿದ್ದುದರಿಂದ) ನಾಯಿಯೋ ನರಿಯೋ ರಾತ್ರಿ ಎಳೆದುಕೊಂಡು ಹೋಗಿಬಿಟ್ಟಿದ್ದಿತು. ಶ್ರೀ ರಾಮಕೃಷ್ಣರು ಒಡನೆಯೇ ತೋಟಕ್ಕೆ ಇಳಿದರು, ಎಲ್ಲ ಕಡೆ ಚಪ್ಪಲಿಯನ್ನು ಹುಡುಕಾಡತೊಡಗಿದರು.

ಒಂದು ಗಂಟೆ ಕಾಲ ತಡುಕಾಡಿದ ಮೇಲೆ ಎಲ್ಲಿಯೋ ಅದು ಸಿಕ್ಕಿತು. ಶ್ರೀ ರಾಮಕೃಷ್ಣರು ಸಂತೋಷದಿಂದ ಅದನ್ನು ತಂದು ಇನ್ನೊಂದು ಚಪ್ಪಲಿಯ ಪಕ್ಕ ಇರಿಸಿದರು. ಅಷ್ಟು ಹೊತ್ತಿಗಾಗಲೇ ಲಾಟು ಅಲ್ಲಿಗೆ ಬಂದಿದ್ದ. ಕೋಣೆಯಲ್ಲಿ ಗುರುಗಳನ್ನು ಕಾಣದೆ, ಎಲ್ಲಿ ಹೋದರೆಂದು ಹುಡುಕುತ್ತಿದ್ದ. ಈಗ ಬಂದ ಅವರ ಕೈಯಲ್ಲೊಂದು ಚಪ್ಪಲಿ ಇದ್ದುದನ್ನು ಕಂಡು ಅದೇನೆಂದು ಕೇಳಿದ. ಶ್ರೀ ರಾಮಕೃಷ್ಣರು ನಡೆದುದನ್ನು ತಿಳಿಸಿದರು.

ಲಾಟುವಿಗೆ ತುಂಬ ಕಸಿವಿಸಿಯಾಯಿತು. "ಅಯ್ಯೋ ಹೀಗೂ ಉಂಟೆ, ಗುರುಗಳೇ? ನಿಮ್ಮ ಸೇವೆಗೆಂದಿರುವವನು ನಾನು. ನೀವೇ ನನ್ನ ಸೇವೆಗೆ ಹೊರಟರೆ ನಾನೆಲ್ಲಿ ಹೋಗಲಿ?" ಎಂದು ಕಳವಳ ತೋಡಿಕೊಂಡ. ಅದಕ್ಕೆ ಅವರು, "ಹಾಗಲ್ಲ, ನನಗೆ ಹೇಳಿ ಅವರು ಚಪ್ಪಲಿಯನ್ನು ಅಲ್ಲಿ ಇರಿಸಿ ಹೋಗಿದ್ದರು. ಎಂದ ಮೇಲೆ, ನನ್ನ ಹೊಣೆ ತಾನೆ?"

೩೦

ಲಾಟು, ಶ್ರೀ ರಾಮಕೃಷ್ಣರೊಂದಿಗೆ ಇದ್ದಾಗ ಒಂದು ದಿನ, ಯಾರೋ ಗೃಹಸ್ಥ ಒಬ್ಬ ಬಂದು ಗಲಾಟೆ ಮಾಡತೊಡಗಿದ. ಶ್ರೀ ರಾಮಕೃಷ್ಣರನ್ನು ಬಯ್ದ. ಲಾಟುವಿಗೆ ಸಿಟ್ಟು ಬಂದು ಅವನನ್ನು ತರಾಟೆಗೆ ತೆಗೆದುಕೊಂಡ. ಆತ ಹೊರಟುಹೋದ ಮೇಲೆ ಶ್ರೀ ರಾಮಕೃಷ್ಣರು "ಲಾಟೂ, ನೀನು ಮಾಡಿದ್ದು ಸರಿಯಲ್ಲ. ಏನೋ ಕಷ್ಟಗಳಿದ್ದು, ದುಃಖವಿದ್ದು ಜನ ಇಲ್ಲಿಗೆ ಬರುತ್ತಾರೆ. ಇಲ್ಲಿಯೂ ಅವರು ಸರಿಯಾಗಿಯೇ ಇರಬೇಕು ಎಂದರೆ ಅವರು ಎಲ್ಲಿಗೆ ಹೋಗಬೇಕು? ಏನೋ ಪಾಪ, ಅವನಿಗೇನು ಬೇಸರವೋ! ನೀನು ಅವನನ್ನು ದಂಡಿಸಬಾರದಿತ್ತು. ಅವನ ಮನೆಗೆ ಹೋಗಿ ಅವನ ಕ್ಷಮೆ ಕೇಳಿಕೋ! ಅವನಿಗೆ ಸ್ವಲ್ಪ ಸಮಾಧಾನ ಆದೀತು" ಎಂದು ಸೂಚಿಸಿದರು.

ಲಾಟು ಒಡನೆಯೇ ಎದ್ದು ಆತನ ಮನೆಗೆ ಹೋಗಿ ತನ್ನನ್ನು ಮನ್ನಿಸುವಂತೆ ಕೇಳಿಕೊಂಡ. ಹಿಂದಿರುಗಿ ಬಂದ ಮೇಲೆ, ಶ್ರೀ ರಾಮಕೃಷ್ಣರು, "ಒಳ್ಳೆಯದನ್ನು ಮಾಡಿದೆ. ಆದರೆ ಆತನಿಗೆ ನನ್ನ ನಮಸ್ಕಾರಗಳನ್ನೂ ತಿಳಿಸಿದೆಯಾ?" ಎಂದು ಕೇಳಿದರು. ಲಾಟು, "ಇಲ್ಲವಲ್ಲ, ಅದು ನನಗೆ ಹೊಳೆಯಲೇ ಇಲ್ಲವಲ್ಲ!" ಎಂದಾಗ, "ಹೋಗು, ನನ್ನ ನಮಸ್ಕಾರಗಳನ್ನೂ ಆತನಿಗೆ ತಿಳಿಸಿ ಬಾ" ಎಂದು ಹೇಳಿದರು.

ಲಾಟು ಮರುಮಾತನಾಡದೆ ಆತನ ಮನೆಗೆ ಮತ್ತೊಮ್ಮೆ ಹೋಗಿ ಠಾಕುರರ ನಮಸ್ಕಾರಗಳನ್ನು ತಿಳಿಸಿದ. ಆತನಿಗೆ ಈ ಸೌಜನ್ಯವನ್ನು ತಡೆಯಲಾಗಲಿಲ್ಲ. ಗಳಗಳನೆ ಅಳುತ್ತ, ಶ್ರೀ ರಾಮಕೃಷ್ಣರ ಬಳಿ ಓಡಿಬಂದು, ಅವರ ಕಾಲುಗಳನ್ನು ಭದ್ರವಾಗಿ ಹಿಡಿದು— "ನೀವು ಮನುಷ್ಯರಲ್ಲ, ದೇವತೆಗಳು!" ಎಂದ.

ಆಗ ಶ್ರೀ ರಾಮಕೃಷ್ಣರು ಲಾಟುವಿನ ಕಡೆ ತಿರುಗಿ "ಈಗ ನೋಡು, ನಿನ್ನ ಅಪರಾಧಕ್ಕೆ ಕ್ಷಮೆ ದೊರಕಿತು!" ಎಂದರು.

೩೧

ಗದಾಶಂಕರ ಕೇಶವಚಂದ್ರಸೇನರ ಶಿಷ್ಯ; ಬ್ರಾಹ್ಮೋ. ಅವನೊಮ್ಮೆ ಶ್ರೀ ರಾಮಕೃಷ್ಣರನ್ನು ಕಾಣಲು ಬಂದ. ಶ್ರೀ ರಾಮಕೃಷ್ಣರು ಕೇಳಿದರು—"ಏನಯ್ಯಾ, ನೀನು ಬ್ರಾಹ್ಮಣ ತಾನೆ? ಬ್ರಾಹ್ಮಣ ಕರ್ಮಗಳನ್ನೆಲ್ಲ ಮಾಡುತ್ತಿದ್ದೀಯೋ?" ಅದಕ್ಕೆ ಆತ "ಇಲ್ಲ, ನನಗೆ ಅವುಗಳಲ್ಲಿ ನಂಬಿಕೆಯಿಲ್ಲ!"

ಶ್ರೀ ರಾಮಕೃಷ್ಣರು—

"ನೋಡು, ಹಾಗೆಲ್ಲ ಬಲವಂತವಾಗಿ ಬಿಟ್ಟುಬಿಡಬಾರದು. ಕುಂಬಳಬಳ್ಳಿಯನ್ನು ನೋಡಿದ್ದೀಯಾ? ಕಾಯಿ ಬರುವ ಮೊದಲು ಹೂವು ಬರುತ್ತದೆ. ಹೂವು ಏಕೆಂದು ಕಿತ್ತು ಬಿಸುಟರೆ ಕಾಯಿ ಬರುತ್ತದೆಯೆ? ಕಾಯಿ ಬಂದ ಮೇಲೆ ಹೂವು ತಾನಾಗಿ ಬಿದ್ದುಹೋಗುತ್ತದೆ.

ಇರಲಿ, ನಿನ್ನ ನಂಬಿಕೆಯಿರುವುದು ದೇವರ ಸಾಕಾರಮೂರ್ತಿಯಲ್ಲೋ, ನಿರಾಕಾರದಲ್ಲೊ?"

"ನನಗೆ ದೇವರು ನಿರಾಕಾರನೇ!"

"ಅದು ಸರಿ. ಆದರೆ ನಿರಾಕಾರ ದೇವರನ್ನು ಒಮ್ಮೆಲೆ ಗುರುತಿಸುವುದು ಸಾಧ್ಯವೆ? ಧನುರ್ವಿದ್ಯೆ ಕಲಿಯುವವರು ಏನು ಮಾಡುತ್ತಾರೆ? ಮೊದಲು ದಪ್ಪದೊಂದು ಬಾಳೆಯ ಮರಕ್ಕೆ ಗುರಿಯಿಟ್ಟು ಬಾಣ ಬಿಡುತ್ತಾರೆ. ಅನಂತರ ಸಣ್ಣ ಗಿಡವನ್ನು ಆಯ್ದುಕೊಳ್ಳುತ್ತಾರೆ. ಆಮೇಲೆ, ಹಣ್ಣು ಒಂದನ್ನು ಎದುರಿಗಿರಿಸಿಕೊಂಡು ಗುರಿಯಿಡುತ್ತಾರೆ. ಅನಂತರ, ಹಾರುವ ಹಕ್ಕಿಗೆ. ಹೀಗೆ ಕ್ರಮವಾಗಿ ಕೈಚಳಕ ಹೆಚ್ಚುತ್ತ ಸೂಕ್ಷ್ಮವಾದ ಗುರಿಯನ್ನೂ ಹಿಡಿಯುತ್ತಾರೆ, ಅಲ್ಲವೆ?

ಹೀಗೆ ಸಾಕಾರದಲ್ಲಿ ಮೊದಲು ಅಭ್ಯಾಸ ಮಾಡಿ, ಕಡೆಗೆ ನಿರಾಕಾರವನ್ನು ಸಾಧಿಸಿಕೊಳ್ಳಬಹುದು.

ದೇವರು ಸಾಕಾರನೂ ಅಲ್ಲ, ನಿರಾಕಾರನೂ ಅಲ್ಲ; ಎರಡನ್ನೂ ಮೀರಿದವನು."

೩೨

ಶ್ರೀ ರಾಮಕೃಷ್ಣರ ಬಳಿಗೆ ರಾಖಾಲಚಂದ್ರ ಘೋಷ್ (೧೮೬೩-೧೯೨೨) (ಮುಂದೆ ಸ್ವಾಮಿ ಬ್ರಹ್ಮಾನಂದರಾದವರು) ಬರುವಾಗ ದಾರಿಯಲ್ಲಿ ಹಣವೊಂದು ಬಿದ್ದಿತ್ತು. ರಾಖಾಲ ಬಗ್ಗಿ ಅದನ್ನೆತ್ತಿಕೊಂಡು, ಎದುರಿಗೆ ಬರುತ್ತಿದ್ದ ಭಿಕ್ಷುಕನೊಬ್ಬನ ಕೈಗಿತ್ತು ನಡೆದ.

ರಾಖಾಲಚಂದ್ರ ಘೋಷ್

ಶ್ರೀ ರಾಮಕೃಷ್ಣರ ಬಳಿ ಬಂದ ಮೇಲೆ ನಡೆದುದನ್ನು ತಿಳಿಸಿದ. ಹಾಗೆ ತಿಳಿಸುವುದು ಅವನ ವಾಡಿಕೆ.

ಶ್ರೀ ರಾಮಕೃಷ್ಣರು "ಒಳ್ಳೆಯದನ್ನೇ ಮಾಡಿದೆ. ಅದು ಸರಿ, ರಾಖಾಲ, ಆದರೆ ಹಸಿವಿಲ್ಲದಿದ್ದಾಗ, ಮೀನು ಬೇಡದಿದ್ದಾಗ ಮೀನಿನ ಅಂಗಡಿಗೆ ಯಾರು ಹೋಗುತ್ತಾರೆ? ನಿನಗೆ ಹಣ ಬೇಕಿರಲಿಲ್ಲ; ಅದು ನಿನ್ನದೂ ಅಲ್ಲ. ಬೀದಿಯಲ್ಲಿ ಬಿದ್ದಿದ್ದುದನ್ನು ನೀನು ಮುಟ್ಟಿ ಎತ್ತಿಕೊಂಡುದಾದರೂ ಯಾಕೆ?

ರಾಖಾಲ ಶ್ರೀ ರಾಮಕೃಷ್ಣರಿಗೆ 'ಮಾನಸಪುತ್ರ'ನಿದ್ದಂತೆ. ಮೊದಲು ಕಂಡದ್ದು ೧೮೮೧ರ ಜುಲೈ ತಿಂಗಳಲ್ಲಿ.

೩೩

ರಾಖಾಲ ನೆನಪಿಗೆ ತಂದುಕೊಳ್ಳುತ್ತಾನೆ—

ಶ್ರೀ ರಾಮಕೃಷ್ಣರು ರಾತ್ರಿ ನಿದ್ರೆ ಮಾಡುತ್ತಿದ್ದುದು ಸ್ವಲ್ಪ ಹೊತ್ತೇ. ಶಿಷ್ಯರನ್ನೂ ನಿದ್ರೆ ಮಾಡಲು ಬಿಡುತ್ತಿರಲಿಲ್ಲ. ಎಲ್ಲರೂ ಮಲಗಿದ ಮೇಲೆ, ಶಿಷ್ಯರನ್ನು ಎಬ್ಬಿಸುವರು. "ಏನಿದು? ನೀವು ನಿದ್ರೆ ಮಾಡಲು ಇಲ್ಲಿಗೆ ಬಂದಿದ್ದೀರಾ? ಏಳಿ, ಸ್ವಲ್ಪ ಹೊತ್ತು ಜಪವನ್ನೋ ಧ್ಯಾನವನ್ನೋ ಮಾಡಿ ಬಂದು, ಮತ್ತೆ ಬೇಕಾದರೆ ಮಲಗಿಕೊಳ್ಳಿ" ಎನ್ನುವರು. ಒಬ್ಬೊಬ್ಬನಿಗೂ ಒಂದೊಂದು ಮಂತ್ರವನ್ನು ಹೇಳಿ ಪಂಚವಟಿಗೋ ಕಾಳಿಗುಡಿಗೋ ಕಳುಹಿಸುವರು; ಜಪ ಅಥವಾ ಧ್ಯಾನಮಾಡುವ ಕ್ರಮವನ್ನೂ ತಿಳಿಸುವರು.

"ಮೂರು ತೆರನಾದ ಮನುಷ್ಯರು ರಾತ್ರಿ ನಿದ್ರೆ ಮಾಡದೆ ಎಚ್ಚರವಾಗಿರುತ್ತಾರೆ. ಯೋಗಿಗಳು, ಭೋಗಿಗಳು, ರೋಗಗ್ರಸ್ತರು. ನೀವೆಲ್ಲ ಯೋಗಿಗಳು. ರಾತ್ರಿಯೆಲ್ಲವನ್ನೂ ನಿದ್ರೆಯಲ್ಲೇ ಕಳೆಯಬಾರದು. ಹಗಲು ಎಷ್ಟು ಬೇಕಾದರೂ ಊಟಮಾಡಿ; ಅರಗಿಹೋಗುತ್ತದೆ. ಅದೇ ರಾತ್ರಿಯ ವೇಳೆ ತೀರ ಮಿತವಾಗಿ ಉಣ್ಣಬೇಕು. ಆಗ ತುಂಬು ಹೊಟ್ಟೆಯಾಗಿಬಿಟ್ಟರೆ ಮನಸ್ಸಿಗೆ ಏಕಾಗ್ರತೆ ಬರಲಾರದು, ಆಲಸಿಕೆ ಬರುತ್ತದೆ, ನಿದ್ರೆ ಬರುತ್ತದೆ!"

"ಯೋಗದಲ್ಲಿ ದಡ ಮುಟ್ಟಿದವನಿಗೆ ಜಪವೇಕೆ? ಧ್ಯಾನವೇಕೆ? ಅವನು ನಿದ್ರೆ ಮಾಡಬಹುದಲ್ಲ?'—ಎಂದರೆ, ಇದೇ ಪ್ರಶ್ನೆಯನ್ನೊಮ್ಮೆ ನಾನು ನನ್ನ ಗುರು ತೋತಾಪುರಿಗೆ ಹಾಕಿದೆ. ಅವರು ತಮ್ಮೆದುರಿಗಿದ್ದ ಹಿತ್ತಾಳೆ ಪಾತ್ರೆಯನ್ನು ತೋರಿಸಿದರು. ಅದು ಥಳಥಳ ಹೊಳೆಯುತ್ತಿತ್ತು. ಬೆಳಗುತ್ತಿತ್ತು. ಅವರು ಹೇಳಿದರು—ನೋಡು, ದಿನವೂ ಇದನ್ನು ತಿಕ್ಕಿ ತೊಳೆಯದಿದ್ದರೆ, ಪಾತ್ರೆ ಹೀಗಿರುವುದೆ? ಕಿಲುಬುಕಟ್ಟಿ ನಾರುತ್ತಿತ್ತು? ಜಪ, ಧ್ಯಾನಗಳೂ ಹೀಗೆಯೇ."

"ದಿಟವಾಗಿ ಧ್ಯಾನವೆಂದರೇನು? ದೇಹ ಇರುವುದೇ ತಿಳಿಯದಿರುವುದು, ಹೊರಗಣ ಪ್ರಪಂಚದ ಯಾವ ವಸ್ತುವಾಗಲಿ ವ್ಯವಹಾರವಾಗಲಿ ಅರಿವಿಗೆ ಬಾರದಿರುವುದು. ಕಾಗೆ ಹಾರಿ ಬಂದು ತಲೆಯ ಮೇಲೆ ಕೂತರೂ ಅದು ತಿಳಿಯದಿರುವುದು. ಹಾಗಾದಾಗಲೇ ಒಳಗಿನ ಸತ್ಯದ ದರ್ಶನವಾಗುತ್ತದೆ."

ಒಮ್ಮೆ ಶ್ರೀ ರಾಮಕೃಷ್ಣರು ಕಾಳಿಗುಡಿಯ ನಟಮಂದಿರದಲ್ಲಿ ಧ್ಯಾನಮಾಡುತ್ತಿರುವಾಗ ಕಾಗೆಯೊಂದು ಬಂದು ಅವರ ತಲೆಯ ಮೇಲೆ ಕುಳಿತಿತ್ತು. ಅದು ಅವರಿಗೆ ತಿಳಿಯಲಿಲ್ಲ.

೩೪

೧೮೮೧ರ ಜೂನ್ ೧೨ರಂದು ದಕ್ಷಿಣೇಶ್ವರಕ್ಕೆ ಮಥುರಬಾಬುವಿನ ಮಗ ತ್ರೈಲೋಕ್ಯ, ಅವನ ಹೆಂಡತಿ ಮತ್ತು ಮಗಳು ಸಣ್ಣ ಹುಡುಗಿ ಇವರೊಂದಿಗೆ ಬಂದಿದ್ದ. ಸಣ್ಣ ಹುಡುಗಿ ಅಲ್ಲೇ ಗುಡಿಯೆದುರು ಅಡ್ಡಾಡುತ್ತಿದ್ದಳು. ಆಗ ಹೃದಯರಾಮ ಕಾಳಿಸನ್ನಿಧಿಯ ಅರ್ಚಕ. ಅವನಿಗೆ ಏನು ಅನಿಸಿತೋ ಏನೋ,

ಹೃದಯರಾಮ

ಆ ಹುಡುಗಿಯನ್ನು ಕಾಳಿಸನ್ನಿಧಿಗೆ ಕರೆದೊಯ್ದು, ಕುಳ್ಳಿರಿಸಿ, ಷೋಡಶೀಪೂಜೆ ಮಾಡುವೆನೆಂದು ಹೊರಟ. ಹೂಮಾಲೆ ಹಾಕಿ, ಕಾಲುಗಳಿಗೆ ಕುಂಕುಮ-ಅರಿಶಿನ-ಗಂಧಗಳನ್ನು ಲೇಪಿಸಿದ. ಅಷ್ಟರಲ್ಲಿ ಹುಡುಗಿ ಎದ್ದು ಹೊರಗೆ ಓಡಿದಳು.

ಅವಳ ತಾಯಿ ಅವಳನ್ನು ನೋಡಿ ಹೌಹಾರಿದಳು. ಕೈಕಾಲುಗಳಲ್ಲಿ ಕುಂಕುಮಾದಿ ದ್ರವ್ಯಗಳನ್ನು ಕಂಡು ಇದು ಅಶುಭ ಸೂಚಕವೆಂದು ಬೆದರಿದಳು. ಅಷ್ಟು ಹೊತ್ತಿಗೆ ತ್ರೈಲೋಕ್ಯನೂ ಅಲ್ಲಿಗೆ ಬಂದು ಹೃದಯರಾಮನ ಮೇಲೆ ಸಿಟ್ಟಾಗಿ, ಅವನನ್ನು ಆಗಲೇ ಕೆಲಸದಿಂದ ತೆಗೆದುಬಿಡಿ ಎಂದು ಅಪ್ಪಣೆ ಮಾಡಿಬಿಟ್ಟನು.

ಹೃದಯರಾಮನು ಕೆಲಸ ಕಳೆದುಕೊಂಡದ್ದು ಹೀಗೆ. ಆದರೂ ದಕ್ಷಿಣೇಶ್ವರದಲ್ಲೇ ಇರುತ್ತಿದ್ದ, ಸುಮ್ಮನೂ ಇರಲಿಲ್ಲ. ಹೇಗಾದರೂ ಮಾಡಿ ಠಾಕುರರನ್ನೂ ದಕ್ಷಿಣೇಶ್ವರದಿಂದ ಹೊರಡಿಸಿಕೊಂಡು ಬೇರೆ ಬೇರೆ ಕಾಳಿಗುಡಿಗಳಿಗೆ ಕೊಂಡೊಯ್ದು, ಅಲ್ಲೆಲ್ಲ ಇವರ ಪ್ರಭಾವದ ಪರಿಚಯ ಮಾಡಿಸಿ ತಾನು ಮೆರೆಯುವ ಹವಣಿಕೆ ಅವನದ್ದು. ಇದನ್ನು ತಿಳಿದೊಡನೆ ಠಾಕುರರು—

"ಏನಿದು ಹೃದು? ನನ್ನ ಅಧ್ಯಾತ್ಮದ ಮಟ್ಟ ಇಷ್ಟೇ ಎಂದು ತಿಳಿದೆಯಾ? ಅದು ಬೇರೆಯವರೆದುರು ಪ್ರದರ್ಶನಕ್ಕಾಗಿಯೆ? ಹಾಗೆ ಪ್ರದರ್ಶನ ಮಾಡಿ ಪ್ರಚಾರಕ್ಕೆ ತರಲು ನಾನೇನು ವಿಚಿತ್ರ ಮೃಗವೆ? ನನ್ನ ಸಾಧನೆಗೆ ಅನುಕೂಲವಾದೀತೆಂದು ನಾನೇ ಈ ತಾಣವನ್ನು ಆರಿಸಿಕೊಂಡು ಬಂದಿದ್ದೇನೆ. ಇಲ್ಲಿಂದ ನಾನು ಏನಾಗಲಿ ಕಾಲು ತೆಗೆಯಲಾರೆ! ನಿನ್ನ ಪಾಡು ನೀನು ನೋಡಿಕೊ" ಎಂದುಬಿಟ್ಟರು. ಹೃದಯನೂ "ನಿನ್ನ ಪಾಡು ನೀನು ನೋಡಿಕೋ!" ಎಂದು ಹೇಳಿ ಹೊರಟುಹೋದ.

೩೫

ಶ್ರೀ ರಾಮಕೃಷ್ಣರು ತಮ್ಮ ಉಪದೇಶಗಳಿಗೆ ಒತ್ತುಕೊಡಲು ಕತೆಗಳನ್ನು ಹೇಳುತ್ತಿದ್ದರು. ಹೀಗೆ ಅವರು ಒಂದಾದ ಮೇಲೊಂದು ಕತೆಯನ್ನು ಹೇಳುತ್ತಿದ್ದುದನ್ನು ಕೇಳಿ, ಹಲವರಿಗೆ ಅಚ್ಚರಿ. ಹರಿನಾಥ ಚಟ್ಟೋಪಾಧ್ಯಾಯರು (ಮುಂದೆ ಸ್ವಾಮಿ ತುರೀಯಾನಂದರು), "ಗುರುಗಳೇ, ಈ ಕತೆಗಳನ್ನೆಲ್ಲ ನೀವೇ ಹೆಣೆಯುತ್ತೀರಾ, ಹೇಗೆ?" ಎಂದು ಕೇಳಿದರು. ಅದಕ್ಕೆ ಅವರು "ಇಲ್ಲಪ್ಪಾ, ತಾಯಿ ಇಲ್ಲಿಯೇ ಇದ್ದಾಳಲ್ಲ? ನನ್ನ ಮೂಲಕ ಅವಳು ಮಾತನಾಡುತ್ತಾಳೆ, ಅಷ್ಟೆ. ಅವಳದ್ದೇ ಕತೆಗಳೂ ಕೂಡ!" ಎಂದರು.



ಹರಿನಾಥ ಚಟ್ಟೋಪಾಧ್ಯಾಯ

ಒಂದು ಕತೆ. ಆಗುವುದೆಲ್ಲ ಒಳ್ಳೆಯದಕ್ಕೇ ಎನ್ನುವುದನ್ನು ತಿಳಿಯಹೇಳಲು. ಒಬ್ಬ ರಾಜ, ಅವನ ಮಂತ್ರಿ ಇಬ್ಬರೂ ಕಾಡಿನಲ್ಲಿ ಅಡ್ಡಾಡುತ್ತಿದ್ದರು. ಯಾವುದೋ

ಕಲ್ಲು ತಾಕಿ, ರಾಜನ ಕೈಬೆರಳಿಗೆ ಗಾಸಿಯಾಯಿತು. 'ಹೀಗೇಕಾಯಿತು' ಎಂದು ರಾಜ ಪರಿತಪಿಸಿದ. "ಎಲ್ಲ ಒಳ್ಳೆಯದಕ್ಕೇ" ಎಂದ ಮಂತ್ರಿ. ರಾಜನಿಗೆ ಸಿಟ್ಟು ಬಂದು, "ನನಗೆ ನೋವಾದರೆ ನಿನಗೆ ಒಳ್ಳೆಯದಕ್ಕೇ ಅಲ್ಲವೆ?" ಎಂದು ಹೇಳುತ್ತ ಮಂತ್ರಿಯನ್ನು ಪಕ್ಕದಲ್ಲೇ ಇದ್ದ ಹಾಳು ಬಾವಿಗೆ ನೂಕಿದ. ಸದ್ಯ ಬಾವಿಯಲ್ಲಿ ನೀರಿರಲಿಲ್ಲ.

ಅದೇ ವೇಳೆಗೆ, ಕೆಲವು ಠಕ್ಕರು ಬಂದು ರಾಜನನ್ನು ಹಿಡಿದುಕೊಂಡರು. ತಮ್ಮ ವೃತ್ತಿ ದೇವತೆ ಕಾಳಿಗೆ ಮನುಷ್ಯಬಲಿಯನ್ನು ಅರ್ಪಿಸಲೆಂದು ಸರಿಯಾದವನನ್ನು ಹುಡುಕುತ್ತ ಇದ್ದರು. ರಾಜನು ಸರಿಯಾದವನೋ ಅಲ್ಲವೋ ಎಂದು ಪರೀಕ್ಷೆ ಮಾಡುವಾಗ ಅವನ ಕೈಬೆರಳೊಂದು ಊನವಾಗಿದ್ದುದು ತಿಳಿಯಿತು. ಎಂದರೆ ಸರಿಯಾದ ಬಲಿಯಾಗಲಾರ. ಠಕ್ಕರು ಅವನನ್ನು ಬಿಟ್ಟು ಮುಂದೆ ನಡೆದರು.

ರಾಜನೂ ನಿಟ್ಟುಸಿರು ಬಿಟ್ಟು, ಹಾಳು ಬಾವಿಯಿಂದ ಮಂತ್ರಿಯನ್ನು ಮೇಲೆತ್ತಿದ. "ನನಗೇನೋ ಬೆರಳಿಗೆ ಪೆಟ್ಟಾಗಿ ಒಳ್ಳೆಯದೇ ಆಯಿತು; ಪ್ರಾಣ ಉಳಿಯಿತು. ನೀನು ಬಾವಿಗೆ ಬಿದ್ದು ನಿನಗೇನು ಒಳ್ಳೆಯದಾಯಿತು, ಹೇಳು!" ಎಂದು ಕೇಳಲು ಮಂತ್ರಿ "ದೊರೆಯೆ ಇಲ್ಲಿದ್ದುಕೊಂಡು ನಾನು ಅವರ ಕಣ್ಣಿಗೆ ಬೀಳಲಿಲ್ಲವಲ್ಲ! ಬಿದ್ದಿದ್ದರೆ ನನ್ನನ್ನೇ ಬಲಿಯಾಗಿ ಕರೆದೊಯ್ಯುತ್ತಿದ್ದರು! ಒಳ್ಳೆಯದಾಯಿತಲ್ಲವೆ?" ಎಂದ.

"ಠಕ್ಕರನ್ನು ಕಂಡೊಡನೆ ಸದ್ಯ ನನ್ನನ್ನು ನೀನು ಮೇಲಕ್ಕೆತ್ತಲಿಲ್ಲವಲ್ಲ! ಅದೂ ಒಳ್ಳೆಯದೇ ಆಯಿತು, ನನ್ನನ್ನು ಅವರು ನೋಡಲಿಲ್ಲ, ನನ್ನ ಪ್ರಾಣ ಉಳಿಯಿತು! ನೀನು ಅವಸರ ಪಟ್ಟಿದ್ದರೆ, ನಾನೀಗ ಇಲ್ಲಿರುತ್ತಿರಲಿಲ್ಲ! ಆಗುವುದೆಲ್ಲ ಒಳ್ಳೆಯದಕ್ಕೇ" ಎಂದ.

೩೬

ಶ್ರೀ ರಾಮಕೃಷ್ಣರೊಮ್ಮೆ ಬೇಣೀಪಾಲನ ಉದ್ಯಾನಭವನದಲ್ಲಿ ರಾತ್ರಿಯನ್ನು ಕಳೆಯುವುದೆಂದು ನಿರ್ಧರಿಸಿ, ಸಂಜೆಯೇ ರಾಖಾಲನೊಂದಿಗೆ ಅಲ್ಲಿಗೆ ಹೋದರು. ರಾತ್ರಿಯ ಕತ್ತಲಲ್ಲೇ ಉದ್ಯಾನದಲ್ಲಿ ನಡೆದಾಡುತ್ತಿದ್ದರು. ಆಗ ಅವರನ್ನೊಂದು ದೆವ್ವ ಗಟ್ಟಿಯಾಗಿ ಹಿಡಿದುಕೊಂಡು, "ಇಲ್ಲಿಗೆ ನೀನೇಕೆ ಬಂದೆ? ನೀನಿಲ್ಲಿದ್ದರೆ ನಮಗೆಲ್ಲ ಮುಜುಗರ. ಮೊದಲು ನೀನಿಲ್ಲಿಂದ ತೊಲಗು!" ಎಂದಂತಾಯಿತು.

ಶ್ರೀ ರಾಮಕೃಷ್ಣರು ರಾತ್ರಿಯ ಊಟವಾದ ಮೇಲೆ ರಾಖಾಲನಿಗೆ "ಒಂದು ಗಾಡಿಯನ್ನು ತರಿಸು, ದಕ್ಷಿಣೇಶ್ವರಕ್ಕೆ ಹಿಂದಕ್ಕೆ ಹೋಗೋಣ" ಎನ್ನಲು ಅವನಿಗೆ ಆಶ್ಚರ್ಯವಾಯಿತು. ರಾತ್ರಿಯೆಲ್ಲ ಇಲ್ಲೇ ಇದ್ದು ಬೆಳಿಗ್ಗೆ ಹಿಂದಿರುಗುವ ಯೋಚನೆ ಇದ್ದದ್ದು. ಸರಿ, ರಾಖಾಲನು ಗಾಡಿಯನ್ನು ತರಿಸಿದ, ಇಬ್ಬರೂ ಆಗಲೇ ಅರ್ಧ ರಾತ್ರಿಯ ವೇಳೆಗೆ ದಕ್ಷಿಣೇಶ್ವರಕ್ಕೆ ಹಿಂದಿರುಗಿದರು.

ಅವರು ಬಂದುದನ್ನು ನೋಡಿ ಎಲ್ಲರಿಗೂ ಅಚ್ಚರಿ. ಶ್ರೀ ಶಾರದಾದೇವಿಗಂತೂ ಕಳವಳ. ಅವರ ಊಟಕ್ಕೇನೂ ಉಳಿದಿಲ್ಲ! ಪಾತ್ರೆಯೆಲ್ಲ ಖಾಲಿಯಾಗಿದೆ. ಅವರು ರಾತ್ರಿ ಉದ್ಯಾನವನದಲ್ಲೇ ಊಟ ಮಾಡುವುದೆಂದು ನಿರ್ಧರಿಸಿದ್ದರಾಗಿ ಅಡುಗೆಯಲ್ಲಿ ಏನನ್ನೂ ಉಳಿಸಿರಲಿಲ್ಲ. ಈಗೇನು ಮಾಡುವುದು? ಸರಿ ರಾತ್ರಿಯ ಸಮಯ ಬೇರೆ? ಶ್ರೀ ರಾಮಕೃಷ್ಣರು ಆಕೆಯನ್ನು ನೋಡಿದೊಡನೆ "ನನ್ನ ಊಟದ ಯೋಚನೆ ಬೇಡ. ಅಲ್ಲಿಯೆ ಊಟ ಮುಗಿಸಿದ್ದೇನೆ" ಎಂದು ಸಮಾಧಾನ ಹೇಳಿದರು.

ಹಿಂದಿರುಗಿ ಬಂದುದಕ್ಕೆ ರಾಖಾಲನಿಗೆ ಅವರು ಏನೂ ಕಾರಣ ಹೇಳಿರಲಿಲ್ಲ. ಈಗ ಹೇಳಲು, ರಾಖಾಲ "ಸದ್ಯ, ಇಲ್ಲಿಗೆ ಬಂದ ಮೇಲೆ ಹೇಳಿದರಲ್ಲ! ಅಲ್ಲಿಯೇ ನನಗೆ ತಿಳಿದಿದ್ದರೆ ಹೆದರಿ ಸೊರಗಿ ಬಿಡುತ್ತಿದ್ದೆ! ಮಾತನಾಡಲು ಬಾಯಿ ಬರುತ್ತಿರಲಿಲ್ಲ, ನಡೆಯಲು ಕಾಲು ಬರುತ್ತಿರಲಿಲ್ಲ! ಏನು ಮಾಡುತ್ತಿದ್ದೆನೋ ಗೊತ್ತಿಲ್ಲ! ಬೇಗ ಒಳಗೆ ಹೋಗೋಣ, ಬನ್ನಿ" ಎಂದು ಹೇಳಿದ.

ಶ್ರೀ ರಾಮಕೃಷ್ಣರೇನೋ ದೆವ್ವಗಳನ್ನು ನಂಬುತ್ತಿರಲಿಲ್ಲ; ರಾಖಾಲನಿಗೆ ನಂಬಿಕೆ. ಅವನ ಸಲುವಾಗಿಯೇ ಅವರು ಹಿಂದಕ್ಕೆ ಬಂದದ್ದು.

೩೭

ಒಮ್ಮೆ ಶ್ರೀ ರಾಮಕೃಷ್ಣರು ಇದ್ದಕ್ಕಿದ್ದಂತೆ ವೈಕುಂಠನಾಥ ಸನ್ಯಾಲನನ್ನು ಕೇಳಿದರು— "ಅಯ್ಯಾ, ನೀನು ಪಂಚದಶಿ ಮುಂತಾದ ವೇದಾಂತ ಗ್ರಂಥಗಳನ್ನು ಓದಿದ್ದೀಯಾ?"

"ಇಲ್ಲ, ಗುರುಗಳೇ,"

"ಸದ್ಯ, ಬದುಕಿದೆ. ಕೆಲವರು ಏನು ಮಾಡುತ್ತಾರೆ ಗೊತ್ತೆ? ಇಂಥ ಪುಸ್ತಕಗಳನ್ನು ಓದಿ, ತಲೆತುಂಬ ಕಲ್ಪನೆಗಳನ್ನು ತುಂಬಿಕೊಳ್ಳುತ್ತಾರೆ. ಜ್ಞಾನವೇ ಮುಖ್ಯವೆಂದೂ, ವಿಚಾರದಿಂದಲೇ ಅದು ಬರುವುದೆಂದೂ, ನಿಶ್ಚಯಿಸಿಕೊಂಡು ತರ್ಕದ ದಾರಿಯನ್ನು ಹಿಡಿದು ಬಿಡುತ್ತಾರೆ. ಅಂಥವರು ಹಲವರು ಇಲ್ಲಿಗೂ ಬರುತ್ತಾರೆ. ವಾದ ವಿವಾದಗಳಿಗೆಂದೇ ಅವರು ಬರುವುದು. ಭಕ್ತಿಯೆಂದರೆ ಅವರಿಗೆ ಬೇಸರ. ಅದಕ್ಕಿಂತ ಎಷ್ಟೋ ಮೇಲೆ ತಾವು ಏರಿರುವರೆಂಬ ಹೆಮ್ಮೆ ಬೇರೆ!

ಜ್ಞಾನವಾಗಲಿ ಭಕ್ತಿಯಾಗಲಿ, ಎಲ್ಲ ನರಿಗಳೂ ಊಳಿಡುವುದು ಒಂದೇ ರೀತಿಯಲ್ಲಿ ತಾನೆ? ನರಿಯ ಬಣ್ಣ ಏನಿದ್ದರೇನು?

ವೇದಾಂತ ಗ್ರಂಥಗಳಿರುವುದು ಅಧ್ಯಯನಕ್ಕೆ ಮಾತ್ರವಲ್ಲ. ಅವುಗಳ ಮುಖ್ಯ ಪ್ರಯೋಜನ, ಅನುಷ್ಠಾನ. ಇದನ್ನು ಮಾಡಿದಾಗ ಶುದ್ಧವಾದ ಜ್ಞಾನವಾಗಲೀ, ಶುದ್ಧವಾದ ಭಕ್ತಿಯಾಗಲೀ ಒಂದೇ. ಅವುಗಳ ರಸ ಒಂದೇ, ಅವುಗಳ ಪ್ರಯೋಜನ ಒಂದೇ. ಒಂದು ಹೆಚ್ಚಿನದು, ಇನ್ನೊಂದು ಕಡಿಮೆಯದು ಎಂದೇನು ಇಲ್ಲ.

ಜ್ಞಾನವು ಮೆದುಳಿನ ಕೆಲಸ, ಭಕ್ತಿಯು ಹೃದಯದ ಕೆಲಸ ಎಂದು ಕೆಲವರು ಹೇಳುವುದುಂಟು. ಇದೇನು ಸರಿಯಲ್ಲ. ಮೆದುಳಿನ ಜ್ಞಾನವೇ ಬೇರೆ, ಹೃದಯದ ಜ್ಞಾನವೇ ಬೇರೆ. ಮೆದುಳಿನ ಜ್ಞಾನ ಹಾಗೆ ನೋಡಿದರೆ ಜ್ಞಾನವೇ ಅಲ್ಲ. ವ್ಯವಹಾರಕ್ಕೆ ಬೇಕಾಗುವ ತಿಳಿವಳಿಕೆ. ಪರಮಾರ್ಥಕ್ಕೆ ಅನುಕೂಲವಾಗುವ ಜ್ಞಾನ ಅನುಭವದಲ್ಲಿ ಮುಗಿಯಬೇಕು. ಅದೇ ಭಕ್ತಿ."

೩೮

ವೈಕುಂಠನಾಥ ಸನ್ಯಾಲನೊಮ್ಮೆ ಕೇಳಿಯೇ ಬಿಟ್ಟ—'ಸಮಾಧಿಯೆಂದರೇನು?' ಪ್ರಶ್ನೆಯೇನೋ ಸುಲಭವೇ; ಆದರೆ ಉತ್ತರ ಅಷ್ಟೂ ಕಷ್ಟ! ರಾಮಕೃಷ್ಣರೇನೋ ಬದುಕಿನಲ್ಲಿ ಎಚ್ಚರಕ್ಕಿಂತ ಹೆಚ್ಚಾಗಿ ಸಮಾಧಿಯಲ್ಲೇ ಇದ್ದವರು. ಅವರಿಗೆ ಉತ್ತರ ಹೇಳುವುದೇನು ಕಷ್ಟವೆನಿಸಲಿಲ್ಲ.

"ನೋಡು ಮಗು, ಜೀವಕ್ಕಿರುವುದು ಹದಿನಾರು ಕಳೆಗಳು. ಹೀಗೆಂದು ಶಾಸ್ತ್ರ ಹೇಳುತ್ತದೆ. ಸಾಮಾನ್ಯ ಮನುಷ್ಯರು ಒಂದು ಕಳೆಯನ್ನು ಮಾತ್ರ ತಮಗೇ ಅರಿಯದಂತೆ ದೇವರಲ್ಲಿರಿಸಿಕೊಂಡು ಉಳಿದುವನ್ನು ದೇಹ, ಇಂದ್ರಿಯಗಳು, ಮನಸ್ಸು, ಸಂಸಾರ ಇವುಗಳ ಕಡೆ ಹರಿಯಬಿಡುತ್ತಾರೆ. ನನ್ನ ವಿಚಾರ ಹಾಗಲ್ಲ! ಹದಿನೈದು ಕಳೆಗಳನ್ನು ತಾಯಿಯಲ್ಲಿರಿಸಿ, ಒಂದನ್ನು ತಾಯಿಯಿಂದ ಎರವಲು ಪಡೆದು ನಿಮ್ಮೊಂದಿಗೆ ಮಾತನಾಡಲು ಬಳಸಿಕೊಳ್ಳುತ್ತೇನೆ. ಮಾತನಾಡುವಾಗ ತಾಯಿಯ ಅಥವಾ ಅಧ್ಯಾತ್ಮದ ವಿಚಾರ ಬಂದಿತೆಂದರೆ ಸಾಕು, ಈ ಒಂದು ಕಳೆಯೂ ತಾಯಿಯತ್ತಲೇ ಹೋಗಿಬಿಡುತ್ತದೆ!

ಆಗ ನನಗೂ ಈ ದೇಹಕ್ಕೂ ನಂಟು ಇರದು; ದೇಹದ ಭಾನ ಇರದು; ಕಟ್ಟಿಗೆಯಂತೆ ಆಗಿಬಿಡುತ್ತದೆ. ಹೊರಗಣ ಅರಿವು ಜಾರಿಹೋಗುತ್ತದೆ. ಹದಿನಾರೂ ಕಳೆಗಳೂ ಒಟ್ಟಿಗೆ ಸೇರಿದ ಕಾರಣ, ಮುಖದಲ್ಲಿ ಮಂದಹಾಸ ಮೂಡುತ್ತದೆ. ಸಮಾಧಿಯ ಲಕ್ಷ್ಯ ಸಚ್ಚಿದಾನಂದ ವಿಗ್ರಹವೇ ಆದುದರಿಂದ, ಸುಖದ ಅನುಭವ. ಧ್ಯಾನದ ಪರಾಕಾಷ್ಠೆ ಅದು. ಸಮಾಧಿಯಿಂದ ಆಗುವುದು ಶ್ರಮದ ಪರಿಹಾರ, ಶ್ರಮವಲ್ಲ. ಕಳೆಗಳೆಲ್ಲ ಒಟ್ಟಿಗೆ ಕೂಡಿಕೊಂಡರೆ ಅದು ಏಕಾಗ್ರತೆ. ಏಕಾಗ್ರತೆ ಇಲ್ಲದಿದ್ದರೆ ಸಮಾಧಿಯೂ ಸಾಧ್ಯವಿಲ್ಲ.

ಮೊದಲಲ್ಲಿ, ನಾನು ಧ್ಯಾನಮಾಡುವ ಮೂರ್ತಿ ಬೇರೆ, ಧ್ಯಾನವನ್ನು ಮಾಡುತ್ತಿರುವ ನಾನು ಬೇರೆ, ಅರ್ಚಾಮೂರ್ತಿ ಮತ್ತು ಅರ್ಚಕ, ಎಂಬ ಬುದ್ಧಿ ಇದ್ದಿತು. ಬರುಬರುತ್ತ ಇದು ಮರೆಯಾಗಿ, ಎರಡೂ ಒಂದೇ ತತ್ತ್ವ ಎಂಬ ಅರಿವು ತೋರಿಕೊಂಡಿತು. ಇದು ಏಕಾಗ್ರತೆ. ಬ್ರಹ್ಮವೆಂದರೆ ಸಚ್ಚಿದಾನಂದ ವಿಗ್ರಹ. ಜೀವದ ಎಲ್ಲ ಕಳೆಗಳೂ ಅದರಲ್ಲಿ ಏಕಾಗ್ರವಾಗಿ ನೆಲೆಗೊಂಡರೆ ಅದು ಸಮಾಧಿ. ಅಭ್ಯಾಸವಿಲ್ಲದೆ ಇದರಲ್ಲಿ ಸಿದ್ಧಿ ಕಾಣಲಾರದು. ನಾನು ಹನ್ನೆರಡು ವರ್ಷಗಳು ಅಭ್ಯಾಸ ಮಾಡಲಿಲ್ಲವೆ? ಪಂಚವಟಿಯಲ್ಲಿ ತೋತಾಪುರಿ ನನಗೆ ಕಲಿಸಿದ್ದು ನಿರ್ವಿಕಲ್ಪ ಸಮಾಧಿಯನ್ನೇ ತಾನೆ?"

೩೯

ವೈಕುಂಠನಾಥ ಸನ್ಯಾಲ್ ಇನ್ನೊಮ್ಮೆ ಯೋಗದ ವಿಚಾರ ಕೇಳಿದ: ಶ್ರೀ ರಾಮಕೃಷ್ಣರು—

"ಯೋಗವೆಂದರೆ ಸೇರಿಸುವುದು. ಮನಸ್ಸನ್ನು ದೇವರಲ್ಲಿ ಸೇರಿಸಿಬಿಟ್ಟರೆ ಅದು ಯೋಗವಾಯಿತು. ನಾವು ಏನನ್ನು ಮಾಡಿದರೂ 'ನಾನು' ಎಂಬುದು ಮುಂದಾಗಿ ಬರುತ್ತದೆ. ಜೀವದ ಚಿಹ್ನೆ ಅದು. ದೇಹದಲ್ಲಿದ್ದುಕೊಂಡು ತನಿಯಾಗಿರುವುದು ಜೀವ. ಅದು ವ್ಯಾಪಕವಾದ ಬ್ರಹ್ಮನಲ್ಲಿ ಸೇರಿಕೊಂಡುಬಿಟ್ಟರೆ ಅದು ಯೋಗ.

ಹೀಗೆ ಹೇಳೋಣ. ಸಮುದ್ರದ ಬದಿಯಲ್ಲೇ ಮಣ್ಣಿನ ದೊಡ್ಡ ಕಡಾಯಿಯನ್ನಿರಿಸಿ ಅದರಲ್ಲಿ ಮೀನೊಂದನ್ನು ಇಡು. ಯಾವುದೋ ಕಾರಣಕ್ಕೆ ಕಡಾಯಿ ಒಡೆದು ಹೋಗಿ, ಒಳಗಿದ್ದ ನೀರೆಲ್ಲ ಸೋರಿಹೋಯಿತು. ಮೀನು ಮೆತ್ತಗೆ ಜಾರಿ ಸಮುದ್ರಕ್ಕೆ ಬಂದು ಸೇರಿಬಿಟ್ಟಿತು. ಕಡಾಯಿಯ ಪಾತ್ರ ಸಣ್ಣದು. ಈಜಾಡುವ ಮೀನಿಗೆ ನಿರ್ಬಂಧ, ಸಂಕೋಚ, ಸಂಕಟ. ಈಗ ಸಮುದ್ರವೇ ಮೀನಿಗೆ ಮನೆ; ಸ್ವಚ್ಛಂದವಾಗಿ, ಸ್ವತಂತ್ರವಾಗಿ ವಿಹರಿಸಬಹುದು. ಇದು ಯೋಗ.

ಕಡಾಯಿಯಲ್ಲಿಟ್ಟ ಮೀನು ದೇಹದಲ್ಲಿರುವ ಜೀವ; ಸಮುದ್ರದ ನೆರೆಯಲ್ಲೇ ಇದ್ದರೂ ಅದು ಸಮುದ್ರವನ್ನು ಸೇರಲಾರದು. ಕಡಾಯಿ ಅಡ್ಡವಾಗಿದೆ; ದೇಹಾಭಿಮಾನವೇ ಜೀವಭಾವ ಎನಿಸಿಕೊಳ್ಳುವುದು. ಇದು ಶಿಥಿಲವಾಗುವವರೆಗೆ ಬ್ರಹ್ಮಾನುಭವ ಆಗಲಾರದು. ಯೋಗದ ಪ್ರಯೋಜನ ಇದು. ಜೀವವನ್ನು ದೇಹದಿಂದ ಬೇರೆಯಾಗಿ ತೋರಿಸಿ, ಕ್ರಮವಾಗಿ ಅದನ್ನು ದೇಹದ ಕಟ್ಟುಗಳಿಂದ ಕಳಚಿ, ಎಲ್ಲೆಲ್ಲೂ ಇರುವ ಬ್ರಹ್ಮನೊಡನೆ ಸೇರಿಸುವುದು. ತಿಳಿಯಾದ ನೀರು ತಿಳಿಯಾದ ನೀರಿನೊಂದಿಗೆ ಬೆರೆಯುವುದು, ಆಕಾಶವು ಆಕಾಶದೊಂದಿಗೆ ಸೇರುವುದು ಎಂದು ಮುಂತಾಗಿ ಸಾಮತಿಗಳನ್ನು ಶಾಸ್ತ್ರ ಸೂಚಿಸುತ್ತದೆ.

ಬ್ರಹ್ಮ (ಅಥವಾ ಆತ್ಮ) ಪೂರ್ಣವಾದುದು, ಜೀವ ಅದರ ಒಂದು ಅಂಶ ಅಷ್ಟೆ. ಅಂಶವಾದುದು ಪೂರ್ಣದಲ್ಲಿ ಬೆರೆತುಕೊಂಡಾಗ, ಅಂಶ ಮರೆಯಾಗಿಬಿಡುತ್ತದೆ; ಪೂರ್ಣವಾದರೋ ಯಾವ ವಿಕಾರವೂ ಇಲ್ಲದೆ, ಇದ್ದಂತೆಯೇ ಇರುತ್ತದೆ. ಅಂಶ ಬೇರೆಯಾಗಿಯೆ ಉಳಿದುಕೊಂಡಾಗ ಅದು ಅಲ್ಪ; ಅಲ್ಪವಾದುದರಿಂದ ದುಃಖ. ಪೂರ್ಣದಲ್ಲಿ ಸೇರಿದಾಗ ಅದೂ ಪೂರ್ಣವೇ. ಉಪ್ಪಿನಿಂದ ಮಾಡಿದ ಬೊಂಬೆಯನ್ನು ಸಮುದ್ರದಲ್ಲಿ ಮುಳುಗಿಸಿದ ಹಾಗೆ."

೪೦

ವೈಕುಂಠನಾಥ ಸನ್ಯಾಲ್‌ಗೆ ಶ್ರೀ ರಾಮಕೃಷ್ಣರೊಂದು ದಿನ ಹೇಳಿದರು—

"ಮಗು, ದೇವರಿಗೆ ರೂಪವಿದೆಯೋ (ಸಗುಣನೋ), ರೂಪವಿಲ್ಲವೋ (ನಿರ್ಗುಣನೋ) ಎಂದು ನನ್ನನ್ನು ಬಹುಮಂದಿ ಕೇಳುತ್ತಾರೆ. ನನ್ನ ಸಮಾಧಾನ ಇಷ್ಟೆ—ಸಗುಣನೂ ಹೌದು, ನಿರ್ಗುಣನೂ ಹೌದು; ಎರಡನ್ನು ಮೀರಿದವನೂ ಹೌದು. ಇದು ಹೇಗೆ ಎಂಬೆಯಾ?

ನೋಡು, ಗಂಟೆಯ ಶಬ್ದವಿದೆ—'ಘಂಗ್' ಎಂದು. ಇದರಲ್ಲಿ ಮೊದಲನೆಯ ಅಕ್ಷರದಂಥ ಉಚ್ಚಾರ ಇದೆಯಲ್ಲಾ (ಘ) ಎಂಬುದು ಇದು ಸಗುಣ; ಕಿವಿಗೆ ಕೇಳುತ್ತದೆ, ಅಕ್ಷರದಂತೆ ಬರೆಯಬಹುದು, ಬೇರೆಯವರಿಗೆ ಹೇಳಬಹುದು. ಎರಡನೆಯ ಧ್ವನಿ ನಾಸಿಕ (ಂಗ್), ಮೂಗಿನಿಂದ ಹೊರಡುವುದು. ಇದನ್ನು ಅಕ್ಷರದ ನೆರವಿಲ್ಲದೆ ಕಿವಿ ಕೇಳಲಾರದು, ಬರೆದರೆ ಓದಲಾಗದು, ಅಷ್ಟನ್ನು ಮಾತ್ರ ಬೇರೆಯವರಿಗೆ ಹೇಳುವುದಾಗದು. ಇದು ನಿರ್ಗುಣ. ಇದಕ್ಕೊಂದು ಸ್ಪಷ್ಟವಾದ, ವಿಶಿಷ್ಟವಾದ ರೂಪವಿರದು.

ಇನ್ನು ಮೂರನೆಯದೋ ಎಂದರೆ, ಧ್ವನಿಯೆಲ್ಲ ಅಡಗಿದ ಮೇಲೆ ಮನಸ್ಸಿನಲ್ಲಿ ನಿಲ್ಲುವ ಅನುಭವ. ಸಗುಣ, ನಿರ್ಗುಣ ಎರಡನ್ನೂ ಮೀರಿದ ನೆಲೆ ಅದು.

ಆದರೆ ಇದನ್ನು ತಿಳಿದುಕೋ. ದೇವರು ಸರ್ವಶಕ್ತನಾದುದರಿಂದ ಯಾವ ರೂಪವನ್ನಾದರೂ ಧರಿಸಿಯಾನು; ರೂಪವಿಲ್ಲದೆಯೂ ಇದ್ದಾನು. ಸಗುಣ ಎಂದ ಮಾತ್ರಕ್ಕೆ ದೇವರೇ ಅಲ್ಲ ಎಂದೇನೂ ಅಲ್ಲ. ನಿರ್ಗುಣವೇ ಭಗವತ್ ಸ್ವರೂಪ ಎಂಬ ಹಟವಿರಬಾರದು.

ಇಷ್ಟಾಗಿ, ಸಗುಣ ಎಂದರೇನು? ದೇವರ ತತ್ತ್ವ (ಪುರುಷ) ಮತ್ತು ದೇವರ ಶಕ್ತಿ (ಪ್ರಕೃತಿ) ಎರಡೂ ಕೂಡಿಕೊಂಡಾಗ ರೂಪ ಸಿದ್ಧವಾಗುತ್ತದೆ. ಇದು ಮಾತಿಗೂ ಮನಸ್ಸಿಗೂ ಮೀರಿದ ವಿಚಾರ. ಆದುದರಿಂದ ನಾನು ಹೇಗೆ ಹೇಳಲಿ? ನೀನಾದರೂ ಹೇಗೆ ತಿಳಿದುಕೊಳ್ಳುವಿ? ಇಷ್ಟನ್ನು ಹೇಳಬಹುದು. ಪುರುಷನೆಂದರೆ ಬೆಂಕಿ, ಶಕ್ತಿಯೆಂದರೆ ಉರಿಸುವ ಸಾಮರ್ಥ್ಯ (ಗುಣ). ಒಂದನ್ನು ಬಿಟ್ಟು ಇನ್ನೊಂದು ಇರಲಾರದು. ಉರಿಯುತ್ತಿರುವ ಬೆಂಕಿ ಸಗುಣ. ಅಥವಾ ಹಾವಿನ ದೃಷ್ಟಾಂತ. ಮಲಗಿರುವ ಹಾವು, ಬುಸ್ಸೆಂದು ಹೆಡೆಯೆತ್ತಿರುವ ಹರಿದಾಡುತ್ತಿರುವ ಹಾವು. ಮೊದಲನೆಯದು ನಿರ್ಗುಣ, ಎರಡನೆಯದು ಸಗುಣ. ತಾತ್ತ್ವಿಕವಾಗಿ ಎರಡೂ ಬೇರೆ ಬೇರೆ ಎನ್ನಲಾದೀತೆ? ಅದು ತೋರಿಕೊಳ್ಳುವುದು ಎರಡು ವಿಧವಾಗಿ ಅಷ್ಟೆ."

೪೧

ಶ್ರೀ ರಾಮಕೃಷ್ಣರು ವೈಕುಂಠನಾಥ ಸನ್ಯಾಲನೊಂದಿಗೆ ಒಮ್ಮೆ ಮಾತನಾಡುತ್ತ ಕುಳಿತಿದ್ದಾಗ ಹೇಳಿದರು—

"ನೋಡು, ವೈಕುಂಠ, ದೇವರನ್ನು ಕಾಣಲು ದಾರಿ ಯಾವುದು ಎಂದು ಕೇಳಿದೆಯಲ್ಲ?

ಮೊದಲನೆಯದು ಸತ್ಯಶೀಲತೆ. ಮಾತಿಗೂ ಮನಸ್ಸಿಗೂ ಹೊಂದಾಣಿಕೆಯಿರಬೇಕಾದುದು. ಸಂಕೀರ್ತನ ಮಾಡುತ್ತೀ, ಜಪ ಮಾಡುತ್ತೀ, ನರ್ತನ ಮಾಡುತ್ತೀ. ಬರಿಯ ದೇಹದ ವ್ಯಾಪಾರವಷ್ಟೇ ಆದರೆ ಏನಾದಹಾಗಾಯಿತು? ಮನಸ್ಸು ಅದರಲ್ಲಿ ತೊಡಗಬೇಕು, ಮುಳುಗಬೇಕು. ನಾಲಿಗೆ ಏನನ್ನೊ ನುಡಿಯುತ್ತದೆ, ಮನಸ್ಸು ಇನ್ನು ಯಾವುದಕ್ಕೋ ಮಿಡಿಯುತ್ತದೆ! ಪ್ರಯೋಜನವೇನು?

ಎರಡನೆಯದು ವಿರಕ್ತಿ. ವಿರಕ್ತಿಯೆಂದರೇನು? ನನಗೆ ಇದು ಬೇಡವೆಂದು ಕೈಯಿಂದ ನೂಕುವುದಲ್ಲ. ದೇವರನ್ನು ಕಾಣುವ ಕಾತರ ಬಲವಾಗಿದ್ದಾಗ, ಉಳಿದೆಲ್ಲ ವ್ಯವಹಾರವೂ ಬಿದ್ದು ಹೋಗುತ್ತದೆ. ಉತ್ತರ ದಿಕ್ಕಿಗೆ ಪ್ರಯಾಣ ಮಾಡುತ್ತಿದ್ದೀ ಎಂದಿಟ್ಟುಕೋ. ದಕ್ಷಿಣದ ವಸ್ತುಗಳು ಏನಾಗುತ್ತವೆ? ಹಿಂದೆ ಹಿಂದೆ ಬೀಳುತ್ತವೆ, ದೂರ ದೂರ ಸರಿಯುತ್ತವೆ. ನಾವೇನು ಪ್ರಯತ್ನಪಡಬೇಕಾಗಿಲ್ಲ.

ದೇವರಲ್ಲಿ ಒಲುಮೆ ಇರಬೇಕು. ಗಂಡ ಹೆಂಡತಿಯನ್ನು ಪ್ರೀತಿಸುವಂತೆ, ಮಗು ತಾಯಿಯನ್ನು ಪ್ರೀತಿಸುವಂತೆ, ಲೋಭಿ ಹಣವನ್ನು ಪ್ರೀತಿಸುವಂತೆ, ದೇವರಲ್ಲಿ ನಮ್ಮ ಪ್ರೀತಿಯಿರಬೇಕು.

ನಿನ್ನ ದೇಹ, ಮಾತು, ಮನಸ್ಸುಗಳಿಂದ ಏನು ಮಾಡುವೆಯೋ ಅವೆಲ್ಲವೂ ದೇವರ ಕೆಲಸವೇ ಎಂಬ ನಂಬಿಕೆಯಿರಬೇಕು. ದೇವರು ಒಡೆಯ, ನಾನು ಸೇವಕ. ಅವನ ಇಚ್ಛೆಯಂತೆಯೇ ಎಲ್ಲವೂ ನಡೆಯುವುದು. ನಾನೂ ಅವನ ಆಣತಿಯಂತೆಯೇ ಉಸಿರಾಡುತ್ತಿದ್ದೇನೆ. ಈ ಭಾವನೆಯಿರಬೇಕು.

ಇನ್ನು ಯಾವುದು ಸತ್ಯ, ಯಾವುದು ಅಸತ್ಯ; ಯಾವುದು ದಿಟ, ಯಾವುದು ಖೋಟ; ಯಾವುದನ್ನು ನಾನು ಮಾಡಬೇಕು, ಯಾವುದನ್ನು ಬಿಡಬೇಕು—ಈ

ವಿಚಾರವಾಗಿ ಯಾವಾಗಲೂ ಚಿಂತಿಸುತ್ತ ಇರಬೇಕು. ಜ್ಞಾನಿಯಾದವನು ತಪ್ಪು ಹೆಜ್ಜೆ ಇಡಲಾರ.

ಮನಸ್ಸನ್ನು ಸಾಧ್ಯವಾದಷ್ಟೂ ನೆಮ್ಮದಿಯಿಂದಿರಿಸಿಕೊಳ್ಳಲು ಪ್ರಯತ್ನಿಸಬೇಕು. ದೇವರೇ ಎಲ್ಲದರಲ್ಲೂ ಇದ್ದಾನೆ, ಎಲ್ಲವೂ ಅವನೇ ಎಂಬ ಭಾವನೆ ಬೇರೂರಿದರೆ ಮನಸ್ಸು ಸುಮ್ಮನೆ ಕಳವಳಕ್ಕೀಡಾಗುವುದಿಲ್ಲ. ಎಲ್ಲವನ್ನೂ ಮಾಡಿಸುವವನು ಅವನೇ ಎಂದಾದಮೇಲೆ ನಮಗೇನು ಒಳಗುದಿ?"

೪೨

ಪುರಿ ಜಗನ್ನಾಥ ಕ್ಷೇತ್ರದಿಂದ ಬಂದವರು ದೇವರ ಪ್ರಸಾದವನ್ನು ಶ್ರೀ ರಾಮಕೃಷ್ಣರಿಗೆ ತಂದುಕೊಡುತ್ತಿದ್ದರು. ಅವರು ಅದನ್ನು ಭಕ್ತಿಯಿಂದ ಸ್ವೀಕರಿಸಿ, "ಈ ಕಲಿಯುಗದಲ್ಲಿ ಜಗನ್ನಾಥಸ್ವಾಮಿಯ ಪ್ರಸಾದವೆಂದರೆ ಪರಬ್ರಹ್ಮವಸ್ತುವೇ" ಎಂದು

ನರೇಂದ್ರನಾಥ ದತ್ತ

ಹೇಳಿ ತಮ್ಮ ಹಾಸಿಗೆಯ ಬದಿಯಲ್ಲಿ ಸಣ್ಣ ಚೀಲವೊಂದರಲ್ಲಿ ಇರಿಸಿಕೊಂಡು, ದಿನವೂ ಅದಕ್ಕೆ ನಮಸ್ಕರಿಸಿ, ಒಂದು ಚಿಟಿಕೆ ಪ್ರಸಾದವನ್ನು ಬಾಯಿಗೆ ಹಾಕಿಕೊಳ್ಳುತ್ತಿದ್ದರು. ಹತ್ತಿರವಿದ್ದ ಭಕ್ತರಿಗೂ ಒಂದಿಷ್ಟು ಪ್ರಸಾದವನ್ನು ನೀಡುವರು. ಇದು ವಾಡಿಕೆ.

ಹಾಗೊಂದು ದಿನ, ತಮ್ಮೊಂದಿಗೆ ಕುಳಿತಿದ್ದ ನರೇಂದ್ರನಾಥರಿಗೂ (ಮುಂದೆ

ಸ್ವಾಮಿ ವಿವೇಕಾನಂದರು) ಪ್ರಸಾದವನ್ನು ನೀಡಿದರು. ನರೇಂದ್ರನಾಥರು ತಮಗೆ ಅದರಲ್ಲಿ ನಂಬಿಕೆಯಿರದೆಂದು ತಿರಸ್ಕರಿಸಿದರು. ಶ್ರೀ ರಾಮಕೃಷ್ಣರು—

"ಹಾಗೆನ್ನಬೇಡ, ನರೇನ್, ಪ್ರಸಾದದಲ್ಲಿ ಗುಣಧರ್ಮಗಳಿರುವುದಿಲ್ಲವೆ? ತಿರಸ್ಕರಿಸಬಾರದು. ಯಾವ ವಸ್ತುವಿಗಾದರೂ ಅದರ ಗುಣಧರ್ಮಗಳಿದ್ದೇ ಇರುವುದನ್ನು ಬಲ್ಲೆಯಷ್ಟೆ? ತ್ರಿಫಲವನ್ನು ತಿಂದರೆ ಭೇದಿಯಾಗುತ್ತದೆ. ಅಫೀಮನ್ನು ತಿಂದರೆ ಮಲಬದ್ಧತೆಯಾಗುತ್ತದೆ ಅಲ್ಲವೆ? ಹಾಗೆಯೇ ದೇವರ ಪ್ರಸಾದವನ್ನು ತಿಂದರೆ ಶ್ರದ್ಧೆ ಹೆಚ್ಚುತ್ತದೆ, ಆಸ್ತಿಕ ಬುದ್ಧಿ ಬೆಳೆಯುತ್ತದೆ."

೪೩

ಶ್ರೀ ರಾಮಕೃಷ್ಣರೊಮ್ಮೆ ಕೇಶವಚಂದ್ರಸೇನರ ಬ್ರಾಹ್ಮೋ ಪ್ರಾರ್ಥನಾಸಭೆಗೆ ಹೋಗಿದ್ದರು. ಹಿಂದಿರುಗಿ ಬಂದ ಮೇಲೆ ಅವರ ಭಕ್ತರು ಅವರ ಅನುಭವ ಹೇಗಿದ್ದಿತ್ತೆಂದು ಕೇಳಿದರು. ಶ್ರೀ ರಾಮಕೃಷ್ಣರು ಏನನ್ನೂ ಹೇಳಲಿಲ್ಲ, ಸುಮ್ಮನಿದ್ದರು. ಭಕ್ತರು ಬಲವಂತ ಮಾಡಿದ ಮೇಲೆ,

"ಅಲ್ಲಿ ಹೇಗಿದ್ದಿತು? ನಾನೊಮ್ಮೆ ಪಂಚವಟಿಯಲ್ಲಿ ಮಂಗಗಳ ಹಿಂಡೊಂದನ್ನು ಕಂಡಿದ್ದೆ. ಎಲ್ಲ ಮಂಗಗಳೂ ಆರಾಮವಾಗಿ ಕುಳಿತಿದ್ದಂತೆ ತೋರುತ್ತಿತ್ತು. ಆದರೆ ಕೆಲವು ಕೋತಿಗಳು ಪಕ್ಕದ ಕೋತಿಯ ಮೈಯಿಂದ ತಿಗುಣೆಯನ್ನು ತೆಗೆಯುತ್ತಿದ್ದುವು. ನೆಮ್ಮದಿಯ ಚಿತ್ರವೇ, ಪರೋಪಕಾರದ ಚಿತ್ರವೇ.

ಆದರೆ ನಾನು ಝೂತಾಲದಿಂದ ಹಿಂದಿರುಗಿ ಬರುವಾಗ ನೋಡಿದೆ. ಕಾವಲುಗಾರರು ದೊಣ್ಣೆಗಳನ್ನು ಹಿಡಿದು ಮಂಗಗಳನ್ನು ಓಡಿಸುತ್ತಿದ್ದರು. ಆಗ ಅವು ಅರಚುತ್ತ, ಮರದಿಂದ ಮರಕ್ಕೆ ಹಾರುತ್ತ, ಹೂಹಣ್ಣುಗಳನ್ನು ಹಾಳುಮಾಡುತ್ತ, ಗದ್ದಲವೆಬ್ಬಿಸುತ್ತಿದ್ದುವು. ಮೊದಲು ನಾನು ನೋಡಿದ್ದ ನೆಮ್ಮದಿಯಾಗಲಿ ಪರೋಪಕಾರ ಬುದ್ಧಿಯಾಗಲಿ ಮಾಯವಾಗಿಬಿಟ್ಟಿದ್ದುವು!

ಹಾಗೆಯೇ ಕೇಶವನ ಶಿಷ್ಯರು ಪ್ರಾರ್ಥನಾಸಭೆಯಲ್ಲಿರುವಾಗ ನೆಮ್ಮದಿಯಿಂದ, ಗಂಭೀರವಾಗಿರುತ್ತಾರೆ. ಸಭೆ ಮುಗಿದು ಹೊರಗೆ ಬಂದಾಗ, ಗಟ್ಟಿಯಾಗಿ ಮಾತನಾಡುತ್ತ, ವಾದ ಮಾಡುತ್ತ, ಬಯ್ದಾಡುತ್ತ, ಹರಟೆ ಹೊಡೆಯುತ್ತ ಚದುರಿ ಹೋಗುವುದನು ಕಂಡೆ!"

೪೪

ಕೇಶವಚಂದ್ರಸೇನರ ಶಿಷ್ಯ ಅಶ್ವಿನಿಕುಮಾರ ದತ್ತನೊಂದಿಗೆ (೧೮೫೬-೧೯೨೩) ಮಾತನಾಡುತ್ತ ಕುಳಿತಿದ್ದಾರೆ. ಸಾಕಾರ-ನಿರಾಕಾರ ಬ್ರಹ್ಮದ ವಿಚಾರ ಬಂದಿತು. ಶ್ರೀ ರಾಮಕೃಷ್ಣರು—

ಅಶ್ವಿನೀಕುಮಾರ ದತ್ತ

"ಎರಡೂ ಬೇರೆ ಬೇರೆಯಲ್ಲ, ಅಶ್ವಿನ್. ಸಾಕಾರವೆಂದರೆ ನೀರು, ಐಸ್ ಇದ್ದಂತೆ. ನೀರೇ ಗಟ್ಟಿಯಾಗಿ ಐಸ್ ಆಗುವುದಿಲ್ಲವೆ? ಜ್ಞಾನದ ಶಾಖದಲ್ಲಿ ಐಸ್ ಕರಗಿ ನೀರಾಗುತ್ತದೆ. ಭಕ್ತಿಯ ತಂಪಿನ ಭರದಲ್ಲಿ ನೀರು ಹೆಪ್ಪುಗಟ್ಟಿ ಐಸ್ ಆಗಿಬಿಡುತ್ತದೆ.

ಸತ್ಯವೆಂಬುದು ಒಂದೇ. ಜನ ಅದಕ್ಕೆ ಬೇರೆ ಬೇರೆ ಹೆಸರಿಡುತ್ತಾರೆ. ಒಂದು ಕೊಳ ಇದೆ ಎಂದುಕೋ. ಅದರ ನಾಲ್ಕು ದಡಗಳಲ್ಲೂ ನಾಲ್ಕು ಸೋಪಾನಗಳು. ಒಂದು ಕಡೆ ಕೊಳದ ನೀರನ್ನು 'ನೀರು' ಎನ್ನುತ್ತಾರೆ. ಇನ್ನೊಂದು ಕಡೆ 'ಪಾನಿ' ಎನ್ನುತ್ತಾರೆ. ಮತ್ತೊಂದು ಕಡೆ 'ವಾಟರ್' ಎನ್ನುತ್ತಾರೆ. ಮಗದೊಂದು ಕಡೆ 'ಜಲ' ಎನ್ನುತ್ತಾರೆ. ಹಾಗೆಂದ ಮಾತ್ರಕ್ಕೆ ಕೊಳದ ನೀರೇನು ಬೇರೆ ಬೇರೆ ಆಯಿತೆ?"

೪೫

ಅಶ್ವಿನೀಕುಮಾರ ದತ್ತನೊಮ್ಮೆ ಶ್ರೀ ರಾಮಕೃಷ್ಣರನ್ನು ಕೇಳಿದ— "ನೀವು ವರ್ಣಾಶ್ರಮ ಧರ್ಮವನ್ನು ಉಳಿಸಿಕೊಂಡಿದ್ದೀರಾ?"

ಶ್ರೀ ರಾಮಕೃಷ್ಣರೆಂದರು—"ಉಳಿಸಿಕೊಂಡಿದ್ದೀನೆಂದು ಹೇಗೆ ತಾನೇ ಹೇಳಲಿ? ಮೊನ್ನೆ, ಕಾಯಸ್ಥ ಕೇಶವಚಂದ್ರಸೇನನ ಮನೆಯಲ್ಲಿ ಸಾರು ಕುಡಿಯಲಿಲ್ಲವೆ? ಇನ್ನೊಂದು ದಿನ ಏನಾಯಿತು, ನೀಳವಾದ ದಾಡಿಯವನೊಬ್ಬ (ಮುಸಲ್ಮಾನ) ಐಸ್ ತಂದುಕೊಡಲು ಬಂದ. ನಾನು ಬೇಡವೆಂದೆ. ಅದೇ ದಿನ ಒಬ್ಬ ಭಕ್ತ ಅವನ ಬಳಿಯಿಂದಲೇ ಐಸನ್ನು ಕೊಂಡು ತಂದುಕೊಟ್ಟ. ನಾನು ತಿಂದೆ. ಅಷ್ಟು ಮಾತ್ರವಲ್ಲ, ಅದು ಚೆನ್ನಾಗಿಯೂ ಇದ್ದಿತು. ರುಚಿ ಹತ್ತಿತು.

ಇದು ನೋಡು ಅಶ್ವಿನ್, ತೆಂಗಿನ ಮರದ ಹಾಗೆ. ಅದು ಮೇಲೆ ಮೇಲೆ ಬೆಳೆಯುತ್ತ ಹೋದಂತೆ ಕೆಳಗಿನ ಗರಿಗಳೆಲ್ಲ ತಾವಾಗಿ ಉದುರಿಹೋಗುತ್ತವೆ. ವರ್ಣಾಶ್ರಮ ಧರ್ಮಗಳೂ ಕೆಳಗಿನ ಗರಿಗಳು. ಅಧ್ಯಾತ್ಮ ಮುಂದುವರೆದಂತೆ ಇವು ಬಿದ್ದು ಹೋಗುತ್ತವೆ.

ಆದರೆ ಈ ಬೆಪ್ಪುತಕಡಿಗಳು ಬ್ರಾಹ್ಮೋಗಳಿದ್ದಾರಲ್ಲ, ಅವರಿಗೆ ಇದನ್ನು ಹೇಳಬೇಡ! ಅವರಿಗೆ ಮರಗಳ ಮರ್ಮ ತಿಳಿಯದು. ಮಚ್ಚನ್ನೆತ್ತಿಕೊಂಡು ಗರಿಗಳನ್ನೆಲ್ಲ ತರಿದು ಹಾಕಿಬಿಡುತ್ತಾರೆ."

(ಅಶ್ವಿನೀಕುಮಾರ ದತ್ತನೂ ಬ್ರಾಹ್ಮೋ ಆಗಿದ್ದವನೆ!)

೪೬

ಕೇಶವಚಂದ್ರಸೇನರು ತೀರಿಕೊಳ್ಳುವ ನಾಲ್ಕೈದು ತಿಂಗಳಿಗೆ ಮೊದಲು ತೀರ ಅಸ್ವಸ್ಥರಾಗಿದ್ದರು. ಅವರನ್ನು ನೋಡಿಕೊಂಡು ಬರಲು ಶ್ರೀ ರಾಮಕೃಷ್ಣರು ಅವರ ಮನೆಗೆ ಹೋದರು. ಮಾತನಾಡುತ್ತ ಕೇಶವಚಂದ್ರಸೇನರು—

"ಮಹಾಶಯ, ಲೌಕಿಕ ವ್ಯಕ್ತಿಯನ್ನು ಪರಮಾರ್ಥಕ್ಕೆ ಹಚ್ಚುವ ಶಕ್ತಿ ನಿಮಗಿದೆ. ನಿಮ್ಮ ಸ್ಪರ್ಶವಾದರೆ ಸಾಕು, ಅಧ್ಯಾತ್ಮ ಕುದುರುತ್ತದೆ! ಲೋಕದ ಹಿತದೃಷ್ಟಿಯಿಂದ ನೀವೇಕೆ ನಿಮ್ಮ ಬಳಿ ಬಂದವರನ್ನೆಲ್ಲ ಪರಿವರ್ತನೆ ಮಾಡಬಾರದು?" ಎಂದು ಕೇಳಿದರು.

ಅದಕ್ಕೆ ಶ್ರೀ ರಾಮಕೃಷ್ಣರು "ದಿಟ, ಆ ಶಕ್ತಿ ನನಗಿರಬಹುದು. ಆದರೆ ಯಾರನ್ನಾದರೂ ನಾನು ಪರಮಾರ್ಥಕ್ಕೆ ಬಲವಂತವಾಗಿ ಏರಿಸಿದೆನೆಂದರೆ ಅದೇನು ಪರಿಪೂರ್ಣವಾಗಲಾರದು, ಅದರಿಂದ ಸಿದ್ಧಿಯೂ ಬರಲಾರದು. ವ್ಯಕ್ತಿಯಲ್ಲಿ ಅದು ತಾನೇ ಮೂಡಬೇಕು, ಬೆಳೆಯಬೇಕು. ಹಾಗಾದರೆ ಮಾತ್ರ ಅದು ಉಳಿಯುತ್ತದೆ. ಅದರಿಂದ ಪ್ರಯೋಜನವಾಗುತ್ತದೆ. ಬೇರೆಯವರಿಂದ ಬಂದದ್ದು, ಬಲವಂತವಾಗಿ ಬಂದದ್ದು, ಹಾಗೆಯೇ ಮರೆಯಾಗುತ್ತದೆ. ಮನುಷ್ಯ ಮೊದಲಿದ್ದಂತೆಯೇ ಇರುತ್ತಾನೆ. ಸ್ವಭಾವದಲ್ಲೇನು ಪರಿವರ್ತನೆ ಆಗುವುದಿಲ್ಲ!" ಎಂದರು.

೪೭

ಪಾನಿಹಾಟಿ ಎಂಬುದೊಂದು ವಾರ್ಷಿಕ ವೈಷ್ಣವ ಮೇಳ. ತುಂಬ ಸಂಭ್ರಮದಿಂದ ನವದ್ವೀಪದ ಗೋಸ್ವಾಮಿಯ ಸನ್ನಿಧಿಯಲ್ಲಿ ನಡೆಯುತ್ತದೆ. ಸಂಕೀರ್ತನ, ಭಜನೆ, ನೃತ್ಯಸೇವೆ, ಭಾವಸಮಾಧಿ ಎಲ್ಲದರಲ್ಲೂ ಶ್ರೀ ರಾಮಕೃಷ್ಣರು ಪಾಲ್ಗೊಳ್ಳುತ್ತಿದ್ದರು; ಈ ಉತ್ಸವವೆಂದರೆ ಅವರಿಗೆ ತುಂಬ ಪ್ರೀತಿ. ಯಾವ ಕಾರಣಕ್ಕೂ ತಪ್ಪಿಸಿಕೊಳ್ಳುತ್ತಿರಲಿಲ್ಲ.

೧೮೮೩ರಲ್ಲಿ ನಡೆದ ಉತ್ಸವಕ್ಕೆ ಲಾಟು, ಭವನಾಥ ಮೊದಲಾದವರೊಂದಿಗೆ ಶ್ರೀ ರಾಮಕೃಷ್ಣರು ಹೋಗಿದ್ದರು. ಉತ್ಸವ ಸಂದರ್ಭದಲ್ಲಿ ನೆರೆದವರಿಗೆಲ್ಲ ದಕ್ಷಿಣೆ ಕೊಡುವುದು ಅಲ್ಲಿನ ಒಂದು ಪದ್ಧತಿ. ಎಲ್ಲರಿಗೂ ಒಂದು ರೂಪಾಯಿ ದಕ್ಷಿಣೆ ನೀಡಿದರೆ ಆ ದಿನ ಶ್ರೀ ರಾಮಕೃಷ್ಣರಿಗೆ ಐದು ರೂಪಾಯಿಗಳು.

ಆದರೆ ಶ್ರೀ ರಾಮಕೃಷ್ಣರು ಹಣವನ್ನು ಮುಟ್ಟುತ್ತಿರಲಿಲ್ಲ. ಉತ್ಸವದ ವ್ಯವಸ್ಥಾಪಕರು ತುಂಬ ಬಲವಂತ ಮಾಡಿದರು. ಶ್ರೀ ರಾಮಕೃಷ್ಣರೇನು ಜಗ್ಗಲಿಲ್ಲ. ವ್ಯವಸ್ಥಾಪಕರು ಗುಟ್ಟಾಗಿ ಹಣವನ್ನು ರಾಖಾಲನಿಗೆ ಕೊಟ್ಟು ಏನಾದರೂ ಮಾಡುವಂತೆ ಹೇಳಿದರು. ರಾಖಾಲ ಆ ಹಣಕ್ಕೆ ಒಂದು ಬುಟ್ಟಿ ಮಾವಿನ ಹಣ್ಣುಗಳನ್ನೂ ಒಂದು ಪೊಟ್ಟಣ ಸಿಹಿತಿಂಡಿಯನ್ನೂ ಕೊಂಡು ತಂದು ಶ್ರೀ ರಾಮಕೃಷ್ಣರೆದುರು ಇಟ್ಟನು.

ವಿಷಯವೆಲ್ಲ ಅವರಿಗೆ ತಿಳಿದಾಗ ರಾಖಾಲನ ಮೇಲೆ ಸಿಟ್ಟಾದರು. "ಇದೇನು ನೀನು ಮಾಡಿದ್ದು? ಹಣವನ್ನು ನೀನು ತೆಗೆದುಕೊಂಡರೆ ನಾನೇ ತೆಗೆದುಕೊಂಡಂತೆ ಆಗಲಿಲ್ಲವೆ? ನನ್ನ ಮುಖಕ್ಕೆ ಮಸಿ ಬಳಿಯುತ್ತೀಯಲ್ಲ? ಇದೆಂಥ ಗುರುಸೇವೆ! ಇನ್ನು ಮುಂದೆ ಇಂಥ ಕೆಲಸ ಮಾಡಬೇಡ!" ಎಂದು ಎಚ್ಚರಿಸಿದರು.

೪೮

ಅಶ್ವಿನೀಕುಮಾರ ದತ್ತನ ಜೊತೆ ಮಾತನಾಡುತ್ತ ಕುಳಿತಿದ್ದಾಗ ಒಂದು ದಿನ ಅವನ ಗುರು ಕೇಶವಚಂದ್ರಸೇನನ ಪ್ರಸ್ತಾಪ ಬಂದಿತು. ಶ್ರೀ ರಾಮಕೃಷ್ಣರು ಹೇಳಿದ್ದು—

"ನೋಡು ಅಶ್ವಿನ್, ಮಾಯೆಯ ಹಿಡಿತ ಇರುವ ಸಾಧಕ ಎಳೆಯ ತೆಂಗಿನಕಾಯಿ ಇದ್ದಂತೆ. ಒಳಗಿನ ಕೊಬ್ಬರಿಯನ್ನು ತೆಗೆಯುವಾಗ, ಎಷ್ಟು ಎಚ್ಚರಿಕೆಯಿಂದ ಕೆರೆದರೂ ಒಳಗಿನ ಕರಟದ ಮೇಲು ಪದರ ಕೊಬ್ಬರಿಯ ಜೊತೆ ಸೇರಿಕೊಂಡು ಬಂದುಬಿಡುತ್ತದೆ. ಅದೇ ಕಾಯಿ ಬಲಿತಾಗ, ಕೊಬ್ಬರಿ ತಾನಾಗಿ ಕರಟದಿಂದ ಬೇರೆಯಾಗಿ ಬಿಡುತ್ತದೆ. ಒಳಗೇ ಇದ್ದಾಗ ಸ್ವತಂತ್ರವಾಗಿ ಆಡುತ್ತದೆ; ಕಾಯಿ ಒಡೆದಾಗ ಉಂಡೆಯಾಗಿ ಹೊರಗೆ ಬಂದುಬಿಡುತ್ತದೆ. ಕರಟದ ಜೊತೆ ಕೊಬ್ಬರಿ ಸೇರುವುದಿಲ್ಲ.

ಮಾಯೆಯ ಹಿಡಿತ ಏನು ಎನ್ನುತ್ತೀಯಾ? 'ನಾನು' ಎನ್ನುವುದಿದೆಯಲ್ಲ, ಅದೇ. ಅದು ಯಾರನ್ನೂ ಬಿಡುವುದಿಲ್ಲ. ಈ ಹಾಳು ಅರಳೀಮರ ಇದ್ದ ಹಾಗೆ ಅದು. ಮನೆಯನ್ನು ಒಡೆದು ಹಾಕಿ, ಕಲ್ಲು-ಮಣ್ಣು-ಕಸದ ರಾಶಿಯಾಗಿ ಮಾಡಿದರೂ ಅದರಿಂದ ಎಲ್ಲಿಂದಲೋ ಒಂದು ಅರಳೀಮರ ಕಾಣಿಸಿಕೊಳ್ಳುತ್ತದೆ. ಅದನ್ನು ಕತ್ತರಿಸಿಹಾಕು, ಮತ್ತೆ ಮರುದಿನ ಅದು ಅಲ್ಲಿಯೇ ತೋರಿಕೊಳ್ಳುತ್ತದೆ. ಈರುಳ್ಳಿಯಿಟ್ಟ ಬಟ್ಟಲನ್ನು ಏಳು ಸಾರಿ ಶುದ್ಧಿಮಾಡು, ಈರುಳ್ಳಿಯ ವಾಸನೆ ಹೋಗುವುದಿಲ್ಲ!"

೪೯

ಜೋಗೀನ್ (ಜೋಗೀಂದ್ರನಾಥ್ ರಾಯ್‌ಚೌಧುರಿ, ಮುಂದೆ ಸ್ವಾಮಿ ಯೋಗಾನಂದರು, ೧೮೬೧-೧೮೯೯) ದಕ್ಷಿಣೇಶ್ವರದಲ್ಲಿ ಮಾಲಿಯ ಕೆಲಸ ಮಾಡಲು ಮುಂದಾಗಿ ಶ್ರೀ ರಾಮಕೃಷ್ಣರ ಬಳಿಗೆ ಬಂದರು. ಬಂದವರು ಒಂದು ದಿನ "ಗುರುಗಳೇ, ನನ್ನಲ್ಲಿ ಕಾಮ ಜೋರಾಗಿದೆ. ಶಮನ ಮಾಡಲು ಏನಾದರೂ ಉಪಾಯ ಹೇಳಿ" ಎಂದು ಕೇಳಿಕೊಂಡರು. ಶ್ರೀ ರಾಮಕೃಷ್ಣರು "ಹರಿನಾಮ ಜಪ ಮಾಡು" ಎಂದು ಹೇಳಿದರು.

ಇದರಿಂದ ಜೋಗೀನನಿಗೆ ಪ್ರಯೋಜನವಾದಂತೆ ಕಾಣಲಿಲ್ಲ. ಆಗ ಪಂಚವಟಿಯಲ್ಲೆ ನಾರಾಯಣನೆಂಬ ಹಠಯೋಗಿ ಇದ್ದ. ಜೋಗೀನ್ ಅವನ ಬಳಿಗೆ ಹೋದ. ಹಠಯೋಗಿಯು ಇವನಿಗೆ ನೇತಿ-ಧೌತಿ ಮೊದಲಾದ ಸಾಧನೆಗಳನ್ನು ಕಲಿಸಿದ.

ಇದರಿಂದಲೂ ಏನೂ ಉಪಯೋಗ ತೋರಲಿಲ್ಲ. ಮತ್ತೆ ಶ್ರೀ ರಾಮಕೃಷ್ಣರ ಬಳಿಗೇ ಬಂದ. ಆಗ ಅವರು

"ನೀನೇಕೆ ಅಲ್ಲಿಗೆ ಹೋದೆ? ಈ ಸಾಧನೆಗಳೆಲ್ಲ ನಿನ್ನ ಮನಸ್ಸನ್ನೆಲ್ಲ ಶರೀರದಲ್ಲೇ ನಿಲ್ಲಿಸಿಬಿಡುತ್ತವೆ. ಮನಸ್ಸು ದೇವರ ಕಡೆ ಹರಿಯಬೇಕು, ಆಗ ಮಾತ್ರ ಏನಾದರೂ ನೆಮ್ಮದಿ ದೊರಕೀತು. ಶರೀರದಲ್ಲೇ ನಮ್ಮ ಗಮನವೆಲ್ಲ ಬೇರೂರಿಬಿಟ್ಟರೆ ಏನಾದಹಾಗಾಯಿತು?" ಎಂದರು.

ಜೋಗೀನ್ ಗುರುಗಳು ಸೂಚಿಸಿದ ಹರಿನಾಮ ಜಪವನ್ನೇ ಮತ್ತೆ ಗಟ್ಟಿಯಾಗಿ ಹಿಡಿದು, ತನ್ನ ಕಾಮವನ್ನು ಗೆದ್ದುಕೊಂಡ.

೫೦

ಶ್ರೀ ರಾಮಕೃಷ್ಣರಿಗೆ ಜೋಗೀನ್ ಬಂಟ. ಒಂದು ಸಂಜೆ ಅವರ ಕೋಣೆಯಲ್ಲಿ ಮೇಣದ ಬತ್ತಿ ಇರಲಿಲ್ಲ. "ಜೋಗೀನ್, ಗಿರಿಶ ಬಾಬುವಿನ (ಗಿರಿಶಚಂದ್ರ ಘೋಷ್) ಮನೆಗೆ ಹೋಗಿ ಒಂದೆರಡು ಮೇಣದ ಬತ್ತಿಗಳನ್ನು ತೆಗೆದುಕೊಂಡು ಬಾ" ಎಂದು ಕಳುಹಿಸಿದರು.

ಜೋಗೀನ್ ಗಿರಿಶರ ಮನೆಗೆ ಹೋದಾಗ, ಅವರು ಕುಡಿದ ಅಮಲಿನಲ್ಲಿದ್ದರು. ಜೋಗೀನ್ ತಾನು ಬಂದ ಕಾರಣವನ್ನು ತಿಳಿಸಿದೊಡನೆ ಅವರು ಸಿಟ್ಟಾದರು. "ಇದೇ ಕೆಲಸವೋ ನಿನಗೆ? ದೀಪ ಇಲ್ಲದಿದ್ದರೆ ಇಲ್ಲ; ಅಂಗಡಿಯಿಂದ ಕೊಂಡು ತರಬೇಕು. ನನ್ನನ್ನೇಕೆ ಪೀಡಿಸಬೇಕು?" ಎಂದು ಹೇಳುತ್ತ ಶ್ರೀ ರಾಮಕೃಷ್ಣರನ್ನು ಅವಾಚ್ಯ ಮಾತುಗಳಿಂದ ಬಯ್ದರು.

ಅವರು ಶ್ರೀ ರಾಮಕೃಷ್ಣರ ಭಕ್ತರು ಎಂದು ತಿಳಿದಿದ್ದ ಜೋಗೀನನಿಗೆ ದಿಗ್ಭ್ರಮೆಯಾಯಿತು. ಬೆದರಿದ, ಹೊರಟುಹೋಗಲು ತಿರುಗಿದ. ಒಡನೆಯೇ ಗಿರಿಶ "ಓಹೋ, ಬಾರಯ್ಯ, ಭಗವಾನರಿಗೆ ಮೇಣದ ಬತ್ತಿ ಬೇಕಲ್ಲವೆ? ಒಂದೆರಡಲ್ಲ, ಇಡೀ ಪೊಟ್ಟಣವನ್ನೇ ತೆಗೆದುಕೊಂಡು ಹೋಗು!" ಎಂದು ಹೇಳುತ್ತ ದಕ್ಷಿಣೇಶ್ವರದ ಕಡೆ ಮುಖ ಮಾಡಿ ಮತ್ತೆ ಮತ್ತೆ ನಮಸ್ಕರಿಸಿದರು.

ನಡೆದುದನ್ನು ಜೋಗೀನ್ ಶ್ರೀ ರಾಮಕೃಷ್ಣರಿಗೆ ಹೇಳಿದಾಗ ಅವರು ನಗುತ್ತ "ನೋಡಿದೆಯಾ ಭಕ್ತನ ಇಮ್ಮುಖವನ್ನು? ನನ್ನನ್ನು ಬಯ್ದನೆಂದು ನಾನು ಮುನಿಸಿಕೊಳ್ಳಲೆ? ನನ್ನ ಭಕ್ತನೆಂದು ಸಂತೋಷಪಡಲೆ? ಸಹಜವಾಗಿ ಅವನಲ್ಲಿ ಎಷ್ಟೊಂದು ಪ್ರೀತಿಯಿದೆ? ಕುಡಿದ ಅಮಲಿನಲ್ಲಿ ಬೇರೆ ಸ್ವಭಾವ ತೋರಿಕೊಳ್ಳುತ್ತದೆ. ಅದೊಂದು ವಿಚಿತ್ರ ವ್ಯಕ್ತಿ; ಬೇರೆಯವರ ಹಾಗಲ್ಲ! ಅವನ ದಾರಿಯೇ ಬೇರೆ!" ಎಂದರು.

೫೧

ಒಮ್ಮೆ ಶ್ರೀ ರಾಮಕೃಷ್ಣರು ಜೋಗೀನನೊಂದಿಗೆ ಮಾತನಾಡುತ್ತ ಕುಳಿತಿದ್ದಾಗ, ಇದ್ದಕ್ಕಿದ್ದಂತೆ "ಜೋಗೀನ್, ನನ್ನನ್ನು ಹೇಗೆ ಗುರುತಿಸುತ್ತಿ?" ಎಂದು ಕೇಳಿದರು.

ಜೋಗೀನ್ ಹೇಳಿದ— ಗುರುಗಳೇ, ನೀವು ಗೃಹಸ್ಥರೂ ಅಲ್ಲ, ಸಂನ್ಯಾಸಿಯೂ ಅಲ್ಲ!"

ಜೋಗೀಂದ್ರನಾಥ ರಾಯ್‌ಚೌಧುರಿ

ಶ್ರೀ ರಾಮಕೃಷ್ಣರು—"ಎಷ್ಟು ಸೊಗಸಾಗಿ ಹೇಳಿಬಿಟ್ಟೆ, ಜೋಗೀನ್!" ಎಂದು ಮೆಚ್ಚಿಕೊಂಡರು. ಜೋಗೀನ್ ಹೇಳಿದ್ದು ಅವರು ಎರಡನ್ನೂ ಮೀರಿದವರು ಎಂಬರ್ಥದಲ್ಲಿ.

ಆದರೆ ಶ್ರೀ ರಾಮಕೃಷ್ಣರು "ಎಷ್ಟರ ಮಟ್ಟಿಗೆ ನಾನು ಗೃಹಸ್ಥನೂ ಅಲ್ಲ, ಸಂನ್ಯಾಸಿಯೂ ಅಲ್ಲ ಎಂಬುದನ್ನು ಚೆನ್ನಾಗಿ ಪರೀಕ್ಷೆಮಾಡು, ಜೋಗೀನ್, ನನ್ನ ತಿಳಿವಳಿಕೆಯ ಮಟ್ಟ ಎಷ್ಟರ ಮಟ್ಟಿನದು ಎಂಬುದನ್ನೂ ತಿಳಿಯಹೇಳು!" ಎಂದರು.

೫೨

ಜೋಗೀನ್‌ಗೆ ಶ್ರೀ ರಾಮಕೃಷ್ಣರನ್ನು ರಾತ್ರಿ ನೋಡಿಕೊಳ್ಳುವ ಕೆಲಸ ಬಿದ್ದಿತು. ರಾತ್ರಿ ಅವರ ಮಂಚವನ್ನು ಸರಿ ಮಾಡಿ, ಹಾಸುಗೆ ಹಾಸಿ ಅವರು ಮಲಗಿದ ಮೇಲೆ ತಾನು ನೆಲದ ಮೇಲೆ ಹಾಸುಗೆ ಬಿಡಿಸಿಕೊಂಡು ಮಲಗುವನು. ಅಷ್ಟು ಗಾಢ ನಿದ್ರೆಯವನಲ್ಲ; ಬೇಗನೆ ಎಚ್ಚರವಾಗಿಬಿಡುತ್ತಿತ್ತು.

ಒಂದು ನಡುರಾತ್ರಿ ಎಚ್ಚರವಾಯಿತು. ನೋಡಿದರೆ ಮಂಚದ ಮೇಲೆ ಶ್ರೀ ರಾಮಕೃಷ್ಣರು ಕಾಣಿಸಲಿಲ್ಲ. ನೀರಿನ ತಂಬಿಗೆ ಮಾತ್ರ ಇದ್ದಿತು. ದಿಗ್ಗನೆ ಎದ್ದು ಕೋಣೆಯೊಳಗೆ, ಹೊರಗೆ ನೋಡಿದ. ಓಡಿಯಾಡುತ್ತಿರಬಹುದೆಂದು ಕುಟೀರದ ಹೊರಗೂ ಹುಡುಕಾಡಿದ. ಎಲ್ಲಿಯೂ ಅವರ ಸುಳಿವಿಲ್ಲ.

ಆಗ ಅವನಿಗೊಂದು ಯೋಚನೆ ಬಂದಿತು. ನವಬತ್‌ಖಾನೆ(ವಾದ್ಯಗೃಹ)ಯಲ್ಲಿ ಶ್ರೀ ಶಾರದಾದೇವಿ ಇರುತ್ತಿದ್ದ ಕಾಲ ಅದು. ಅವರೊಂದಿಗೆ ರಾತ್ರಿಯನ್ನು ಕಳೆಯಲು ಅಲ್ಲಿಗೆ ಹೋಗಿರಬಹುದೆಂಬ ಆಲೋಚನೆ ಸುಳಿಯಿತು. ಒಡನೆಯೇ ಸಂಶಯ ಪಿಶಾಚ ಒಳಹೊಕ್ಕಿತು. "ಆಹಾ, ಎಂಥ ಗುರುಗಳು! ಹೇಳುವುದೊಂದು, ಮಾಡುವುದು ಇನ್ನೊಂದು! ಎಲ್ಲ ಕಪಟ ನಾಟಕ! ಇರಲಿ, ಇದನ್ನು ಬಯಲಿಗೆಳೆಯುತ್ತೇನೆ" ಎಂದುಕೊಂಡು ನವಬತ್‌ಖಾನೆಯ ಹತ್ತಿರವೇ ನಿಂತ.

ಸ್ವಲ್ಪ ಹೊತ್ತಿನ ಮೇಲೆ ಪಂಚವಟಿಯ ಕಡೆಯಿಂದ ಚಪ್ಪಲಿಯ ಶಬ್ದ ಕೇಳಿ ಬರತೊಡಗಿತು. ಜೋಗೀನ್ ದಿಟ್ಟಿಸಿ ನೋಡಿದ. ಶ್ರೀ ರಾಮಕೃಷ್ಣರು ಆ ಕಡೆಯಿಂದ ನಡೆದು ಬರುತ್ತಿದ್ದಾರೆ. ಬಂದವರೆ, ಜೋಗೀನನನ್ನು ನೋಡಿ "ಇದೇನು ಜೋಗೀನ್, ಈ ಹೊತ್ತಿನಲ್ಲಿ ಇಲ್ಲಿ ನಿಂತಿದ್ದೀ?" ಎಂದು ಕೇಳಿದರು. ಜೋಗೀನ್ ಬಾಯಿ ಬಿಡಲಿಲ್ಲ.

ಶ್ರೀ ರಾಮಕೃಷ್ಣರೇ ಊಹಿಸಿ "ಯಾರನ್ನೂ ಏಕಾಏಕಿ ನಂಬಿಬಿಡಬಾರದು. ಎಲ್ಲ ವಿಧಗಳಲ್ಲೂ ಪರೀಕ್ಷೆ ಮಾಡಿಯೇ ನಂಬಬೇಕು. ನೀನು ಮಾಡಿದ್ದು ಸರಿ!" ಎಂದರು.

ಜೋಗೀನ್ ಮುಖದಿಂದ ನೀರಿಳಿಯಿತು.

೫೩

ಶ್ರೀ ರಾಮಕೃಷ್ಣರ ಮಜ್ಜನಕ್ಕೆ ಮೊದಲು ರಾಖಾಲ ನೆತ್ತಿಗೆ ಎಣ್ಣೆ ಒತ್ತುತ್ತಿದ್ದ. ಶ್ರೀ ರಾಮಕೃಷ್ಣರು ಅಡಿಗಡಿಗೆ ಸಮಾಧಿಗೆ ಜಾರಿ ಮತ್ತೆ ಎಚ್ಚರದ ಸ್ಥಿತಿಗೆ ಬರುತ್ತಿದ್ದರು. ಇದನ್ನು ನೋಡಿ, ರಾಖಾಲ "ಗುರುಗಳೇ, ನನಗೂ ಸಮಾಧಿಯ ಅನುಭವವನ್ನು ಅನುಗ್ರಹಿಸಿ" ಎಂದು ಕೇಳಿಕೊಂಡ.

ಶ್ರೀ ರಾಮಕೃಷ್ಣರು ಯಾವ ಮಾತನ್ನೂ ಆಡಲಿಲ್ಲ. ರಾಖಾಲ ಮತ್ತೆ ಮತ್ತೆ ಕೇಳುವುದನ್ನು ಬಿಡಲಿಲ್ಲ. ಶ್ರೀ ರಾಮಕೃಷ್ಣರು ಸಿಟ್ಟಿಗೆದ್ದು ಅವನನ್ನು ಬಯ್ದು "ಹೋಗಾಚೆ" ಎಂದುಬಿಟ್ಟರು. ರಾಖಾಲನಿಗೂ ಸಿಟ್ಟು ಬಂತು; ಕಣ್ಣಲ್ಲಿ ನೀರೂ ಬಂತು.

ಆಗ ಶ್ರೀ ರಾಮಕೃಷ್ಣರು "ನೋಡು ರಾಖಾಲ, ನಿನ್ನ ಮೈಮೇಲೆ ಕುರುವೊಂದು ಕಾಣಿಸಿತು ಎಂದುಕೋ. ಏನು ಮಾಡುತ್ತೀ? ವೈದ್ಯನ ಬಳಿ ಓಡುತ್ತೀ. ಅವನೇನು ಮಾಡುತ್ತಾನೆ? ಒಡನೆಯೇ ಕುರುವನ್ನು ಕತ್ತರಿಸಿ ಬಿಸಾಡುತ್ತಾನೆಯೆ? ಇಲ್ಲ. ಸಣ್ಣ ಕುರುವನ್ನು ದೊಡ್ಡದು ಮಾಡುತ್ತಾನೆ; ಹಸಿಯಾಗಿದ್ದುದನ್ನು ಮಾಗಿಸುತ್ತಾನೆ, ಕೀವು ಕಟ್ಟುವಂತೆ ಮಾಡುತ್ತಾನೆ. ಬೆಳೆಯಿಸಿ ಬಲಿಸುತ್ತಾನೆ. ಒಂದು ಹದಕ್ಕೆ ಬಂದ ಮೇಲೆ ಕತ್ತರಿಸಿ ಬಿಸಾಡುತ್ತಾನೆ.

ಸಮಾಧಿಯ ಬಯಕೆಯೂ ಹಾಗೆಯೇ. ಅದನ್ನು ಬೆಳೆಸಬೇಕು, ಮಾಗಿಸಬೇಕು. ಕುಂಡಲಿನಿ, ಆಸನ, ಧ್ಯಾನ, ಜಪ ಯೋಗ ಇವೆಲ್ಲ ಸಾಧನೆಗಳು. ಬಯಕೆ ಪಕ್ವವಾದಾಗ ಗುರು ತಾನಾಗಿ ಬಂದು ನಿನ್ನ ನಾಲಗೆಯ ಮೇಲೆ ಮಂತ್ರಾಕ್ಷರವನ್ನು ಬರೆಯುತ್ತಾನೆ. ಅದು ಶಬ್ದಬ್ರಹ್ಮ. ಅಲ್ಲಿಯವರೆಗೆ ಅವಸರಪಟ್ಟು ಪ್ರಯೋಜನವಿಲ್ಲ."

೫೪

ಶಶಿಭೂಷಣ ಚಕ್ರವರ್ತಿ ಇನ್ನೂ ಬ್ರಾಹ್ಮೋ ಆಗಿರುವಾಗಲೇ ಶ್ರೀ ರಾಮಕೃಷ್ಣರನ್ನು ಅಡಿಗಡಿಗೆ ಬಂದು ನೋಡಿಕೊಂಡು ಹೋಗುತ್ತಿದ್ದರು. ಅವರಿಗೆ ಸಾಧನೆ, ಶೀಲಶುದ್ಧಿಯ ಮೇಲೆ ಕಳಕಳಿ.

"ದೇವರು ನಮ್ಮ ಬದುಕಿನೊಳಗೆ ಯಾವಾಗ ಬಂದಿಳಿಯುವನೋ ತಿಳಿಯದು. ನಾವು ಸಿದ್ಧರಾಗಿರಬೇಕಲ್ಲವೆ?"

ಅದಕ್ಕೆ ಶ್ರೀ ರಾಮಕೃಷ್ಣರು—

"ಅಯ್ಯಾ, ಅದರ ಯೋಚನೆ ನಿನಗೇಕೆ? ರಾಜನು ಜವಾನನೊಬ್ಬನ ಮನೆಗೆ ಬರುತ್ತಾನೆಂದುಕೋ. ಹಾಗೆಯೇ ಬಂದುಬಿಡುತ್ತಾನೆಯೆ? ಮೊದಲೇ ಆಳುಗಳನ್ನು ಕಳುಹಿಸುತ್ತಾನೆ; ಸ್ಥಳವನ್ನು ಶುದ್ಧಿ ಮಾಡಿಸುತ್ತಾನೆ. ತನಗಾಗಿ ಮೆದುವಾದ ಆಸನಗಳನ್ನು ತಂದುಹಾಕಿಸುತ್ತಾನೆ. ಸಿಬ್ಬಂದಿಯನ್ನು ಕಳುಹಿಸುತ್ತಾನೆ. ಸ್ಥಳವನ್ನು ಸುಭದ್ರ ಮಾಡಿಕೊಳ್ಳುತ್ತಾನೆ. ಹೀಗೆ ತಯಾರಿಯೆಲ್ಲ ಮುಗಿದ ಮೇಲೇ ರಾಜನು ಬರುವುದು. ಅಲ್ಲವೆ?

ತಯಾರಿಯನ್ನು ಮಾಡಿಕೊಳ್ಳಲು ರಾಜನಾದವನು ಜವಾನನಿಗೇ ಬಿಡುವುದಿಲ್ಲ. ತಾನೇ ಎಲ್ಲವನ್ನೂ ಮಾಡಿಸುತ್ತಾನೆ, ನೋಡಿಕೊಳ್ಳುತ್ತಾನೆ. ಹಾಗೆಯೇ ನಮ್ಮ ಒಡಲನ್ನು ದೇವರ ಬರವಿಗೆ ಸಿದ್ಧಮಾಡುವುದು ದೇವರ ಕೆಲಸವೇ. ಅದರ ತಯಾರಿಯೆಂದರೇನು? ಪ್ರಾಮಾಣಿಕತೆ, ಸ್ವಾರ್ಥವನ್ನು ಬಿಡುವುದು. ಸೌಶೀಲ್ಯ, ಔದಾರ್ಯ, ಸಜ್ಜನಿಕೆ ಮೊದಲಾದ ಗುಣಗಳನ್ನು ಬೆಳೆಸಿಕೊಳ್ಳುವುದು. ದೇವರು ಬರುವುದಿದ್ದರೆ ಇವೆಲ್ಲ ತಾವಾಗಿ ಸಿದ್ಧವಾಗುತ್ತವೆ. ನಾವೇನು ಹಾರಾಡಬೇಕಾಗಿಲ್ಲ. ಇದನ್ನು ನಂಬು" ಎಂದರು.

೫೫

ಗಂಗಾಧರ ಗಂಗೋಪಾಧ್ಯಾಯರು (ಮುಂದೆ ಸ್ವಾಮಿ ಅಖಂಡಾನಂದ ರೆಂದಾದವರು, ೧೮೬೪-೧೯೩೭) ಬಾಗ ಬಜಾರಿನಲ್ಲಿ ದೀನನಾಥ ಬಸುವಿನ ಮನೆಯಲ್ಲಿ ಶ್ರೀ ರಾಮಕೃಷ್ಣರನ್ನು ೧೮೭೭ರಲ್ಲಿ ಕಂಡರು. ಮುಂದೆ ೧೮೮೩ರಿಂದ ಅವರ ಆಪ್ತ ಅನುಚರರಾದರು. ಅವರು ಉಳಿಸಿರುವ ಒಂದು ಚಿತ್ರಣ ಇದು.

ದಿನವೂ ಸ್ನಾನಕ್ಕೆಂದು ಶ್ರೀ ರಾಮಕೃಷ್ಣರು ಚಾಂದನಿ ಘಟ್ಟಕ್ಕೆ ಹೋಗುವಾಗ, ಅವರ ಕಮಂಡಲುವನ್ನು ಒಯ್ಯುವುದು ಗಂಗಾಧರನ ಕೆಲಸ. ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲೇ ದಡಕ್ಕೆ ಬರುವರು. ಹೊಸಬಟ್ಟೆ ಹಾಕಿಕೊಳ್ಳುವ ಮೊದಲು ತಮ್ಮ ಕಮಂಡಲುವಿನಿಂದ ಗಂಗಾಜಲವನ್ನು ಅದರ ಮೇಲೆ ಪ್ರೋಕ್ಷಣೆ ಮಾಡುವಂತೆ ಗಂಗಾಧರನಿಗೆ ಹೇಳುವರು.

ಕೋಣೆಗೆ ಬಂದ ಮೇಲೆ ಅಲ್ಲಿ ಗೋಡೆಯ ಮೇಲೆ ತೂಗು ಹಾಕಿದ್ದ ಕಾಲಿಘಾಟಿನ ಕಾಳಿಯ ಚಿತ್ರದ ಮುಂದೆ ನಿಂತು ನಮಸ್ಕರಿಸುವರು. ಅನಂತರ ಜಗನ್ನಾಥ ಸ್ವಾಮಿಯ ಪ್ರಸಾದವನ್ನು ಸ್ವೀಕರಿಸಿ, ಗಂಗಾಧರನಿಗೂ ಸ್ವಲ್ಪ ಕೊಡುವರು. ಮತ್ತೆ ಕಾಳಿಯ ಚಿತ್ರಪಟದ ಮುಂದೆ ನಿಂತು 'ಓಂ ಕಾಳಿ' 'ಓಂ ಕಾಳಿ' ಎಂದು ಹಲವು ಬಾರಿ ಹೇಳಿಕೊಳ್ಳುವರು. ಬಲಗೈನ ಮೂರು ನಡುಬೆರಳುಗಳನ್ನು ಮಣಿಗಂಟಿನ ಮೇಲೆ ಮುಟ್ಟಿಸಿ ಎದೆಯ ಮೇಲಿರಿಸಿಕೊಂಡು, ಅರೆಗಣ್ಣು ಮುಚ್ಚಿ ಸ್ವಲ್ಪ ಹೊತ್ತು ನಿಲ್ಲುವರು.

ಇದಾದ ಮೇಲೆ, ಉಪಾಹಾರವನ್ನು (ಭಕ್ತರು ತಂದುಕೊಟ್ಟ ಹಣ್ಣುಗಳು) ಸ್ವೀಕರಿಸುವರು. ಕಾಳಿಮಂದಿರದ ವಿಷ್ಣುಗುಡಿಯಿಂದ ಕಳುಹಿಸಿದ ಸಿಹಿತಿಂಡಿಗಳನ್ನು ತಿನ್ನುವರು. ಅನಂತರ ಗಂಗಾಧರನು ಕೊಡುವ ಬೇಲ್ ಶರಬತ್ ಎಂಬ ಪ್ರಸಾದವನ್ನು ಕುಡಿಯುವರು.

ಆಮೇಲೆ ಸಣ್ಣ ಮಂಚವೊಂದರ ಮೇಲೆ ಕುಳಿತು ಗುಡಿಗುಡಿ ಸೇದುವರು.

೫೬

ಗಂಗಾಧರ ಗಂಗೋಪಾಧ್ಯಾಯರ ಜೊತೆಗೆ ಮಾತನಾಡುತ್ತ ಕುಳಿತಿದ್ದಾಗ, ಒಂದು ದಿನ ಭಕ್ತನೊಬ್ಬ ಬಂದು "ಎಲ್ಲರೂ ದೇಹವನ್ನು ಅಷ್ಟು ಎಚ್ಚರಿಕೆಯಿಂದ, ಕಾತರದಿಂದ ನೋಡಿಕೊಳ್ಳುತ್ತಾರಲ್ಲ, ಯಾಕೆ?" ಎಂದು ಕೇಳಿದ.

ಗಂಗಾಧರ ಗಂಗೋಪಾಧ್ಯಾಯ

ಶ್ರೀ ರಾಮಕೃಷ್ಣರು ಹೇಳಿದರು—

"ಹೌದಯ್ಯ, ನೋಡಿಕೊಳ್ಳಬೇಕು. ಅಚ್ಚಿನಲ್ಲಿ ಮೂರ್ತಿಯನ್ನು ಎರಕಹುಯ್ಯುವವನು ಏನು ಮಾಡುತ್ತಾನೆ ನೀನು ನೋಡಿಲ್ಲವೆ? ಮೂರ್ತಿ ಸರಿಯಾಗಿ ಹೊರಗೆ ಬರುವವರೆಗೂ ಅಚ್ಚನ್ನು ಜೋಪಾನ ಮಾಡುತ್ತಾನೆ. ಒಮ್ಮೆ, ಮೂರ್ತಿ ಹೊರಗೆ ಬಂದಿತೆಂದರೆ, ಅಚ್ಚು ಇದ್ದರೆ ಇರಲಿ, ಹೋದರೆ ಹೋಗಲಿ.

ದೇಹ ಅಚ್ಚಿದ್ದಂತೆ. ಅದರಲ್ಲಿ ಆತ್ಮಜ್ಞಾನ ಒಡಮೂಡಬೇಕು, ಆತ್ಮಸಾಕ್ಷಾತ್ಕಾರವಾಗಬೇಕು. ಅಲ್ಲಿಯವರೆಗೆ ದೇಹವನ್ನು ಜೋಪಾನಮಾಡಬೇಕು. ಅನಂತರ ಅದೇನಾದರೇನು?"

೫೭

ತಾರಕನಾಥ ಘೋಷಾಲರು (ಮುಂದೆ ಸ್ವಾಮಿ ಶಿವಾನಂದರೆಂದಾದವರು, ೧೮೫೪-೧೯೩೪) ಮೊದಲಿಗೆ ಬ್ರಾಹ್ಮೋ. ಕೇಶವಚಂದ್ರಸೇನರು ಶ್ರೀ ರಾಮಕೃಷ್ಣರ ಧರ್ಮತತ್ತ್ವವನ್ನು ಕುರಿತಂತೆ ಬರೆದ ಬರಹವನ್ನು ಓದಿ, ೧೮೮೦ರ ಜೂನ್‌ನಲ್ಲಿ ಶ್ರೀ ರಾಮಕೃಷ್ಣರನ್ನು ಕಂಡು ಅವರ ಸೇವೆಗೆ ನಿಂತರು. ಶ್ರೀ ರಾಮಕೃಷ್ಣರ ಬದುಕಿನಲ್ಲಿ ಕಡೆಯ ಮೂರು ವರ್ಷಗಳು ಅವರೊಂದಿಗೇ ಇದ್ದರು.

ತಾರಕನಾಥ ಘೋಷಾಲ್

ರಾತ್ರಿಯ ಕಾವಲು ಅವರದ್ದೇ. ಶ್ರೀ ರಾಮಕೃಷ್ಣರು ಎದ್ದು ಕೋಣೆಯ ದಕ್ಷಿಣ ವರಾಂಡಕ್ಕೆ ಬಂದು ಅಲ್ಲಿ ಉನ್ಮಾದ ಸ್ಥಿತಿಯಲ್ಲಿ ರಾತ್ರಿಯೆಲ್ಲ ಓಡಾಡುತ್ತಿರುವರು. ಮೈಮೇಲೆ ಬಟ್ಟೆಯಿಲ್ಲ, ಬಾಯಿಂದ ಏನೋ ಗೊಣಗುಟ್ಟುತ್ತಿರುವರು. ಆಗಾಗ ಕೋಣೆಯೊಳಗೆ ಬಂದು, "ತಾರಕ, ಮಲಗಿದ್ದೀಯೋ ಎದ್ದಿದ್ದೀಯೋ?" ಎಂದು

ಕೇಳುವರು. ತಾರಕ ಸಾಮಾನ್ಯವಾಗಿ ಎದ್ದೇ ಇರುತ್ತಿದ್ದರು. "ಸರಿ, ಸ್ವಲ್ಪ ರಾಮನಾಮ ಜಪ ಮಾಡು!" ಎನ್ನುವರು.

ತಾರಕನು ಜಪಮಾಡಿದರೆ, ಸಮಾಧಾನಗೊಂಡು ಉನ್ಮಾದ ಸ್ಥಿತಿಯಿಂದ ಇಳಿಯುವರು. ಮತ್ತೆ ಮಲಗಿ ಸುಮಾರು ಒಂದು ಗಂಟೆಯ ಕಾಲ ನಿದ್ರೆಮಾಡುವರು. ಮತ್ತೆ ಎದ್ದರೆ ಸಮಾಧಿಯ ಸ್ಥಿತಿ. ಕಾಳಿಯೊಂದಿಗೆ ಏನೇನೋ ಮಾತನಾಡುತ್ತಿರುವರು. ರಾತ್ರಿಯೆಲ್ಲ ಹೀಗೆಯೇ ಕಳೆಯುವುದು.

ತಾರಕನನ್ನೊಮ್ಮೆ ಅವರು ಕೇಳಿದರು— "ಅಯ್ಯಾ, ನಿನ್ನ ಎಣಿಕೆಯಲ್ಲಿ ದೇವರು ಸಾಕಾರನೋ ನಿರಾಕಾರನೋ?" ತಾರಕ ಹೇಳಿದ: "ಗುರುಗಳೇ, ನನಗೆ ನಿರಾಕಾರದಲ್ಲೇ ನಂಬಿಕೆ." ಶ್ರೀ ರಾಮಕೃಷ್ಣರು "ಹಾಗಾದರೆ ನಿನಗೆ ದೇವರ ಅದ್ಭುತ ಶಕ್ತಿಯಲ್ಲಿ ನಂಬಿಕೆಯಿಲ್ಲ. ಆ ಶಕ್ತಿಯಿಂದಾಗಿ ದೇವರು ಅನಂತ ಆಕಾರಗಳನ್ನು ತಳೆಯುತ್ತಾನೆ" ಎಂದರು.

೫೮

ಶ್ರೀ ರಾಮಕೃಷ್ಣರು ಹರಿನಾಥನೊಂದಿಗೆ ಮಾತನಾಡುತ್ತ ಕುಳಿತಿದ್ದಾಗ (೧೮೮೪ ಮೇ), ಹರಿನಾಥ ಕೇಳಿದ— "ಗುರುಗಳೇ ಜಗತ್ತಿನಲ್ಲಿ ಇಷ್ಟೊಂದು ಕಷ್ಟ ಏಕೆ?" ಅದಕ್ಕೆ ಶ್ರೀ ರಾಮಕೃಷ್ಣರು—

"ನೋಡು ಹರಿ, ಕಷ್ಟ ಮಾತ್ರ ನಿನ್ನ ಕಣ್ಣನ್ನು ಕುಕ್ಕುತ್ತದೆ. ಜಗತ್ತಿನಲ್ಲಿ ಸುಖ ಇಲ್ಲವೆ, ಹೇಳು. ಇದೊಂದು ಲೀಲೆ, ಒಂದು ಆಟ. ಅದರಲ್ಲಿ ಕಷ್ಟ-ಸುಖ, ಪುಣ್ಯ-ಪಾಪ, ಗೆಲುವು- ಸೋಲು, ಇಷ್ಟ-ಅನಿಷ್ಟ ಎಲ್ಲವೂ ಇರಬೇಕು. ಹಾಗಿರದಿದ್ದರೆ ಆಟ ಮುಂದರಿಯುವುದು ಹೇಗೆ? ಅದರಿಂದ ಮೋಜು ಯಾರಿಗೆ? ಒಮ್ಮೆಲೆ, ಸುಖ ಸಿಗುವುದಾದರೆ ಆಟವೇ ಮುಗಿದುಹೋಯಿತಲ್ಲ!

ಇನ್ನು ಈ ಆಟದಲ್ಲಿ ಅಜ್ಜಿಯೊಬ್ಬಳು ಅಡಗಿ ಕೂತಿದ್ದಾಳೆ. ಅವಳನ್ನು ಮುಟ್ಟಿದರೆ ಗೆದ್ದ ಹಾಗೆ, ಆಟ ಮುಗಿಯಿತು. ಆದರೆ ಅವಳು ಬಡಪೆಟ್ಟಿಗೆ ಸಿಗುವುದಿಲ್ಲ. ನಮ್ಮೆದುರು ಏಣಿಯನ್ನಿರಿಸುತ್ತಾಳೆ; ಮೇಲೇರುವುದಕ್ಕೆ. ಹಾವನ್ನು ಮುಂದಿಡುತ್ತಾಳೆ; ಅದರ ಬಾಲವನ್ನು ಹಿಡಿದು ಕೆಳಗೆ ಜಾರುವುದಕ್ಕೆ. ನಾವು ಹಾಕಿದ ದಾಳ, ಪಡೆದುಕೊಂಡ ಗರ ಇದಕ್ಕೆ ಕಾರಣವಾಗುತ್ತದೆ.

ಇಲ್ಲೇನು ಹೀಗೆಯೇ ಆಗಬೇಕು ಎನ್ನುವ ನಿಯಮವಿದೆಯೆ? ಮುಂದೇನು ಗರ ಎಂಬ ಅರಿವಾಗಲಿ ನಮಗಿರುತ್ತದೆಯೆ? ನಾವೇ ಗೆಲ್ಲಬೇಕು ಎಂದು ಹಟಹಿಡಿದು ಕೂಡುವುದಕ್ಕಾಗುತ್ತದೆಯೆ? ಆಟ ಆಡುವಾಗ ಬಂದದ್ದು ಬರಲಿ ಎಂಬ ನಿಶ್ಚಯವಿರಬೇಕು. ಮೋಸಮಾಡದೆ, ನಿಷ್ಠೆಯಿಂದ ಆಡಿದರೆ, ನಡುವೆ ಅಡಗಿ ಕೂತ ಅಜ್ಜಿಗೆ ಸಂತೋಷವಾಗುತ್ತದೆ. ನಾವು ಅವಳನ್ನು ಮುಟ್ಟುವುದಿರಲಿ, ಅವಳೇ ನಮ್ಮನ್ನು ಮುಟ್ಟಿಬಿಡುತ್ತಾಳೆ. ಇದೇ ಮುಕ್ತಿ! ಅಲ್ಲಿಗೆ ಆಟ ಮುಗಿಯಿತು."

೫೯

ಶ್ರೀ ರಾಮಕೃಷ್ಣರು ತಾರಕನೊಂದಿಗೆ ಮಾತನಾಡುತ್ತ—

"ನೋಡು ತಾರಕ, ಕೆಲವು ದಿನಗಳ ಹಿಂದೆ ಇರುಳಿನಲ್ಲಿ ಚಂದ್ರಮಂಡಲವನ್ನು ನೋಡುತ್ತ ಉದ್ಯಾನದಲ್ಲಿ ನಡೆದಾಡುತ್ತಿದ್ದೆ. ಮುಳ್ಳಿನ ಬೇಲಿಗೆ ಕಾಲು ತೊಡರಿಕೊಂಡು ಬಿದ್ದುಬಿಟ್ಟೆ. ಎಡಗೈ ಮಣಿಗಂಟು ಮುರಿಯಿತು. ಬಟ್ಟೆಯನ್ನು ಬಿಗಿಯಾಗಿ ಕಟ್ಟಿಬಿಟ್ಟರು. ಈ ಪರಿಸ್ಥಿತಿಯಲ್ಲಿ ತಾಯಿಯನ್ನು ನಾನು ನೆನೆಸಿಕೊಳ್ಳುವುದಾದರೂ ಹೇಗೆ? ಪಟ್ಟಿಯನ್ನು ಬಿಚ್ಚಿ, ಸಡಿಲ ಮಾಡಿ ಎಂದರೆ ಯಾರೂ ಕೇಳುವುದಿಲ್ಲ! ಸಾಕಾಗಿ ಹೋಗಿದೆ, ತಾರಕ, ಎಲ್ಲ ಕಟ್ಟುಗಳನ್ನೂ ಕಿತ್ತು ಹಾಕಿ ದೇಹದಿಂದ ಹಾಯಾಗಿ ಹೊರಗೆ ಹೋಗೋಣ ಎನ್ನಿಸುತ್ತದೆ. ಅಥವಾ, ಇರಲಿ ಬಿಡು, ಇವೆಲ್ಲ ತಾಯಿಯ ಆಟ. ಅವಳಿಗೆ ಸಂತೋಷವಾದರೆ ನಾನೇಕೆ ಅಡ್ಡಿ ಬರಲಿ?"

ತಾರಕ ಕೇಳಿದ "ಗುರುಗಳೇ, ಮನಸ್ಸು ಮಾಡಿದರೆ ನೀವೇ ಈ ಬೇನೆಯನ್ನು ಹೋಗಲಾಡಿಸಿಕೊಳ್ಳಬಹುದಲ್ಲ?"

ಶ್ರೀ ರಾಮಕೃಷ್ಣರು, "ಏನು ಹೇಳುತ್ತೀ, ತಾರಕ? ಬೇನೆ ಹೋಗಲಿ ಎಂದು ಮನಸ್ಸು ಮಾಡಿದರೆ ಅದು ಹೊರಟು ಹೋಗುತ್ತದೆಯೆ? ಬಂದದ್ದು ಇರಲಿ ಬಿಡು, ಒಳ್ಳೆಯದೇ ಆಯಿತು. ಈ ನೋವು, ಸಂಕಟ ಇವೆಲ್ಲ ಇದ್ದರೆ ಹರಟೆ ಹೊಡೆಯುವ ಮಂದಿ ಹತ್ತಿರ ಬರುವುದಿಲ್ಲ. ನನ್ನ ಪಾಡಿಗೆ ನನ್ನನ್ನು ಇರಲು ಬಿಡುತ್ತಾರೆ.

ಅಮ್ಮ, ಏನು ಉಪಾಯ ಕಂಡುಹಿಡಿದಿದ್ದೀಯೆ? ನೀನೇನು ಹುಟ್ಟಲಿಲ್ಲ, ಬೆಳೆಯಲಿಲ್ಲ. ನಿನಗೇನು ದೇಹವಿಲ್ಲ. ಆದರೂ ದೇಹವುಳ್ಳವರ ಪಾಡು ನಿನಗೆ ಹೇಗೆ ತಿಳಿಯಿತು?"

೬೦

ಬಾಬುರಾಮ ಘೋಷ್ (ಮುಂದೆ ಸ್ವಾಮಿ ಪ್ರೇಮಾನಂದರು, ೧೮೬೧-೧೯೨೦) ಶ್ರೀ ರಾಮಕೃಷ್ಣರನ್ನು ೧೮೮೪ರ ಸುಮಾರಿಗೆ ಕಂಡನು. ಆಗ ಅವನಿಗೆ ಸುಮಾರು ಇಪ್ಪತ್ತು ವರ್ಷಗಳು. ಬಂದವನೆ, "ಗುರುಗಳೇ, ನನಗೆ ಸಮಾಧಿಯ ಅನುಭವವನ್ನು ಅನುಗ್ರಹಿಸಿ" ಎಂದು ಕೇಳಿದ. ಮತ್ತೆ ಮತ್ತೆ ಕೇಳುತ್ತಲೆ ಬಂದ.



ಬಾಬುರಾಮ ಘೋಷ್

ಶ್ರೀ ರಾಮಕೃಷ್ಣರು "ಸಮಾಧಿಯನ್ನು ನೀಡುವ ಸಾಮರ್ಥ್ಯ ನನಗಿದೆಯೆ? ನನ್ನ ಇಚ್ಛೆಯಿಂದ ಆಗುವುದಲ್ಲ ಅದು. ತಾಳು, ತಾಯಿಯನ್ನೇ ಕೇಳಿಕೊಳ್ಳುತ್ತೇನೆ. ಆಕೆ ಒಪ್ಪಿದರೆ ಮಾತ್ರ ಆದೀತು!" ಎಂದು ಹೇಳಿ, ತಾಯಿಯನ್ನು ಕರೆದು ಅತ್ತರು. "ಇವನಿಗೆ ಸ್ವಲ್ಪ ಸಮಾಧಿಯ ಅನುಭವವನ್ನು ಕರುಣಿಸು, ಅಮ್ಮಾ" ಎಂದು ಅಂಗಲಾಚಿ ಬೇಡಿಕೊಂಡರು.

ಆಗ ಅವರಿಗೆ ತಾಯಿ ಹೇಳಿದಂತೆ ಆಯಿತು—"ಇಲ್ಲ, ಅವನಿಗೆ ಸಮಾಧಿಯ ಯೋಗ ಇಲ್ಲ. ಜ್ಞಾನವನ್ನು ನೀಡುತ್ತೇನೆ!"

೬೧

ನಾಗೇಂದ್ರನಾಥ ಗುಪ್ತ (೧೮೬೧-೧೯೪೦) ಕೇಶವಚಂದ್ರಸೇನರಿಗೆ ಪ್ರಿಯಮಿತ್ರ. ಕೇಶವಚಂದ್ರರು ಕೂಚ್‌ಬಿಹಾರದ ಮಹಾರಾಜ ನೃಪೇಂದ್ರ ನಾರಾಯಣ ಭೂಪನ ಮಾವನಾದ ಹೊಸದರಲ್ಲಿ, ರಾಜನ ಸ್ಟೀಮ್‌ಯಾಕ್ಟ್ ಮೇಲೆ ಶ್ರೀ ರಾಮಕೃಷ್ಣರಿಗೆ ಗಂಗಾನದಿಯ ಮೇಲೆ ನೌಕಾವಿಹಾರವನ್ನೇರ್ಪಡಿಸಬೇಕೆಂಬ ಮನಸ್ಸಾಯಿತು. ಅನೇಕ ಮಂದಿ ಮಿತ್ರರು, ಅಭಿಮಾನಿಗಳನ್ನು ಕೂಡಿಕೊಂಡು ಯಾಕ್ಟ್‌ನಲ್ಲಿ ಹೊರಟರು. ಇವರಲ್ಲಿ ನಾಗೇಂದ್ರನಾಥನೂ ಸೇರಿದ್ದ.

ನದಿಯ ಮೇಲೇ ದಕ್ಷಿಣೇಶ್ವರಕ್ಕೆ ನೌಕೆಯು ಬಂದಾಗ, ಶ್ರೀ ರಾಮಕೃಷ್ಣರಿಗೆ ಮೊದಲೇ ತಿಳಿದಿದ್ದಿತಾಗಿ ಅವರು ಕಾಯುತ್ತಿದ್ದರು. ಅವರು ನೌಕೆಯನ್ನು ಹತ್ತುತ್ತಲೇ ಅವರ ಸೋದರಳಿಯ ಹೃದಯರಾಮನು ಅಲ್ಲಿದ್ದವರಿಗೆಲ್ಲ ಅವಲಕ್ಕಿ-ಸಂದೇಶ್‌ಗಳನ್ನು ಹಂಚಿದ. ಅನಂತರ ಎಲ್ಲರೂ ಎದ್ದು ಆದರದಿಂದ ಶ್ರೀ ರಾಮಕೃಷ್ಣರನ್ನು ಕೇಶವಚಂದ್ರರ ಪಕ್ಕದಲ್ಲೇ ಕುಳ್ಳಿರಿಸಿದರು.

ನೌಕಾವಿಹಾರ ಮುಗಿಸಿ, ದಕ್ಷಿಣೇಶ್ವರದಲ್ಲಿ ರಾಮಕೃಷ್ಣರನ್ನು ಬಿಟ್ಟು, ಕಲ್ಕತ್ತೆಯನ್ನು ಮುಟ್ಟಲು ರಾತ್ರಿಯೇ ಆಗಿದ್ದಿತು. ಎಂದರೆ ಸುಮಾರು ಎಂಟು ಗಂಟೆಗಳ ಕಾಲ. ನಾಗೇಂದ್ರನಾಥನು ನಲವತ್ತೈದು ವರ್ಷಗಳಾದ ಮೇಲೂ ನೆನಪಿನಲ್ಲಿ ಉಳಿಸಿಕೊಂಡಿದ್ದನು. ಎಂಟು ಗಂಟೆಗಳೂ ಎಡೆಬಿಡದೆ ಮಾತನಾಡಿದ ಒಬ್ಬರೇ ಒಬ್ಬರು ಎಂದರೆ ಶ್ರೀ ರಾಮಕೃಷ್ಣರು. ಬೇರೆ ಯಾರೂ ಸೊಲ್ಲೆತ್ತಲಿಲ್ಲ. ಮಾತುಗಾರರಾದ ಕೇಶವಚಂದ್ರರೂ ಸುಮ್ಮನೆ ಕೇಳುತ್ತ ಕುಳಿತಿದ್ದರು.

ಎಂಟು-ಹತ್ತು ನಿಮಿಷಗಳು ಸಮಾಧಿಗೆ ಸಂದುದನ್ನು ಬಿಟ್ಟರೆ ಉಳಿದೆಲ್ಲ ಕಾಲವೂ ಶ್ರೀ ರಾಮಕೃಷ್ಣರದ್ದೇ ಮಾತು. ತಿಳಿಯಾದ ಬಂಗಾಳಿಯಲ್ಲಿ ಪದಗಳಿಗೆ ಹುಡುಕಾಡದೆ ಭಾವನೆಗಳಿಗೆ ತಡುಕಾಡದೆ, ಗಂಗಾನದಿಯು ಹರಿಯುವಂತೆಯೇ ಅವರ ಮಾತು! ಆಲೋಚನೆಗಳು ಒಂದಾದ ಮೇಲೊಂದು ತಾವಾಗಿ ಬಂದೊದಗುತ್ತಿದ್ದುವು. ಎಲ್ಲವೂ ಅಧ್ಯಾತ್ಮಕ್ಕೆ ಸಂಬಂಧಿಸಿದ ಮಾತೇ. ಹರಟೆ ಎಂಬುದರ ಗಾಳಿಗಂಧವೂ ಇರದು. ಮತ್ತೆ, ಅವರ ಸುಮಧುರ ಧ್ವನಿ, ಮಾತನಾಡುವಾಗ ಹಾವಭಾವಗಳು, ಪರವಶತೆ ಎಲ್ಲರನ್ನೂ ಮುಗ್ಧರನ್ನಾಗಿಸಿಬಿಟ್ಟುವು.

ನಡುವೆ ಒಂದು ನಿಮಿಷವೂ ಬಿಡದೆ, ಎಂಟು ಗಂಟೆಗಳು ಮಾತನಾಡಿದರೆಂದರೆ ಅದೇನು ಸಿದ್ಧಿ?

ನಾಗೇಂದ್ರನಾಥನಿಗೆ ದಿಗ್ಭ್ರಮೆಯಾಯಿತು. ಕುಳಿತಿದ್ದವರೆಲ್ಲ ಸಂತೋಷಪಟ್ಟರು; ಯಾರಾಗಲಿ ಬೇಸರಗೊಳ್ಳಲಿಲ್ಲ. ವಿಷಯ ಪರಮಾರ್ಥವಾದರೂ, ಕೇಳುತ್ತಿದ್ದವರೆಲ್ಲ ಲೌಕಿಕರೇ ಆದರೂ, ಎಲ್ಲರಿಗೂ ಅದೊಂದು ಅಪೂರ್ವವಾದ ಅನುಭವ. ಕೇಶವಚಂದ್ರರ ಉದ್ದೇಶ ಶ್ರೀ ರಾಮಕೃಷ್ಣರಿಗೊಂದು ಹೊಸ ಅನುಭವವನ್ನೊದಗಿಸುವುದಾಗಿದ್ದಿತು. ಆದರೆ ಆದದ್ದು ತಮಗೇ ಹೊಸ ಅನುಭವ!

೬೨

ಶ್ರೀ ರಾಮಕೃಷ್ಣರು ಶರತ್‌ಗೆ (ಮುಂದೆ ಸಾರದಾನಂದ, ೧೮೬೫-೧೯೨೭) ಹೇಳಿದ್ದು (ತಾವೇ ಕಣ್ಣು ಮುಚ್ಚಿಕೂತು)—

"ನೋಡು, ಧ್ಯಾನ ಮಾಡುವ ಪರಿ ಇದು. ಪದ್ಮಾಸನದಲ್ಲಿ ಕೂಡು. ಎಡಗೈ ಅಂಗೈ ಮೇಲೆ ಬಲಗೈ ಹಿಂಭಾಗವನ್ನು ಇಡು. ಅನಂತರ ಎರಡೂ ಕೈಗಳನ್ನು

ಶರತ್ ಚಕ್ರವರ್ತಿ

ನಿಧಾನವಾಗಿ ಎದೆಯ ಮಟ್ಟಕ್ಕೆ ಎತ್ತು. ಸಾಕಾರದ ದೇವರ ಧ್ಯಾನಕ್ಕೆ ಇದು ಅತ್ಯುತ್ತಮವಾದ ನಿಲುವು.

ಆಮೇಲೆ ಅದೇ ಆಸನದಲ್ಲಿ ಕೂತು ಬಲಗೈಯನ್ನು ಬಲಮಂಡಿಯ ಮೇಲೆ, ಎಡಗೈಯನ್ನು ಎಡಮಂಡಿಯ ಮೇಲೆ ಇರಿಸಿಕೋ. ಒಂದೊಂದು ಕೈ

ತೋರುಬೆರಳಿನಿಂದ ಹೆಬ್ಬೆರಳ ತುದಿಯನ್ನು ಮುಟ್ಟು; ಉಳಿದ ಬೆರಳುಗಳನ್ನು ನೆಟ್ಟಗೆ ಮಾಡಿಕೋ; ಚಾಚಿಕೋ.

ದೃಷ್ಟಿಯನ್ನು ಹುಬ್ಬುಗಳ ನಡುವೆ ನೆಲೆಗೊಳ್ಳುವಂತೆ ಮಾಡು. ಇದು ನಿರಾಕಾರ ದೇವರ ಧ್ಯಾನಕ್ಕೆ ಅನುಕೂಲವಾಗುತ್ತದೆ.'' ಇಷ್ಟು ಹೇಳಿ—

''ಹೆಚ್ಚೇನು ಹೇಳಲಾರೆನಪ್ಪಾ! ಹೀಗೆ ಕೂತೆನೆಂದರೆ ಸಾಕು, ಒಡನೆಯೇ ಮನಸ್ಸು ಭಾವಸಮಾಧಿಗೆ ಸರಿದುಬಿಡುತ್ತದೆ. ಪ್ರಾಣವಾಯುವು ಮೇಲೆದ್ದು ಗಂಟಲ ವ್ರಣಕ್ಕೆ ಬಡಿಯುತ್ತದೆ!''

೬೩

ಶ್ರೀ ರಾಮಕೃಷ್ಣರು ಕಾಶೀಪುರದ ಮನೆಯಲ್ಲಿದ್ದುಕೊಂಡು ಗಂಟಲು ಬೇನೆಗೆ ಚಿಕಿತ್ಸೆ ಪಡೆಯುತ್ತಿರುವಾಗ, ಒಮ್ಮೆ ತುಂಬ ಬೇಸರಗೊಂಡಿದ್ದರು. ರಾಮಚಂದ್ರ ದತ್ತರ ಸಂಗಡಿಗನೊಬ್ಬ, ಅವರು ೧೮೫೫ರಲ್ಲಿ ದಕ್ಷಿಣೇಶ್ವರ ಸೇರಿ ಅಲ್ಲಿಂದ ಇಲ್ಲಿಯವರೆಗೆ (೧೮೮೫ರವರೆಗೆ ಮೂವತ್ತು ವರ್ಷಗಳು) ಅಲ್ಲೇ ಕಾಳಿಯ ಸನ್ನಿಧಿಯಲ್ಲಿದ್ದು, ಈಗ ಊರನ್ನೂ ಗುಡಿಯನ್ನೂ ಬಿಟ್ಟುಬಂದುದು ಅವರ ಬೇಸರಕ್ಕೆ ಕಾರಣವಿದ್ದೀತೆಂದು ಬಗೆದು, ಅವರನ್ನು ಕೇಳಿದರು—

"ಗುರುಗಳೇ, ದಕ್ಷಿಣೇಶ್ವರಕ್ಕೆ ಹಿಂದಿರುಗಿ ಹೋಗೋಣವೆ?" ಅದಕ್ಕೆ ಶ್ರೀ ರಾಮಕೃಷ್ಣರು—

"ಏಕೆ? ಇಲ್ಲಿ ಏನಾಗಿದೆ?"

"ಅಲ್ಲಿ ಜಗನ್ಮಾತೆ ಕಾಳಿಯಿದ್ದಾಳಲ್ಲವೆ?"

"ಓ, ಜಗನ್ಮಾತೆ ಅಲ್ಲಿ ಮಾತ್ರವೇ ಇರುವುದೋ? ಇಲ್ಲಿಲ್ಲವೆಂದು ಭಾವಿಸಿದೆಯಾ? ಅವಳು ಇಲ್ಲದೆ ಇರುವ ಎಡೆ ಯಾವುದಯ್ಯಾ?"

ದಕ್ಷಿಣೇಶ್ವರವೆಂಬ ವ್ಯಾಮೋಹ ಅವರಿಗೇನಿರಲಿಲ್ಲ.

೬೪

ಕಡೆಯ ದಿನಗಳು. ವೈದ್ಯರು ಕೈಗೊಂಡ ಚಿಕಿತ್ಸೆ ಯಾವುದೂ ಪ್ರಯೋಜನಕ್ಕೆ ಬರಲಿಲ್ಲ. ಆಗ ಪಂಡಿತ ಶಶಧರ ತರ್ಕಚೂಡಾಮಣಿ (೧೮೫೦-೧೯೨೮)ಯೆಂಬ ಭಕ್ತರು ಶ್ರೀ ರಾಮಕೃಷ್ಣರ ಹತ್ತಿರ ಬಂದು, "ಗುರುಗಳೇ, ಉಳಿದಿರುವುದೊಂದೇ



ಪಂಡಿತ ಶಶಧರ ತರ್ಕಚೂಡಾಮಣಿ

ಉಪಾಯ. ನೀವೇ ನಿಮ್ಮ ರೋಗವನ್ನು ನಿವಾರಿಸಿಕೊಳ್ಳಬೇಕು. ನಿಮ್ಮ ಮನಸ್ಸನ್ನು ಗಂಟಲ ವ್ರಣದ ಮೇಲೆ ಕೇಂದ್ರೀಕರಿಸಿ, ಸಮಾಧಿಯಲ್ಲಿ ನಿಂತರೆ ಗುಣವಾದೀತೋ ಏನೋ!" ಎಂದರು.

ಅದಕ್ಕೆ ಶ್ರೀ ರಾಮಕೃಷ್ಣರು, ತಾವು ಮಾತನಾಡುವ ಸ್ಥಿತಿಯಲ್ಲಿರದಿದ್ದರೂ, ಪಿಸುಗುಟ್ಟುವ ದನಿಯಲ್ಲಿ "ಏನು ಹೇಳುತ್ತೀ, ಶಶಧರ? ಸಮಾಧಿಯಿಂದ ನನ್ನ ಬೇನೆಯನ್ನು ಗುಣಪಡಿಸಿಕೊಳ್ಳಲೆ? ಎಲ್ಲಿಯಾದರೂ ಉಂಟೆ? ನನ್ನ ಮನಸ್ಸನ್ನು ಆಗಲೇ ದೇವರಿಗೆ ಒಪ್ಪಿಸಿಯಾಗಿದೆ. ಈಗ ಅದನ್ನು ಹಿಂದಕ್ಕೆ ತೆಗೆದುಕೊಂಡು ಈ ದರಿದ್ರದೇಹದ ಮೇಲೆ ಇರಿಸಲೆ? ಸಮಾಧಿಯನ್ನು ಅಷ್ಟು ನಿಕೃಷ್ಟವಾಗಿ ಕಾಣುತ್ತೀಯಾ?" ಎಂದು ದಂಡಿಸಿದರು.

೬೫

ಕಡೆಯ ದಿನಗಳಲ್ಲೊಂದು ದಿನ. ೧೮೮೬ರ ಜನವರಿ ಮೊದಲ ದಿನ. ಠಾಕುರರು ಕಾಶೀಪುರದ ಉದ್ಯಾನಭವನದಲ್ಲೆ ಇದ್ದರು. ಆ ದಿನ ಬೆಳಿಗ್ಗೆ ಅವರನ್ನು ಕಾಣಲು ಹಲಧಾರಿ ಬಂದಾಗ "ಹಲಧಾರಿ, ಈ ಹೊತ್ತು ಆರೋಗ್ಯ ಸುಧಾರಿಸಿದಂತಿದೆ. ಗೆಲುವಾಗಿದ್ದೇನೆ. ತೋಟದಲ್ಲಿ ಸುತ್ತಾಡಿ ಬರೋಣ ಬಾ!" ಎಂದರು. ಹಲಧಾರಿಯು "ಹೌದು, ನನಗೂ ಹಾಗೇ ತೋರುತ್ತಿದೆ, ಬನ್ನಿ ಹೋಗೋಣ" ಎಂದು ಅವರಿಗೆ ಸ್ವಲ್ಪ ಬೆಚ್ಚನೆಯ ಉಡುಪುಗಳನ್ನು ತೊಡಿಸಿ, ಕೈಯಲ್ಲಿ ಕೋಲು ಕೊಟ್ಟು, ಮೆತ್ತಗೆ ನಡೆಸಿಕೊಂಡು, ಮಹಡಿಯಿಳಿದು ಹೊರಗೆ ಕರೆತಂದ.

ಶಿಷ್ಯರೆಲ್ಲ ಅಲ್ಲಿ ನೆರೆದಿದ್ದರು. ಎಲ್ಲರೂ ಅವರ ಮೇಲೆ ಹೂಮಳೆಗರೆದು ಸುತ್ತ ಮುತ್ತಿಕೊಂಡರು. ಎಲ್ಲರಿಗೂ ಅವರು ಆಶೀರ್ವಾದ ಮಾಡಿದರು. ಹಲಧಾರಿ ಅವರ ಹಿಂದೆಯೇ ನಿಂತಿದ್ದ. "ಇವರಿಂದ ಎಲ್ಲರಿಗೂ ಆಧ್ಯಾತ್ಮಿಕ ಲಾಭವಾಗುತ್ತಿದೆ. ನಾನೋ ಇದ್ದಂತೆಯೇ ಇದ್ದೇನೆ! ನೀರಿನ ತಂಬಿಗೆ, ಮಡಿ ಬಟ್ಟೆ ಹಿಡಿದು ಅವರ ಹಿಂದೆ ಹೋದದ್ದೇ ಲಾಭ" ಎನ್ನುವ ಯೋಚನೆ ಅವನ ಮನಸ್ಸಿನಲ್ಲಿ ಸುಳಿಯಿತು. ಒಡನೆಯೇ ಠಾಕುರರು "ಹಲಧಾರಿ, ಮುಂದೆ ಬಾ" ಎಂದು ಕರೆದರು. ಅವನು ಹೊದ್ದಿದ್ದ ಶಾಲನ್ನು ಸ್ವಲ್ಪ ಸರಿಸಿ, ಅವನ ಎದೆಯನ್ನು ಮುಟ್ಟಿದರು.

ಇದ್ದಕ್ಕಿದ್ದಂತೆ ಅವನೆದುರು ಜಾಜ್ವಲ್ಯಮಾನವಾದ ಒಂದು ಪ್ರಕಾಶ ತೋರಿಕೊಂಡಿತು. ಅದರಲ್ಲಿ ಅವನು ದಿನವೂ ಧ್ಯಾನಕಾಲದಲ್ಲಿ ಚಿತ್ರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ತನ್ನ ಇಷ್ಟದೈವದ ಸಂಪೂರ್ಣ, ಸ್ಪಷ್ಟ, ಜೀವಂತ ರೂಪ ಕಾಣಿಸಿಕೊಂಡಿತು. ಅಲ್ಲಿಯವರೆಗೆ, ಅವನೆದುರು ತೋರಿಕೊಳ್ಳುತ್ತಿದ್ದ ರೂಪ ಅಪೂರ್ಣವಾಗಿರುತ್ತಿತ್ತು, ಅಸ್ಪಷ್ಟವಾಗಿರುತ್ತಿತ್ತು. ಪಾದಗಳು ಕಂಡಾಗ, ಮುಖಮಂಡಲ ಕಾಣುತ್ತಿರಲಿಲ್ಲ; ಕಿರೀಟ ಗೋಚರಿಸಿದಾಗ, ಪೀಠವನ್ನು ಕಾಣಲಾಗುತ್ತಿರಲಿಲ್ಲ. ಆದರೆ ಠಾಕುರರು ನೀಡಿದ ಬೆಳಕಿನಲ್ಲಿ ಇಷ್ಟದೈವವು ಬರಿಯ ಚಿತ್ರದಂತೆ ಅಲ್ಲದೆ, ಜೀವಂತ ಮೂರ್ತಿಯಂತೆ ಕಂಗೊಳಿಸಿತ್ತು.

ಹಲಧಾರಿಯಲ್ಲಿ ಕೃತಾರ್ಥತೆ ಮೂಡಿತು.

೬೬

ಶ್ರೀ ರಾಮಕೃಷ್ಣರ ಕಡೆಯ ದಿನಗಳಲ್ಲಿ ಅವರ ವ್ರಣವನ್ನು ಬೇವಿನ ಎಲೆಯನ್ನು ಹಾಕಿ ಕುದಿಸಿದ ನೀರಲ್ಲಿ ತೊಳೆಯುವುದು ಗೋಪಾಲದಾದಾ ಕೆಲಸ. ದಿನವೂ ಶ್ರದ್ಧೆಯಿಂದ, ಎಚ್ಚರಿಕೆಯಿಂದ, ಮೃದುವಾಗಿ ಮಾಡುತ್ತಿದ್ದ.

ಒಂದು ದಿನ, ಕೈ ತಪ್ಪಿ ವ್ರಣದ ಮೇಲೇ ಹೋಯಿತು. ಶ್ರೀ ರಾಮಕೃಷ್ಣರು ನೋವಿನಿಂದ ಅರಚಿಕೊಂಡರು. ಗೋಪಾಲದಾದಾ "ನಾನೇನು ಮಾಡಲಿ ಗುರುಗಳೇ? ಕೈ ತಪ್ಪಿತು. ಮತ್ತೆ ವ್ರಣದ ಮೇಲೆ ಕೈಯಿಡುವುದಿಲ್ಲ" ಎಂದ.

ಅದಕ್ಕೆ ಶ್ರೀ ರಾಮಕೃಷ್ಣರು "ಇಲ್ಲಪ್ಪ, ನಿನ್ನ ಕೆಲಸ ನೀನು ಮಾಡು. ಅದನ್ನು ತೊಳೆಯದಿದ್ದರೆ ಹೇಗೆ? ಅದರ ಮೇಲೆ ಕೈಯಾಡಿಸದೆ ತೊಳೆಯುವುದು ಹೇಗೆ? ಈಗ ನೋಡು, ನನ್ನ ಮನಸ್ಸನ್ನು ವ್ರಣದಿಂದ ದೂರವಿರಿಸಿಕೊಂಡುಬಿಡುತ್ತೇನೆ! ನೀನು ಏನು ಬೇಕಾದರೂ ಮಾಡಿಕೋ. ನನಗೆ ನೋವಿನ ಅನುಭವವಂತೂ ಇರುವುದಿಲ್ಲ!"

ಮುಂದೆ ವ್ರಣದ ಆರೈಕೆ ಮುಗಿಯುವವರೆಗೆ ನಗು ನಗುತ್ತಲೇ ಇದ್ದರು!

೬೭

ಶ್ರೀ ರಾಮಕೃಷ್ಣರು ತೀರಿಕೊಳ್ಳುವ ಹಿಂದಿನ ದಿನ. ಮಧ್ಯಾಹ್ನ, ನೀರವ ವಾತಾವರಣ.

ಇದ್ದಕ್ಕಿದ್ದಂತೆ ಶ್ರೀ ಶಾರದಾದೇವಿ, ಲಕ್ಷ್ಮಿ ಮತ್ತು ಗೊಲಾಪ್‌ಮಾ ಮೂವರೂ ಶ್ರೀ ರಾಮಕೃಷ್ಣರು ಮಲಗಿದ್ದ ಕೋಣೆಗೆ ಬಂದರು. ಶ್ರೀ ರಾಮಕೃಷ್ಣರು ಅವರನ್ನು ನೋಡಿ ಗೆಲುವಾದರು.

"ನೋಡಿ, ಇದೊಂದು ನಾಟಕ. ನಿಮ್ಮನ್ನೆಲ್ಲ ಇಲ್ಲಿ ಒಟ್ಟಿಗೆ ಸೇರಿಸಲು ಹೂಡಿರುವ ಒಂದು ಸಂಚು ಈ ಬೇನೆ. ದೇವರ ನಾಟಕದಲ್ಲಿ ಏನೇನು ಒಳತಂತ್ರಗಳಿವೆಯೋ, ತಿಳಿದವರು ಯಾರು?" ಎಂದರು.

ಆಗ ಶ್ರೀ ಶಾರದಾದೇವಿಯ ಕಣ್ಣೀರನ್ನು ಕಂಡು, "ನೋಡಿ, ಈಗ ನಾನು ತುಂಬ ದೂರ ಹೋಗುತ್ತಿದ್ದೇನೆ. ಎಲ್ಲಿಗೆ ಹೋಗುತ್ತಿರುವೆನೆಂಬುದು ನನಗೇ ತಿಳಿಯದು! ಹಿಂದಿರುಗಿಯಂತೂ ಬರಲಾರೆ! ಆದರೆ ಯೋಚನೆ ಮಾಡಬೇಡಿ. ನನ್ನ ಈ ಹುಡುಗರಿದ್ದಾರಲ್ಲ, ಅವರು ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ನನಗಿಂತ ಹೆಚ್ಚು ಆದರದಿಂದ ನೋಡಿಕೊಳ್ಳುತ್ತಾರೆ" ಎಂದು ಸಮಾಧಾನ ಮಾಡಿದರು.

೬೮

ತೀರಿಕೊಳ್ಳುವ ಹಿಂದಿನ ದಿನ ಅವರು ತೀರ ದುರ್ಬಲರಾಗಿದ್ದರು. ಕಲ್ಕತ್ತೆಯಲ್ಲಿ ಡಾ॥ ರಾಮಚಂದ್ರ ದತ್ತ ಎಂಬ ಭಕ್ತ ಪಾಶ್ಚಾತ್ಯ ಸಂಸ್ಕೃತಿಯ ಬಾಳನ್ನೆ ಬಾಳುತ್ತಿದ್ದ. ಅವನು ಬಂದು ಶ್ರೀ ರಾಮಕೃಷ್ಣರಿಗೆ "ತುಂಬ ನಿಃಶಕ್ತರಾಗಿದ್ದೀರಿ. ಚಿಕನ್ ಸೂಪ್ (ಕೋಳಿಮರಿ ಸಾರು) ಕುಡಿಯಬೇಕು" ಎಂದು ಸೂಚಿಸಿದ.

ಅದಕ್ಕೆ ಅವರು "ಅಯ್ಯೊ, ಅವೆಲ್ಲ ನನಗೆ ಅಭ್ಯಾಸವೇ ಇಲ್ಲವಪ್ಪ!" ಎಂದುಬಿಟ್ಟರು. ದತ್ತ ಬಲವಂತ ಮಾಡಿದ— "ನೀವು ಕುಡಿಯದಿದ್ದರೆ ಪ್ರಾಣಕ್ಕೇ ಅಪಾಯವಿದೆ! ಬದುಕುವುದು ಮುಖ್ಯವೋ, ಕೋಳಿಯ ಸಾರು ಕುಡಿಯದಿರುವುದು ಮುಖ್ಯವೋ? ಕುಲಾಚಾರವನ್ನು ಅತ್ತ ಕಟ್ಟಿಡಿ; ಪ್ರಸ್ತುತ ಅಗತ್ಯವಾದುದನ್ನು ಮಾಡಿ!" ಎಂದೆಲ್ಲ ಉಪದೇಶ ಮಾಡಿದ.

ಶ್ರೀ ರಾಮಕೃಷ್ಣರು ಅವನು ಹೇಳಿದ್ದನ್ನೆಲ್ಲ ಕೇಳಿಸಿಕೊಂಡು, "ಅಯ್ಯಾ, ಕುಲಾಚಾರವೂ ಮುಖ್ಯ, ಅದು ಕೆಡಬಾರದು. ಇರಲಿ, ಯೋಚನೆ ಮಾಡೋಣ. ನಾಳೆ ಹೇಳುವೆ" ಎಂದು ಹೇಳಿ ಪಕ್ಕಕ್ಕೆ ತಿರುಗಿಕೊಂಡರು. ಹೇಳಲು ನಾಳೆ ಅವರಿಗೆ ಬರಲೇ ಇಲ್ಲ!

ಅಂಕಿತ ಪುಸ್ತಕ

53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-4 ☎ 2661 7100 / 2661 7755

ನಮ್ಮ ಪ್ರಕಟಣೆಗಳು

1.	ರಂಗ ವಿಹಾರ (ರಂಗ ಸಮೀಕ್ಷೆ) ಪ್ರಕಾಶ್ ಕಂಬತ್ತಳ್ಳಿ	40/-
2.	ಪ್ರತಿಕ್ರಿಯೆ (ವಿಮರ್ಶೆ) / ಎಚ್.ಎನ್. ಮುರಳೀಧರ	35/-
3.	ಕಲಾಕ್ಷೇತ್ರದ ಮೆಟ್ಟಿಲ ಮಹಿಮೆ (ರಂಗವಿಮರ್ಶೆ) / ಸೂತ್ರಧಾರ ರಾಮಯ್ಯ	40/-
4.	ಮನಸ್ಸಿಗೆಷ್ಟು ಮುಖಗಳು (ನಾಟಕ) / ಪ್ರಕಾಶ್ ಕಂಬತ್ತಳ್ಳಿ	25/-
5.	ಬಳ್ಳಿ ಸಾಲು (ವಿಮರ್ಶೆ) / ಕಾ.ತ. ಚಿಕ್ಕಣ್ಣ	50/-
6.	ನಾಳೆ ಯಾರಿಗೂ ಇಲ್ಲ ಮತ್ತು ಇತರ ನಾಟಕಗಳು / ಚಿ.ಶ್ರೀನಿವಾಸರಾಜು	40/-
7.	ಈ ಪರಿಯ ಬದುಕು (ನಾಟಕ) / ಜಿ.ಎನ್. ನರಸಿಂಹಮೂರ್ತಿ	35/-
8.	ಅನ್ವೇಷಕರು ಮತ್ತು ಇತರ ನಾಟಕಗಳು / ಪ್ರಕಾಶ್ ಕಂಬತ್ತಳ್ಳಿ	30/-
9.	ಬೆನಕನ ಕೆರೆ ಮತ್ತು ಶುನಶ್ಯೇಪ (ನಾಟಕಗಳು) / ನಿಸರ್ಗಪ್ರಿಯ	40/-
10.	ಹಾಲು ಜೇನು (ಸಮಗ್ರ ಕಾವ್ಯ) / ಮಾಲತಿ ಮೊಯಿಲಿ, ವೀರಪ್ಪ ಮೊಯಿಲಿ	100/-
11.	ಹಾತಿರಾಂ ಬಾವಾಜಿ (ಕಾದಂಬರಿ) / ಜಿ. ಹೀರಾನಾಯ್ಕ್	60/-
12.	ಹಳಿಯ ಮೇಲಿನ ಸದ್ದು (ನಾಟಕ) / ಚಿ. ಶ್ರೀನಿವಾಸರಾಜು	20/-
13.	ಜುಂಜಪ್ಪ (ನಾಟಕ) / ನಿಸರ್ಗಪ್ರಿಯ	30/-
14.	ಮೀಡಿಯ (ನಾಟಕ) / ಡಾ॥ ಕೆ. ಮರುಳಸಿದ್ಧಪ್ಪ	40/-
15.	ಅಕ್ಕತಂಗಿಯರು (ನಾಟಕ) / ಓ.ಎಲ್. ನಾಗಭೂಷಣ ಸ್ವಾಮಿ	40/-
16.	ಬದಿರು ಮೆಳೆ ಕಂಟಿಯಲಿ (ನೂರು ಕವನಗಳು) / ಬಿ.ಟಿ. ಲಲಿತಾನಾಯಕ್	80/-
17.	ಸ್ವಾತಂತ್ರ್ಯದ ಅಗ್ನಿದಿವ್ಯ / ಎನ್.ಪಿ. ಶಂಕರನಾರಾಯಣ ರಾವ್	40/-
18.	ನುಡಿ ಕಾಣಿಕೆ (ಭಾಷಣಗಳು) / ಎಂ. ವೀರಪ್ಪ ಮೊಯಿಲಿ	125/-
19.	1084ರ ತಾಯಿ (ಕಾದಂಬರಿ) / ಮಹಾಶ್ವೇತಾದೇವಿ, ಅನು: ಎಚ್.ಎಸ್. ಶ್ರೀಮತಿ	60/-
20.	ಚಿನ್ನದ ಸರಿಗೆ (ಕಥಾಸಂಕಲನ) / ಯು.ವಿ. ತಾರಿಣಿರಾವ್	40/-
21.	ರುಡಾಲಿ (ಕಾದಂಬರಿ) / ಮಹಾಶ್ವೇತಾದೇವಿ, ಅನು: ಎಚ್.ಎಸ್. ಶ್ರೀಮತಿ	25/-
22.	ಹಬ್ಬ ಮತ್ತು ಬಲಿ (ಕಥಾ ಸಂಕಲನ) / ಬಿ.ಟಿ. ಲಲಿತಾನಾಯಕ್	40/-
23.	ಮೈಸೂರ್ ಚಲೋ / ಡಾ. ಕೆ.ಎಸ್. ಉಮಾಪತಿ	40/-
24.	ನಮ್ಮೊಳಗಿನ ಬ್ರಹ್ಮಾಂಡ (ವೈಜ್ಞಾನಿಕ ಲೇಖನಗಳು) / ನಾಗೇಶ ಹೆಗಡೆ	70/-
25.	ವಿಮರ್ಶೆಯ ಪರಿಭಾಷೆ / ಓ.ಎಲ್. ನಾಗಭೂಷಣಸ್ವಾಮಿ	250/-
26.	ಕೆರೆಯಲಿ ಚಿನ್ನ, ಕೆರೆಯೇ ಚಿನ್ನ (ಮಕ್ಕಳ ಪುಸ್ತಕ) / ನಾಗೇಶ ಹೆಗಡೆ	40/-
27.	ಸಾಹಿತ್ಯ ಸಂಸ್ಕೃತಿ (ವಿಮರ್ಶೆ) / ನರಹಳ್ಳಿ ಬಾಲಸುಬ್ರಹ್ಮಣ್ಯ	125/-
28.	ನಮ್ಮ ಗ್ರಂಥಾಲಯಗಳು / ಡಾ. ಕೆ. ಎಸ್. ಉಮಾಪತಿ	60/-
29.	ನಾ ಮೆಚ್ಚಿದ ಪುಸ್ತಕ / ಸಂ. ಡಾ. ಕೆ. ಎಸ್. ಉಮಾಪತಿ	60/-
30.	ಮೊದಲ ತವರಿನ ಎರಡು ನಾಟಕಗಳು / ಸಂಧ್ಯಾ ಎಸ್.	40/-
31.	ಹತ್ತು ಮುಖದವರು / ಲಿಂಗರಾಜು	60/-
32.	ಜನಪದ ಗೀತೆಗಳು / ಎನ್. ಪ್ರಭಾ	40/-
33.	ನಗೆಪಾಟಲು (ನಗೆಹನಿಗಳು) / 'ಅಂಕಿತ'	30/-
34.	ಸಾಹಿತಿಗಳ ಸಂಗದಲ್ಲಿ (ಪರಿಷ್ಕೃತ-ವಿಸ್ತೃತ ಆವೃತ್ತಿ) / ದೇಜಗೌ	150/-
35.	ಶಾಲಾ ಗ್ರಂಥಾಲಯ / ಡಾ. ಕೆ. ಎಸ್. ಉಮಾಪತಿ	25/-
36.	ಮನೆ ಗ್ರಂಥಾಲಯ / ಡಾ. ಕೆ. ಎಸ್. ಉಮಾಪತಿ	20/-
37.	ಸಾರ್ವಜನಿಕ ಗ್ರಂಥಾಲಯ / ಡಾ. ಕೆ. ಎಸ್. ಉಮಾಪತಿ	20/-
38.	ಮುಯ್ಯಿಗೆ ಮುಯ್ಯಿ (ಕಾದಂಬರಿ) / ಅನಕೃ	40/-
39.	ಗತಿ, ಸ್ಥಿತಿ (ಕಾದಂಬರಿ) / ಗಿರಿ	50/-

44.	ಸಮಗ್ರ ಲಲಿತ ಪ್ರಬಂಧಗಳು / ಎ. ಎನ್. ಮೂರ್ತಿರಾವ್	150/-
45.	ವಿಶ್ವಕಪ್ ಕ್ರಿಕೆಟ್ / ಸತೀಶ್ ಚಪ್ಪರಿಕೆ	60/-
46.	ಮುದ್ದುರಾಜರುಗಳ ಪ್ರಸಂಗ (ನಾಟಕ) / ಡಿ. ಎ. ಶಂಕರ್	40/-
47.	ಅನರ್ಥಕೋಶ / ನಾ. ಕಸ್ತೂರಿ	40/-
48.	ಚೌ ಚೌ ಚೌಕಿ (ವಿಜ್ಞಾನ-ವಿನೋದ) / ಟಿ. ಆರ್. ಅನಂತರಾಮು, ಶರಣ ಬಸವೇಶ್ವರ ಅಂಗಡಿ	90/-
49.	ಶಿವ ಕರುಣಾಮಯ / ಉಮಾ ಶಿವಾನಂದ	80/-
50.	ಹೊಸಗನ್ನಡ ಸಾಹಿತ್ಯ ಚರಿತ್ರೆ / ಪ್ರೊ. ಎಲ್. ಎಸ್. ಶೇಷಗಿರಿರಾವ್	130/-
51.	ಯೂಲಿಸಿಸ್ಸಿನ ಸಾಹಸಗಳು / ಡಾ. ಕೆ. ಎಸ್. ಉಮಾಪತಿ	30/-
52.	ಒಂದು ಊರಿನ ಕತೆಗಳು / ಬರಗೂರು ರಾಮಚಂದ್ರಪ್ಪ	60/-
53.	ಮದುವೆಯ ಮೊದಲ ವರ್ಷ / ಪದ್ಮ ಮತ್ತು ಕೆ. ಎಸ್. ಉಮಾಪತಿ	60/-
54.	ತೆಂಬರೆ (ಕಾದಂಬರಿ) / ಎಂ. ವೀರಪ್ಪ ಮೊಯಿಲಿ	96/-
55.	ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ / ಎಂ. ಎಚ್. ಕೃಷ್ಣಯ್ಯ	90/-
56.	ಚಿತ್ರಪಟ, ಅಗ್ನಿವರ್ಣ, ಉರಿಯ ಉಯ್ಯಾಲೆ (ನಾಟಕಗಳು) / ಎಚ್.ಎಸ್. ವೆಂಕಟೇಶಮೂರ್ತಿ	40/-
57.	ನಟಸಾರ್ವಭೌಮ (ಕಾದಂಬರಿ) / ಅನಕೃ	200/-
58.	ಹೆರೋದೊತನ ಸಮರ ಕತೆಗಳು / ಅನು: ಡಾ. ಎಚ್.ವಿ. ರಂಗಾಚಾರ್	350/-
59.	ಗ್ರಾಮಾಯಣ (ಕಾದಂಬರಿ) / ರಾವಬಹಾದ್ದೂರ	150/-
60.	ಯಯಾತಿ (ಕಾದಂಬರಿ) / ವಿ.ಎಸ್. ಖಾಂಡೇಕರ್ ಅನು: ವಿ.ಎಂ. ಇನಾಂದಾರ್	150/-
61.	ಪದಸಂಚಯ (ಸಾದೃಶ್ಯಾರ್ಥಕ ಪದಕೋಶ) / ಪ್ರಕಾಶ್ ಮತ್ತು ಮಧುಸೂದನ	40/-
62.	ಊರುಕೇರಿ (ಆತ್ಮಕಥನ) / ಡಾ. ಸಿದ್ಧಲಿಂಗಯ್ಯ	45/-
63.	ಸೃಜನಕ್ರಿಯೆ ಮತ್ತು ಸಂವೇದನೆ (ವಿಮರ್ಶೆ) / ಡಾ. ಸುರೇಂದ್ರನಾಥ ಮಿಣಜಗಿ	80/-
64.	ಮೆರವಣಿಗೆ (ಇಲ್ಲಿಯವರೆಗಿನ ಕವನಗಳು) / ಡಾ. ಸಿದ್ಧಲಿಂಗಯ್ಯ	70/-
65.	ಅಳಿಲು ಸೇವೆ (ಹನಿಗವನಗಳು) / ಡುಂಡಿರಾಜ್	30/-
66.	ಹನಿಖಜಾನೆ (ಇಲ್ಲಿಯವರೆಗಿನ ಹನಿಗವನಗಳು) / ಡುಂಡಿರಾಜ್	95/-
67.	ಠಕ್ಕನೊಬ್ಬನ ಆತ್ಮಚರಿತ್ರೆ (ಕಾದಂಬರಿ) / ಅನು: ಎನ್.ಪಿ. ಶಂಕರನಾರಾಯಣರಾವ್	90/-
68.	ವೈಕುಂಠಕೆ ಬುಲಾವ್ (ನಗೆಬರಹಗಳು) / ಎಂ. ಎಸ್. ನರಸಿಂಹಮೂರ್ತಿ	70/-
69.	ಕಾವ್ಯ ಭಾಷೆ (ವಿಮರ್ಶೆ) / ಎಂ. ಎಚ್. ಕೃಷ್ಣಯ್ಯ	95/-
70.	ಉತ್ತರಭೂಪ / ಬೀchi	150/-
71.	ಇಹದ ಪರಿಮಳದ ಹಾದಿ (ವಿಮರ್ಶೆ) / ನರಹಳ್ಳಿ ಬಾಲಸುಬ್ರಹ್ಮಣ್ಯ	150/-
72.	ಯಾಪಿಲ್ಲು (ಕಾದಂಬರಿ) / ಕುಂ. ವೀರಭದ್ರಪ್ಪ	45/-
73.	ಬಡವರ ನಗುವಿನ ಶಕ್ತಿ (ಸಿದ್ಧಲಿಂಗಯ್ಯನವರ ಸಾಹಿತ್ಯ ಕುರಿತ ವಿಮರ್ಶೆ) ಸಂ: ದಂಡಪ್ಪ	150/-
74.	ಟಾಲ್‌ಸ್ಟಾಯ್ ಅವರ ಮಹಾಪ್ರಸ್ಥಾನ ಮತ್ತು ಇತರ ಕಥೆಗಳು / ಅನು: ಜಿ.ಎನ್.ಆರ್.	80/-
75.	ಸಂಸ್ಕೃತಿ, ಶ್ರಮ ಮತ್ತು ಸೃಜನಶೀಲತೆ (ವಿಮರ್ಶೆ) / ಬರಗೂರು ರಾಮಚಂದ್ರಪ್ಪ	330/-
76.	ಕಾಂಟೆಸಾದಲ್ಲಿ ಕಾವ್ಯ (ಕವನ ಸಂಕಲನ) / ಬರಗೂರು ರಾಮಚಂದ್ರಪ್ಪ	90/-
77.	ಮಹಿಳಾ ಅಧ್ಯಯನ / ನೇಮಿಚಂದ್ರ	80/-
78.	ಗಾಂಪರ ಗುಂಪು (ಹಾಸ್ಯ) / ದಾಶರಥಿ ದೀಕ್ಷಿತ್	80/-
79.	ಮರಳಿ ಮಠಕ್ಕೆ (ಹಾಸ್ಯ) / ದಾಶರಥಿ ದೀಕ್ಷಿತ್	70/-
80.	ಓ ಹೆನ್ರಿ ಕಥೆಗಳು / ಅನು: ಜಿ.ಎನ್. ರಂಗನಾಥ ರಾವ್	80/-
81.	ನೇಮಿಚಂದ್ರರ ಕಥೆಗಳು / ನೇಮಿಚಂದ್ರ	160/-
82.	ಪ್ರಾಸಂಗಿಕ ಪ್ರಬಂಧಗಳು (ವಿಮರ್ಶೆ) / ಎನ್. ಬಾಲಸುಬ್ರಹ್ಮಣ್ಯ	95/-
83.	ರಂಗಣ್ಣನ ಕನಸಿನ ದಿನಗಳು / ಎಂ.ಆರ್. ಶ್ರೀನಿವಾಸಮೂರ್ತಿ	90/-
84.	ಜ್ಞಾನರಥ (ಕಥೆಗಳು) ಸುಬ್ರಹ್ಮಣ್ಯ ಭಾರತಿ / ಅನು: ಬಿ.ಜಿ.ಎಲ್. ಸ್ವಾಮಿ	70/-
85.	ಕೈಲಾಸಂ Jokಸ್ಗೂ ... Sonಗ್ಸೂ ... (ನಗೆ ಹನಿಗಳು) / ಬಿ. ಎಸ್. ಕೇಶವರಾವ್	40/-
86.	ಅಡವಿ (ಕಾದಂಬರಿ) / ಮಾಸ್ತಿ ಕೆ. ಆರ್. ಕೃಷ್ಣಪ್ಪ	90/-
87.	ಅವತಾರಗಳು / ಡಾ. ಸಿದ್ಧಲಿಂಗಯ್ಯ	60/-
88.	ಆಧುನಿಕ ಕನ್ನಡ ನಾಟಕ (ವಿಮರ್ಶೆ) / ಡಾ. ಕೆ. ಮರುಳಸಿದ್ದಪ್ಪ	250/-

89. ಪಕೋಡ ಪ್ರಿಯ (ಹಾಸ್ಯ) / ದಾಶರಥಿ ದೀಕ್ಷಿತ್ 50/-
90. ಆಫ್ ದಿ ರೆಕಾರ್ಡ್ / ಬೋನಂತಾಯ ಹರಿಶ್ಚಂದ್ರಭಟ್ 80/-
91. ಕರಗ ಸಂಪ್ರದಾಯ / ಡಾ। ಎಂ. ಸುಮಿತ್ರ 90/-
92. ಪುರಂದರದಾಸರ ಜನಪ್ರಿಯ ಕೀರ್ತನೆಗಳು / ಸಂ: ಶ್ರೀನಿವಾಸ ಹಾವನೂರ, ಹೊ.ರಾ.ಸ. 90/-
93. ಬೇರು (ಕಥಾಸಂಕಲನ) / ಸತೀಶ್ ಚಪ್ಪರಿಕೆ 80/-
94. ಕನ್ನಡಾಭಿಮಾನ / ಬರಗೂರು ರಾಮಚಂದ್ರಪ್ಪ 25/-
95. ಚೌಕಟ್ಟಿನಿಂದ ಹೊರಬಂದ ಚಿತ್ರಗಳು (ಕಥಾ ಸಂಕಲನ) ವಿವಿಧ ಲೇಖಕರು 80/-
96. ಬೆಳುದಿಂಗಳಲ್ಲಿ ಅರಳಿದ ಮೊಲ್ಲೆ / ಬಿ.ಜಿ.ಎಲ್. ಸ್ವಾಮಿ 120/-
97. ನೋಟ ನಿಲುವು (ಯುರೋಪ್ ಪ್ರವಾಸ ಕಥನ) / ಕೆ. ಮರುಳಸಿದ್ಧಪ್ಪ 95/-
98. ಸಾವಿರಾರು ಕೀರ್ತನೆಗಳು / ಸಂ: ಪ್ರೊ. ಎ. ವಿ. ನಾವಡ, ಡಾ. ಗಾಯತ್ರಿ ನಾವಡ 295/-
99. ರೋಮಿಯೊ ಜೂಲಿಯೆಟ್ / ಷೇಕ್ಸ್‌ಪಿಯರ್/ ಅನು: ಜಿ. ಎನ್. ರಂಗನಾಥ ರಾವ್ 95/-
100. ವ್ಯಾಸರಾಯ ಬಲ್ಲಾಳರ ಸಮಗ್ರ ಕಥೆಗಳು 395/-
101. ಪಾಪು ಪದ್ಯಗಳು / ಎನ್. ಶ್ರೀನಿವಾಸ ಉಡುಪ 20/-
102. ಸ್ನಾನ (ಮೂರು ಮಿನಿ ಕಾದಂಬರಿಗಳು) / ಎಂ. ವ್ಯಾಸ 80/-
103. ಬ್ರಾಹ್ಮಣರೇನು ಮಾಡಬೇಕು? / ಪಾ. ವೆಂ. ಆಚಾರ್ಯ 95/-
104. ಬೀಚಿ ಬುಲೆಟ್ಸು, ಬಾಂಬ್ಸು: ಭಗವದ್ಗೀತೆ / ಸಂ. ಬಿ. ಎಸ್. ಕೇಶವರಾವ್ 90/-
105. ಕಲಸುಮೇಲೋಗರ (ಪ್ರಬಂಧಗಳು) / ಡಾ। ಎಚ್. ಕೆ. ನಂಜುಂಡಸ್ವಾಮಿ 80/-
106. ದಾಶರಥಿ ದೀಕ್ಷಿತರ ಆಯ್ದ ನಗೆಬರಹಗಳು / ಸಂ. ವೈ. ಎನ್. ಗುಂಡೂರಾವ್ 80/-
107. ನಗೆ ಕೊರೆವಣಿಗೆ / ಸಂ. ಎಸ್. ರಾಮಮೂರ್ತಿ 70/-
108. ಸನ್ಮಾನ ಸುಖ ಮತ್ತು ಇತರ ನಗೆ ನಾಟಕಗಳು / ಎಂ. ಎಸ್. ನರಸಿಂಹಮೂರ್ತಿ 30/-
109. ಕಿವುಡು ಸಾರ್ ಕಿವುಡು ಮತ್ತು ಇತರ ನಗೆ ನಾಟಕಗಳು / ಎಂ.ಎಸ್. ನರಸಿಂಹಮೂರ್ತಿ 30/-
110. ಕುವೆಂಪು ನಾಟಕಗಳ ಅಧ್ಯಯನ / ನರಹಳ್ಳಿ ಬಾಲಸುಬ್ರಹ್ಮಣ್ಯ 80/-
111. ಹಾಸ್ಯಾವತಾರ / ಎಸ್. ಎನ್. ಶಿವಸ್ವಾಮಿ 35/-
112. ಏಕಲವ್ಯ (ನಾಟಕ) / ಡಾ। ಸಿದ್ಧಲಿಂಗಯ್ಯ 25/-
113. ಕರೆ (ಕಥಾ ಸಂಕಲನ) ವಿವಿಧ ಲೇಖಕರು 95/-
114. ಕಂಸಾಯಣ, ಊರ್ಮಿಳಾ, ಮಂಥರಾ (ನಾಟಕ) / ಎಚ್. ಎಸ್. ವೆಂಕಟೇಶಮೂರ್ತಿ 90/-
115. ಆ್ಯಂಟನಿ-ಕ್ಲಿಯೋಪಾಟ್ರ (ನಾಟಕ)/ ವಿಲಿಯಂ ಷೇಕ್ಸ್‌ಪಿಯರ್ / ಅನು: ಜಿ.ಎನ್. ರಂಗನಾಥ ರಾವ್ 120/-
116. ನುಡಿ ಮಾಣಿಕ್ಯ / ಕೆ. ಎಸ್. ಉಮಾಪತಿ 450/-
117. ಬೆಳ್ಳಿ ತೇರಿನ ದಾರಿ (ಕಣವಿ ಕಾವ್ಯದ ಅನುಸಂಧಾನ) / ಸಂ. ಜಿ.ಎಸ್. ಕಾಪಸೆ, ಜಿ.ಎಂ. ಹೆಗಡೆ 450/-
118. ಮಹಾಕಾವ್ಯ ಪರಂಪರೆ ಮತ್ತು ಇತರ ಲೇಖನಗಳು / ದೇಜಗೌ 95/-
119. ಜಯಂತ ಕಾಯ್ಕಿಣಿ ಕಥೆಗಳು 170/-
120. ದೀಪ ಸಾಲಿನ ನಡುವೆ / ಕೆ. ಎಸ್. ನರಸಿಂಹಸ್ವಾಮಿ 35/-
121. ಸ್ಕಲ್‌ಮಂತ್ರ (ಕಾದಂಬರಿ) / ಅನು: ಬೇಳೂರು ಸುದರ್ಶನ್ 170/-
122. ಸಂಧ್ಯಾರಾಗ / ಅ.ನ.ಕೃ 70/-
123. ಕಾಯೋ-ಕಲ್ಪ ಮತ್ತು ಇತರ ನಾಟಕಗಳು / ಎಚ್. ಡುಂಡಿರಾಜ್ 80/-
124. ಕೊರಿಯಪ್ಪನ ಕೊರಿಯೋಗ್ರಫಿ ಮತ್ತು ಇತರ ನಗೆ ನಾಟಕಗಳು / ಎಚ್. ಡುಂಡಿರಾಜ್ 70/-
125. ಕನಕದಾಸರ ಜನಪ್ರಿಯ ಕೀರ್ತನೆಗಳು / ಸಂ. ಹೊ.ರಾ. ಸತ್ಯನಾರಾಯಣರಾವ್ 90/-
126. ಅಭಿನವ (ಕಾದಂಬರಿ) / ಸತ್ಯಕಾಮ 120/-
127. ಅಶ್ವಘೋಷ (ಕಾದಂಬರಿ) / ಸತ್ಯಕಾಮ 60/-
128. ವಿಜ್ಞಾನ-ಭೈರವ (ಕಾದಂಬರಿ) / ಸತ್ಯಕಾಮ 80/-
129. ಋಷಿಪಂಚಮಿ (ಕಾದಂಬರಿ) / ಸತ್ಯಕಾಮ 60/-
130. ಹಾಡು - ಹಸೆ / ಕೆ. ಎಸ್. ನರಸಿಂಹಸ್ವಾಮಿ ಅವರ ಆಯ್ದ ಭಾವಗೀತೆಗಳು 95/-
131. ತಲೆಗೊಂದು ತರತರ (ಹಾಸ್ಯ ಪ್ರಬಂಧಗಳು) / ಶ್ರೀನಿವಾಸ ವೈದ್ಯ 90/-
132. ರುಚಿಗೆ ಹುಳಿಯೊಗರು (ಹಾಸ್ಯ ಪ್ರಬಂಧಗಳು) / ಶ್ರೀನಿವಾಸ ವೈದ್ಯ 60/-
133. ಹಾಸ್ಯಾಂಬರ / ಸಂ. ವೈ. ಎನ್. ಗುಂಡೂರಾವ್ 90/-
134. ವೀರಪ್ಪನ್ (ನರಹಂತಕನ ರುದ್ರ ನರ್ತನ) / ಟಿ. ಗುರುರಾಜ್ 130/-
135. ನನ್ನ ಪ್ರೀತಿಯ ವೈಯೆನ್ಕೆ / ವಿಶ್ವೇಶ್ವರಭಟ್ 50/-
136. ವೈಯೆನ್ಕೆ ಅವರ ಬೆಸ್ಟ್ ಆಫ್ ವಂಡರ್ಸ್ / ಸಂ. ವಿಶ್ವೇಶ್ವರಭಟ್ 130/-

137. ಕುವೆಂಪು ಕಾವ್ಯ (ಸಂಸ್ಕೃತಿ ಚರಿತ್ರೆಯ ರೂಪಕ) / ನರಹಳ್ಳಿ ಬಾಲಸುಬ್ರಹ್ಮಣ್ಯ 95/-
138. ಡಾ। ಸಿದ್ಧಲಿಂಗಯ್ಯನವರ ಸದನದ ಭಾಷಣಗಳು / ಸಂ. ದೊಡ್ಡಹುಲ್ಲೂರು ರುಕ್ಕೋಜಿ 170/-
139. ಪರಂಪರೆಯೊಂದಿಗೆ ಪಿಸುಮಾತು / ಬರಗೂರು ರಾಮಚಂದ್ರಪ್ಪ 70/-
140. ರ್ಝೂನ್ ಕಥೆಗಳು / ಜಿ. ಎನ್. ರಂಗನಾಥ ರಾವ್ 90/-
141. ಎ.ಎನ್. ಮೂರ್ತಿರಾಯರ ಆಯ್ದ ಲಲಿತಪ್ರಬಂಧಗಳು 30/-
142. ಅಕ್ಷತಾ ಲಕ್ಷತಾ / ಎಚ್. ಡುಂಡಿರಾಜ್ 70/-
143. ಆಸ್ಫೋಟ (ನಾಟಕ) / ಟಿ. ಎನ್. ಸೀತಾರಾಂ 30/-
144. ವ್ಯಾಸರಾಯಬಲ್ಲಾಳರ ಆಯ್ದ ಕತೆಗಳು 30/-
145. ಉರಿಯ ಉಯ್ಯಾಲೆ (ನಾಟಕ) / ಎಚ್.ಎಸ್. ವೆಂಕಟೇಶಮೂರ್ತಿ 25/-
146. ದೇಶೀಯ ಚಿಂತನ / ಡಾ। ಚಂದ್ರಶೇಖರ ಕಂಬಾರ 295/-
147. ಬಾಮಣ್ (ಕಾದಂಬರಿ) / ನಾ. ಡಿಸೋಜ 80/-
148. ಸ್ವತಂತ್ರ (ಅನುಭವ ಕಥನ) / ಸತ್ಯಕಾಮ 130/-
149. ತಾಜಮಹಲ್ (ಕಥಾ ಸಂಕಲನ) / ಸಂ: ವಿಶ್ವೇಶ್ವರ ಭಟ್, ಪ್ರಕಾಶ್ ಕಂಬತ್ತಳ್ಳಿ 80/-
150. ಸ್ವಾತಂತ್ರ್ಯೋತ್ತರ ಕನ್ನಡ ಕಥಾಲೋಕ / ಸಂ. ಜಿ. ಎಸ್. ಆಮೂರ 350/-
151. ಅರವತ್ತು ಮೀರಿದ ಬದುಕು: ಮನದೊಳೇನೋ ಅಳುಕು (ಆರೋಗ್ಯ) / ಅನು: ಡಾ। ಕೇಶವಮೂರ್ತಿ 50/-
152. ಮೌಖಿಕ ಇತಿಹಾಸ / ಡಾ। ವಸು 60/-
153. ಬೆಸ್ಟ್ ಆಫ್ ಸುನಂದಮ್ಮ (ನಗೆಬರಹಗಳು) / ಟಿ. ಸುನಂದಮ್ಮ 90/-
154. ವಕ್ರತುಂಡೋಕ್ತಿ / ವಿಶ್ವೇಶ್ವರ ಭಟ್ 80/-
155. ನದೀತೀರದಲ್ಲಿ / (ಕವನ ಸಂಕಲನ) / ಎಚ್.ಎಸ್. ವೆಂಕಟೇಶಮೂರ್ತಿ 60/-
156. ತೊಟ್ಟಿಲು (ಕಾದಂಬರಿ) / ಮೊಗಳ್ಳಿ ಗಣೇಶ್ 120/-
157. ಗಾನ್ ವಿದ್ ದ ವಿಂಡ್ (ಕಾದಂಬರಿ) / ಅನು: ಶ್ಯಾಮಲಾ ಮಾಧವ 250/-
158. ಶಬರಿ (ಕಾದಂಬರಿ) / ಬರಗೂರು ರಾಮಚಂದ್ರಪ್ಪ 150/-
159. ಕೈಪಿಡಿ ಸಹಿತ ಕನ್ನಡ ಕಲಿಕಾ ಮಾದರಿಗಳು / ಶಿವಾನಂದ ಹೊಂಬಳ 200/-
160. ಭಾರತದ ಕುರುಬರು / ಡಾ। ಶ್ಯಾಂಸಿಗ್ ಶಶಿ / ಅನುವಾದ: ಡಾ. ಬಿ.ಕೆ. ರವಿ 90/-
161. ಕಾವ್ಯ ಸಂವಾದ / ಜಿ. ಎಸ್. ಶಿವರುದ್ರಪ್ಪ 90/-
162. ತೂಫಾನ್ ಮೇಲ್ (ಕಥಾ ಸಂಕಲನ) / ಜಯಂತ ಕಾಯ್ಕಿಣಿ 60/-
163. ನಮ್ಮೊಳಗೊಬ್ಬ ನಾಜೂಕಯ್ಯ, ಬದುಕ ಮನ್ನಿಸು ಪ್ರಭುವೆ, ಆಸ್ಫೋಟ (ನಾಟಕಗಳು) / ಟಿ. ಎನ್. ಸೀತಾರಾಂ 120/-
164. ಗ್ರಾಮದೇವತೆಗಳು (ಜಾನಪದೀಯ ಅಧ್ಯಯನ) / ಡಾ. ಸಿದ್ಧಲಿಂಗಯ್ಯ 200/-
165. ಪತ್ರಿಕೋದ್ಯಮ ಕುರಿತು ಓಶೋ / ವಿಶ್ವೇಶ್ವರ ಭಟ್ 40/-
166. ಮೇಘದೂತ / ಅನು: ಬಿ. ಗೋಪಾಲರಾವ್ 150/-
167. ಸ್ವರಸಂಯೋಜನೆ ಸಹಿತ ಶ್ರೀಪುರಂದರದಾಸರ ಕೃತಿಗಳು / ವಿದ್ವಾನ್ ಸಿ.ಕೆ. ಶಂಕರನಾರಾಯಣರಾವ್ 120/-
168. ಮಾತು-ಕ(ವಿ)ತೆ / ಎಚ್. ಡುಂಡಿರಾಜ್ 95/-
169. ನನ್ನ ವೃತ್ತಿಜೀವನದ ನೆನಪುಗಳು / ಸರ್. ಎಂ. ವಿಶ್ವೇಶ್ವರಯ್ಯ ಅನು: ಗಜಾನನ ಶರ್ಮ 90/-
170. ಅಘೋರಿಗಳ ನಡುವೆ / ಮೂಲ: ಸುರೇಶ್ ಸೋಮಪುರ ಅನು: ಎಂ.ವಿ. ನಾಗರಾಜರಾವ್ 90/-
171. ಕೈಲಾಸಂ ಕನ್ನಡ ನಾಟಕಗಳು / ಸಂ. ಬಿ. ಎಸ್. ಕೇಶವರಾವ್ 295/-
172. ಏರಿಳಿತದ ದಾರಿಯಲ್ಲಿ / ಸುಧಾ ಮೂರ್ತಿ 80/-
173. ಸರ್ ಎಂ. ವಿಶ್ವೇಶ್ವರಯ್ಯ (ಜೀವನ-ಸಾಧನೆ) / ತಿ.ತಾ. ಶರ್ಮ 70/-
174. ಸುಬ್ಬಾಭಟ್ಟರ ಮಗಳೇ... (ಭಾವಗೀತೆಗಳು) / ಬಿ.ಆರ್. ಲಕ್ಷ್ಮಣರಾವ್ 95/-
175. ನಮ್ಮೊಳಗಿನ ಆಕಾಶ (ವೈಚಾರಿಕ ಲೇಖನಗಳು) / ಕೆ.ಟಿ. ಗಟ್ಟಿ 70/-
176. ರಾಗ-ರಂಗು (ಭಾವಗೀತೆಗಳು) / ಡಾ. ದೊಡ್ಡರಂಗೇಗೌಡ 95/-
177. ಮತ್ತೊಬ್ಬನ ಸಂಸಾರ (ಕಥಾ ಸಂಕಲನ) / ವಿವೇಕ ಶಾನಭಾಗ 60/-
178. ಕೈಲಾಸಂ ಕಥೆಗಳು / ಟಿ.ಪಿ. ಕೈಲಾಸಂ 30/-
179. ಬೆಸ್ಟ್ ಆಫ್ ಕಸ್ತೂರಿ (ನಾ. ಕಸ್ತೂರಿಯವರ ಹಾಸ್ಯಬರಹಗಳು) /ಸಂ.: ವೈ.ಎನ್. ಗುಂಡೂರಾವ್ 95/-
180. ರಕ್ತದ ಕಾಯಿಲೆಗಳು / ಡಾ। ಎಚ್. ಗಿರಿಜಮ್ಮ 50/-
181. ಬೃಹದಾರಣ್ಯಕ / ಬಿ.ಜಿ.ಎಲ್. ಸ್ವಾಮಿ 40/-
182. ಸುರಪಾಲನ ವೃಕ್ಷಾಯುರ್ವೇದ / ಅನು: ಆರ್.ಪಿ. ಹೆಗಡೆ 60/-
183. ಶ್ರೀ ರಾಮಕೃಷ್ಣ ಪರಮಹಂಸರ ಮಾತುಕತೆಗಳು / ಸಾ.ಕೃ. ರಾಮಚಂದ್ರರಾವ್ 60/-
184. ದರ್ಶನಪ್ರಬಂಧ / ಸಾ.ಕೃ. ರಾಮಚಂದ್ರರಾವ್ 60/-

ವಿದ್ಯಾಲಂಕಾರ ಪ್ರೊ। ಸಾ. ಕೃ. ರಾಮಚಂದ್ರರಾಯರು ಈ ತಲೆಮಾರಿನ ವಿಖ್ಯಾತ ವಿದ್ವಾಂಸರು. ನಮ್ಮ ಪ್ರಾಚೀನ ವಿದ್ಯಾಪರಂಪರೆಯನ್ನು ನವೀನ ಸಂಶೋಧಕ ದೃಷ್ಟಿಯೊಡನೆ ಸಮನ್ವಯಿಸಿ ಮುಂದುವರಿಸುತ್ತಿರುವುದು ಅವರ ವಿಶಿಷ್ಟವಾದ ಸಾಧನೆ. ಸಂಸ್ಕೃತ, ಪಾಲಿ, ಅರ್ಧಮಾಗಧಿ ಮತ್ತು ಅನೇಕ ಸಮಕಾಲೀನ ಭಾರತೀಯ ಭಾಷೆಗಳಲ್ಲಿ ಪಾರಂಗತರಾದ ಅವರು ಟಿಬೆಟ್ ದೇಶದ ಮತ್ತು ಅನೇಕ ಐರೋಪ್ಯ ಭಾಷೆಗಳನ್ನೂ ಬಲ್ಲರು. ವೇದಾಂತ, ಬೌದ್ಧ, ಜೈನ ದರ್ಶನಗಳಲ್ಲದೆ ಭಾರತೀಯ ಸಂಸ್ಕೃತಿ ಕಲೆ ಸಾಹಿತ್ಯಗಳ ಪ್ರಪಂಚದಲ್ಲಿಯೂ ಬಹುಶ್ರುತರಾದ ಗ್ರಂಥಕರ್ತರಾಗಿದ್ದಾರೆ. ಶೈವ, ವೈಷ್ಣವ ಮತ್ತು ಶಾಕ್ತ ಆಗಮಗಳ ಸೂಕ್ಷ್ಮ ಪ್ರಭೇದಗಳನ್ನೆಲ್ಲ ತಿಳಿದವರು.

ಮೇಧಾವಿತನ, ಪಾಂಡಿತ್ಯ, ಬಹುಶ್ರುತತ್ವಗಳಿಗೆ ಮತ್ತೊಂದು ಹೆಸರು ಪ್ರೊ। ಸಾ. ಕೃ. ರಾಮಚಂದ್ರರಾಯರದು.



ರೂ.60/-

ಅಂಕಿತ ಪುಸ್ತಕ
(ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು)
53, ಗಾಂಧಿಬಜಾರ್ ಮುಖ್ಯರಸ್ತೆ
ಬಸವನಗುಡಿ, ಬೆಂಗಳೂರು- 560 004
☎ 26617100,26617755 (O) 26526134 (R)

224